ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 11 ಮಂಗಳವಾರ 2022

ಸಂಪುಟ: 43 | ಸಂಚಿಕೆ: 175 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ರಾಹುಲ್ ಗಾಂಧಿ ಏಕತಾ ಯಾತ್ರೆಗೆ ಸೆಡ್ಡು

ಇಂದಿನಿಂದ ಬಿಜೆಪಿ ವಿಜಯ ಯಾತ್ರೆ

- ಮಾಜಿ ಸಿಎಂ ಯಡಿಯೂರಪ್ಪ ನೇತೃತ್ವ
- ಕಾಂಗ್ರೆಸ್ ಯಾತ್ರೆಗೆ ಮುನ್ನವೇ ಹೈದರಾಬಾದ್–ಕರ್ನಾಟಕದಲ್ಲಿ ವಿಜಯ ಯಾತ್ರೆ
- ಲಿಂಗಾಯತ ಮತ ಹಿಡಿದಿಟ್ಟುಕೊಳ್ಳಲು ಎರಡು ದಿನ ಪ್ರವಾಸ
- ವರ್ಷಾಂತ್ಯಕ್ಕೆ ಪಕ್ಷದ ರಾಜ್ಯಾಧ್ಯಕ್ಷ ಕಟೀಲ್, ಅರುಣ್ ಸಿಂಗ್ ನೇತೃತ್ವದಲ್ಲಿ 50 ವಿಧಾನಸಭಾ ಕ್ಷೇತ್ರದಲ್ಲಿ ಯಾತ್ರೆ



ಬೆಂಗಳೂರು, ಅ.10 (ಕೆಎಂಶಿ)– ರಾಹುಲ್ ಗಾಂಧಿ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷ ನಡೆಸಿರುವ ಭಾರತ್ ಜೋಡೋ ಯಾತ್ರೆಗೆ ಸೆಡ್ಡು ಹೊಡೆಯಲು ಮುಂದಾಗಿರುವ ಬಿಜೆಪಿ, ನಾಳೆಯಿಂದ ವಿಜಯ ಯಾತ್ರೆ ಹಮ್ಮಿಕೊಂಡಿದೆ.

ಯಾತ್ರೆಯ ನಾಯಕತ್ವವನ್ನು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ವಹಿಸಲಿದ್ದು, ಇವರ ಮಾರ್ಗದರ್ಶನದಲ್ಲಿ ಎರಡು ತಂಡಗಳು ರಾಜ್ಯದ 157 ಕ್ಷೇತ್ರಗಳಲ್ಲಿ ಯಾತ್ರೆ ಮಾಡಲಿವೆ.

ರಾಹುಲ್‌ಗಾಂಧಿ ಅವರ ಭಾರತ್ ಜೋಡೋ ಯಾತ್ರೆ ಹೈದರಾಬಾದ್–ಕರ್ನಾಟಕಕ್ಕೆ ಕಾಲಿಡುವ ಮುನ್ನವೇ ಬಿಜೆಪಿಯ ವಿಜಯ ಯಾತ್ರೆ ಆ ಭಾಗದಲ್ಲಿ ಸಂಚರಿಸಲಿದೆ. ಯಡಿಯೂರಪ್ಪ ಹಾಗೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಮೊದಲನೇ ತಂಡ ನಾಳೆಯಿಂದ ಎರಡು ದಿನಗಳ ಕಾಲ ಬಳ್ಳಾರಿ, ವಿಜಯನಗರ, ಕೊಪ್ಪಳ ಹಾಗೂ ರಾಯಚೂರು ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಪಕ್ಷ ಸಂಘಟನೆ ಮತ್ತು ಸಾರ್ವಜನಿಕ ಸಭೆಗಳನ್ನು ನಡೆಸಲಿದ್ದಾರೆ. ಯಡಿಯೂರಪ್ಪ ನೇತೃತ್ವದಲ್ಲಿ ಕೈಗೊಳ್ಳುತ್ತಿರುವ ವಿಜಯ ಯಾತ್ರೆಯು 50 ಕ್ಷೇತ್ರಗಳಲ್ಲಿ ಪರಿಶಿಷ್ಟ ಜಾತಿ, ಪಂಗಡಕ್ಕೆ ಸೇರಿದ ಮತದಾರರು ಹೆಚ್ಚಿದ್ದು, ಈ ಕ್ಷೇತ್ರಗಳಲ್ಲಿ ಲಿಂಗಾಯತರ ಮತಗಳೇ ಚುನಾವಣೆಯಲ್ಲಿ ನಿರ್ಣಾಯಕವಾಗಲಿವೆ.

ಇಂತಹ ಕ್ಷೇತ್ರಗಳಲ್ಲಿ ಲಿಂಗಾಯತ ಮತಗಳನ್ನು ಹಿಡಿದಿಟ್ಟುಕೊಳ್ಳುವುದು ಮತ್ತು ಆ ಸಮಾಜದಲ್ಲಿ ಪಕ್ಷದ ವಿರುದ್ಧ ಇರುವ ಅಸಮಾಧಾನ ಹೋಗಲಾಡಿಸಲು ಇದೇ ಸಮಾಜಕ್ಕೆ ಸೇರಿದ ಯಡಿಯೂರಪ್ಪ, ಬೊಮ್ಮಾಯಿ ಮೊದಲ ಹಂತದ ವಿಜಯ ಯಾತ್ರೆ ಆರಂಭಿಸಿದ್ದಾರೆ. ಪರಿಶಿಷ್ಟ ಸಮುದಾಯಕ್ಕೆ ಮೀಸಲಾತಿ ಪ್ರಮಾಣವನ್ನು ಹೆಚ್ಚಳ ಮಾಡಿದ ನಂತರ ಪರಿಶಿಷ್ಟ ವರ್ಗದವರೇ ಹೆಚ್ಚಿರುವ ಭಾಗದಲ್ಲೇ ಈ ಪ್ರವಾಸ ಕೈಗೊಳ್ಳಲಾಗುತ್ತಿದೆ. ಸರ್ಕಾರ ತೆಗೆದುಕೊಂಡ ತೀರ್ಮಾನವನ್ನು ಮುಂದಿನ ವಿಧಾನಸಭಾ ಚುನಾವಣೆಗೆ ರಾಜಕೀಯವಾಗಿ ಲಾಭ ಪಡೆದುಕೊಳ್ಳಲು ಬಿಜೆಪಿ ಈ ದಾಳವನ್ನು ಬಳಸಿಕೊಂಡಿದೆ. ಮಂಗಳವಾರ ಮಧ್ಯಾಹ್ನ ಎರಡು ಗಂಟೆಗೆ ರಾಯಚೂರು ಜಿಲ್ಲೆಯ ಗಿಲೇಸುಗೂರಿನಲ್ಲಿ ಪಕ್ಷ ಬೃಹತ್ ಸಮಾವೇಶ ಆಯೋಜಿಸಿದ್ದು, ಅಕ್ಟೋಬರ್ ಹನ್ನೆರಡರ ಬುಧವಾರ ಬೆಳಿಗ್ಗೆ 11.30ಕ್ಕೆ ಬಳ್ಳಾರಿ ಜಿಲ್ಲೆ ಹೊಸಪೇಟೆಯ ಜಿಲ್ಲಾ ಕ್ರೀಡಾಂಗಣದಲ್ಲಿ ಸಮಾವೇಶ ಆಯೋಜಿಸಿದೆ. ಬುಧವಾರ ಮಧ್ಯಾಹ್ನ ಮೂರು ಗಂಟೆಗೆ ಕೊಪ್ಪಳ ಜಿಲ್ಲೆಯ ಕುಷ್ಟಗಿಯಲ್ಲಿ ಸಮಾವೇಶ ಆಯೋಜನೆಯಾಗಿದ್ದು ಈ ಯಾತ್ರೆಯ ಮೂಲಕ ದಲಿತ,ಲಿಂಗಾಯತ ಮತಗಳ ಕ್ರೋಢೀ ಕರಣಕ್ಕೆ ಬಿಜೆಪಿ ಯತ್ನಿಸಲಿದೆ ಅಲ್ಲದೆ ಈ ನಾಲ್ಕು ಜಿಲ್ಲೆಗಳಲ್ಲಿ ಮುಖಂಡರ ಸಭೆಗಳನ್ನು ಕರೆದು ಉಭಯ ನಾಯಕರು ಸಂಘಟನೆ ಬಗ್ಗೆ ಮತ್ತು ಮುಂಬರುವ ಚುನಾವಣಾ ಸಿದ್ಧತೆ ಬಗ್ಗೆ ಚರ್ಚೆ ನಡೆಸಲಿದ್ದಾರೆ. ಕಳೆದ ನಾಲ್ಕು ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿ ರಾಜ್ಯದ ನೂರಾ ಐವತ್ತೇಳು ಕ್ಷೇತ್ರಗಳಲ್ಲಿ ಒಂದಲ್ಲ, ಒಂದು ಭಾರಿ ಗೆಲುವು ಸಾಧಿಸಿದ್ದು, ಮೊದಲ ಹಂತದಲ್ಲಿ ಈ ನೂರಾ ಐವತ್ತೇಳು ಕ್ಷೇತ್ರಗಳ ಮೇಲೆ ಗಮನ ಹರಿಸಲು ತೀರ್ಮಾನಿಸಲಾಗಿದೆ. ಸದ್ಯಕ್ಕೆ ಬೊಮ್ಮಾಯಿ ಮತ್ತು ಯಡಿಯೂರಪ್ಪ ಅವರ ನೇತೃತ್ವದಲ್ಲಿ ಒಂದು ತಂಡವನ್ನು ರಚಿಸಲಾಗಿದ್ದು ಈ ವರ್ಷಾಂತ್ಯದೊಳಗೆ ಅದು ರಾಜ್ಯದ ಐವತ್ತು ವಿಧಾನಸಭಾ ಕ್ಷೇತ್ರಗಳಲ್ಲಿ ಸಂಚರಿಸಲಿದೆ. ಇದೇ ರೀತಿ ಪಕ್ಷದ ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಮತ್ತು ಉಸ್ತುವಾರಿ ಅರುಣ್ ಸಿಂಗ್ ನೇತೃತ್ವದಲ್ಲಿ ರಚಿಸಲಾಗಿರುವ ಮತ್ತೊಂದು ತಂಡ ಕೂಡ ಈ ವರ್ಷಾಂತ್ಯದೊಳಗೆ ರಾಜ್ಯದ ಐವತ್ತು ವಿಧಾನಸಭಾ ಕ್ಷೇತ್ರಗಳಲ್ಲಿ ಸಂಚರಿಸಲಿದೆ.

ಮತ್ತೆರಡು ದಿನ ದಸರಾ ದೀಪಾಲಂಕಾರ ವಿಸ್ತರಣೆ



ಮೈಸೂರು,ಅ.10(ಎಸ್‌ಬಿಡಿ)– ಮೈಸೂರಿನ ಹೃದಯಭಾಗ ಹಾಗೂ ಪ್ರಮುಖ ರಸ್ತೆಗಳ ವಿದ್ಯುತ್ ದೀಪಾಲಂಕಾರವನ್ನು ಮತ್ತೆರಡು ದಿನ ವಿಸ್ತರಿಸಲಾಗಿದ್ದು, ಅ.12ರ ವರೆಗೆ ಬೆಳಕಿನ ಸೊಬಗನ್ನು ಕಣ್ತುಂಬಿಕೊಳ್ಳಬಹುದಾಗಿದೆ. ದಸರಾ ದೀಪಾಲಂಕಾರದ ಅವಧಿಯನ್ನು ವಿಜಯದಶಮಿವರೆಗೆ ನಿಗದಿಪಡಿಸಲಾಗಿತ್ತಾದರೂ ಉದ್ಯಮಿಗಳು, ಸಾರ್ವಜನಿಕರ ಅಪೇಕ್ಷೆ ಮೇರೆಗೆ ಇಂದಿನವರೆಗೆ(ಅ.10) ವಿಸ್ತರಿಸಲಾಗಿತ್ತು. ಆದರೆ ಮತ್ತಷ್ಟು ದಿನ ದೀಪಾಲಂಕಾರ ಉಳಿಸಿಕೊಳ್ಳಬೇಕೆಂಬುದು ಜನಪ್ರತಿನಿಧಿಗಳು, ಸಾರ್ವಜನಿಕರು, ವ್ಯಾಪಾರಿಗಳ ಒತ್ತಾಸೆಯಾಗಿರುವ ಕಾರಣ ಸೆಸ್ಕ್‌ಗೆ ಹೆಚ್ಚುವರಿ ಆರ್ಥಿಕ ಹೊರೆಯಾದರೂ ನಗರದ ▸ 5ನೇ ಪುಟಕ್ಕೆ


ಮೈಸೂರು ವಿವಿ ಇನ್ನು ಮೈಸೂರು ಜಿಲ್ಲೆಗೆ ಸೀಮಿತ

- ಮಂಡ್ಯ, ಹಾಸನ, ಕೊಡಗು, ಚಾ.ನಗರಕ್ಕೆ ಪ್ರತ್ಯೇಕ ವಿವಿ ಮೂಲಕ ಶೈಕ್ಷಣಿಕ ಚಟುವಟಿಕೆ
- ಸಚಿವ ಸಂಪುಟದಲ್ಲಿ ಹೊಸ ವಿಶ್ವವಿದ್ಯಾನಿಲಯಗಳ ಶೈಕ್ಷಣಿಕ ವ್ಯಾಪ್ತಿಗೆ ಅನುಮೋದನೆ; ಸದ್ಯದಲ್ಲೇ ಅಧಿಸೂಚನೆ ಜಾರಿ



ಮೈಸೂರು, ಅ. 10(ಆರ್‌ಕೆ)– ಶತಮಾನದ ಇತಿಹಾಸವುಳ್ಳ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿ ಇನ್ನು ಮೈಸೂರು ನಗರ ಮತ್ತು ಜಿಲ್ಲೆಗಷ್ಟೇ ಸೀಮಿತ. ಜಿಲ್ಲೆಗೊಂದು ವಿಶ್ವವಿದ್ಯಾನಿಲಯ ಸ್ಥಾಪಿಸಬೇಕೆಂಬ ಉನ್ನತ ಶಿಕ್ಷಣ ಇಲಾಖೆ ಪ್ರಸ್ತಾವನೆಗೆ ಸಚಿವ ಸಂಪುಟ ಅನುಮೋದನೆ ನೀಡಿದ್ದು, ಈ ಕುರಿತು ಇಷ್ಟರಲ್ಲೇ ಸರ್ಕಾರದ ಅಧಿಸೂಚನೆ ಹೊರಬೀಳಲಿದೆ. ಅದರನ್ವಯ ಮಂಡ್ಯ, ಹಾಸನ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಹೊಸ ಪ್ರತ್ಯೇಕ ವಿಶ್ವವಿದ್ಯಾನಿಲಯಗಳು ಸ್ಥಾಪನೆಯಾಗಲಿವೆ. 2023–24ರ ಶೈಕ್ಷಣಿಕ ವರ್ಷದಿಂದ ಹೊಸ ವಿಶ್ವವಿದ್ಯಾನಿಲಯಗಳು ಕಾರ್ಯಾರಂಭವಾಗಲಿದ್ದು, ಇದರಿಂದ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಂಯೋಜನೆಯಾಗಿದ್ದ ನೆರೆ ಜಿಲ್ಲೆಗಳ ಪದವಿ, ಸ್ನಾತಕ ಪದವಿ ಹಾಗೂ ಬಿಇಡಿ ಕಾಲೇಜುಗಳು ▸ 8ನೇ ಪುಟಕ್ಕೆ

ಮುಲಾಯಂ ಸಿಂಗ್ ಯಾದವ್ ಇನ್ನಿಲ್ಲ



ಲಕ್ನೊ, ಅ.10– ಹಿರಿಯ ರಾಜಕೀಯ ಮುತ್ಸದ್ದಿ, ಸಮಾಜವಾದಿ ಪಕ್ಷದ ಸಂಸ್ಥಾಪಕ, ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿ ಮುಲಾಯಂ ಸಿಂಗ್ ಯಾದವ್ (82) ಸೋಮವಾರ ಬೆಳಗ್ಗೆ 8.16ರಲ್ಲಿ ನಿಧನರಾಗಿದ್ದಾರೆ. ತೀವ್ರ ಅನಾರೋಗ್ಯದಿಂದ ಕೆಲ ದಿನಗಳ ಹಿಂದೆ ಗುರುಗ್ರಾಮ್‌ನ ವೇದಾಂತ್ ಆಸ್ಪತ್ರೆಗೆ ದಾಖಲಾಗಿದ್ದ ಅವರು ಚಿಕಿತ್ಸೆ ಫಲಕಾರಿಯಾಗದೆ ಇಂದು ಕೊನೆಯುಸಿರೆಳೆದಿದ್ದಾರೆ.

ಉತ್ತರ ಪ್ರದೇಶದ ಪ್ರಮುಖ ರಾಜಕೀಯ ನಾಯಕರಲ್ಲಿ ಒಬ್ಬರಾದ ಮುಲಾಯಂ ಸಿಂಗ್ ಯಾದವ್ ಅವರು ಮೂರು ಬಾರಿ ರಾಜ್ಯದ ಮುಖ್ಯಮಂತ್ರಿಯಾಗಿ ಮತ್ತು ಭಾರತದ ರಕ್ಷಣಾ ಸಚಿವರಾಗಿಯೂ ಸೇವೆ ಸಲ್ಲಿಸಿದ್ದಾರೆ. ಅವರು ತಮ್ಮ ರಾಜಕೀಯ ಜೀವನದಲ್ಲಿ 10 ಬಾರಿ ವಿಧಾನಸಭಾ ಸದಸ್ಯರಾಗಿ ಹಾಗೂ ಏಳು ಬಾರಿ ಲೋಕಸಭಾ ಸದಸ್ಯರಾಗಿ ಆಯ್ಕೆಯಾಗಿದ್ದರು.


> “ಮುಲಾಯಂ ಸಿಂಗ್ ಯಾದವ್ ಅವರ ಅಂತ್ಯಕ್ರಿಯೆ ಅವರ ಸ್ವಗ್ರಾಮವಾದ ಸೈಫಾಯಿನಲ್ಲಿ ಸಕಲ ಸರ್ಕಾರಿ ಗೌರವದೊಂದಿಗೆ ನೆರವೇರಲಿದೆ ಎಂದು ತಿಳಿಸಿರುವ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು, ಮುಲಾಯಂ ಸಿಂಗ್ ಯಾದವ್ ನಿಧನಕ್ಕೆ ರಾಜ್ಯ ಸರ್ಕಾರ 3 ದಿನಗಳ ಶೋಕ ಆಚರಿಸಲಿದೆ ಎಂದು ತಿಳಿಸಿದ್ದಾರೆ.

> “ನನ್ನ ಬಹುಕಾಲದ ಗೆಳೆಯ ಮತ್ತು ಸಹೋದ್ಯೋಗಿ ಮುಲಾಯಂ ಸಿಂಗ್ ಯಾದವ್ ಅವರ ನಿಧನದಿಂದ ನಾನು ತೀವ್ರ ದುಃಖಿತನಾಗಿದ್ದೇನೆ. ಅವರ ಕುಟುಂಬ ಮತ್ತು ಅನುಯಾಯಿಗಳಿಗೆ ಸಾಂತ್ವನ ತಿಳಿಸುತ್ತೇನೆ. ಅವರು ಜಾತ್ಯತೀತ ಮತ್ತು ಸಮಾಜವಾದಿ ರಾಜಕೀಯ ಸಂಪ್ರದಾಯಗಳಿಗೆ ಬದ್ಧರಾಗಿದ್ದರು. ಅವರನ್ನು ತುಂಬ ಮಿಸ್ ಮಾಡಿಕೊಳ್ಳುತ್ತಿದ್ದೇನೆ. – ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ಟ್ವೀಟ್.

ಮುಲಾಯಂ ಸಿಂಗ್ ಯಾದವ್ ಅವರ ಪುತ್ರ ಮತ್ತು ಸಮಾಜವಾದಿ ಪಕ್ಷದ ಈಗಿನ ಮುಖ್ಯಸ್ಥ ಅಖಿಲೇಶ್ ಯಾದವ್ ಅವರು ಪಕ್ಷದ ಅಧಿಕೃತ ಟ್ವಿಟರ್ ಖಾತೆಯಲ್ಲಿ ತಮ್ಮ ತಂದೆಯ ನಿಧನವನ್ನು ಖಚಿತಪಡಿಸಿದ್ದಾರೆ. “ನನ್ನ ಗೌರವಾನ್ವಿತ ತಂದೆ ಮತ್ತು ಪ್ರತಿಯೊಬ್ಬರ ನಾಯಕ ಇನ್ನಿಲ್ಲ” ಎಂದು ಬರೆದುಕೊಂಡಿದ್ದಾರೆ. 1939ರ ನವೆಂಬರ್ 22 ರಂದು, ಮಧ್ಯ ಉತ್ತರ ಪ್ರದೇಶದ ಇಟ್ವಾ ಜಿಲ್ಲೆಯ ಸೈಫಾಯಿ ಗ್ರಾಮದಲ್ಲಿ ಸುಗರ್‌ಸಿಂಗ್ ಯಾದವ್ ಮತ್ತು ಮೂರ್ತಿದೇವಿ ದಂಪತಿ ಪುತ್ರರಾಗಿ ಜನಿಸಿದ ಮುಲಾಯಂಸಿಂಗ್ ಯಾದವ್, ಇಟಾವಾದಲ್ಲಿ ಆರಂಭಿಕ ಶಿಕ್ಷಣವನ್ನು ಪಡೆದರು. ನಂತರ ಫತೇಹಾಬಾದ್ ಮತ್ತು ಆಗ್ರಾದಲ್ಲಿ ಶಿಕ್ಷಣ ಪಡೆದರು. ಪ್ರಸಿದ್ಧ ಕುಸ್ತಿಪಟು, ಮುಲಾಯಂ ಅವರು ತಮ್ಮ ಪದವಿ ▸ 8ನೇ ಪುಟಕ್ಕೆ

ಚಾಮುಂಡಿಬೆಟ್ಟ ತಪ್ಪಲಲ್ಲಿ ಕೆಲ ‘ಅನಾಗರಿಕ’ ಭಕ್ತರ ಹೇಸಿಗೆ ಕೆಲಸ

- ಪ್ರಸಾದ ತಿಂದ ನಂತರ ಪ್ಲೇಟ್‌ಗಳ ತೂರಾಟ; ದೇವಿಯ ಸನ್ನಿಧಿ ಕಸದ ಕಣವಾಯ್ತು
- ಪೂಜೆ ನಂತರ ಪೂಜಾ ಪರಿಕರ ಚೆಲ್ಲಾಟ; ಮೆಟ್ಟಿಲು ಕಸಮಯ
- ಇದರ ಬಗ್ಗೆ ಗಮನ ಹರಿಸದ ಚಾಮುಂಡಿಬೆಟ್ಟ ಗ್ರಾಮ ಪಂಚಾಯ್ತಿ
- ಕೊನೆಗೆ ನಗರ ಪಾಲಿಕೆಯಿಂದ ಸ್ವಚ್ಛತೆ



ಚಾಮುಂಡಿಬೆಟ್ಟದ ಮೆಟ್ಟಿಲು ಮಾರ್ಗದಲ್ಲಿ ತ್ಯಾಜ್ಯ ಚೆಲ್ಲಾಪಿಲ್ಲಿಯಾಗಿ ಬಿದ್ದಿರುವುದು.





ನಗರ ಪಾಲಿಕೆ ಪೌರಕಾರ್ಮಿಕರು ಸ್ವಚ್ಛಗೊಳಿಸಿದ ಬಳಿಕ ಸ್ವಚ್ಛಂದವಾಗಿ ಕಾಣುತ್ತಿರುವ ಮೆಟ್ಟಿಲು ಮಾರ್ಗ.

ಮೈಸೂರು,ಅ.10(ಎಸ್‌ಬಿಡಿ)– ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲು ಮೆಟ್ಟಿಲು ಮಾರ್ಗದಲ್ಲಿ ಸೋಮವಾರ ಬೆಳಗ್ಗೆ ಕಂಡುಬಂದ ಕಸದ ರಾಶಿ, ಸ್ಥಳದ ಪಾವಿತ್ರ್ಯತೆ ಅರಿಯದವರ ದುರ್ವರ್ತನೆಗೆ ಕನ್ನಡಿ ಹಿಡಿದಂತಿತ್ತು.

ಚಾಮುಂಡಿಬೆಟ್ಟದಲ್ಲಿ ಭಾನುವಾರ ತಾಯಿ ಚಾಮುಂಡೇಶ್ವರಿಯ ಮಹಾ ರಥೋತ್ಸವ ವೈಭವಯುತವಾಗಿ ನೆರವೇರಿತು. ದಸರಾ ಬೆನ್ನಲ್ಲೇ ನೆರವೇರಿದ ಈ ಧಾರ್ಮಿಕ ಆಚರಣೆಯಲ್ಲಿ ಸಹಸ್ರಾರು ಮಂದಿ ಭಾಗಿಯಾಗಿದ್ದರು. ರಥೋತ್ಸವದ ನಂತರವೂ ದಿನವಿಡೀ ಭಕ್ತರು ತಾಯಿ ಚಾಮುಂಡೇಶ್ವರಿಯ ದರ್ಶನ ಪಡೆದರು. ಮೆಟ್ಟಿಲು ಮಾರ್ಗದ ಮುಖೇನ ಸಾವಿರಾರು ಭಕ್ತರು ಬೆಟ್ಟವೇರಿ ತಾಯಿಯ ಕೃಪೆಗೆ ಪಾತ್ರರಾದರು. ▸ 5ನೇ ಪುಟಕ್ಕೆ

ನಗರಪಾಲಿಕೆಯಿಂದ ಸ್ವಚ್ಛತೆ

ಚಾಮುಂಡಿಬೆಟ್ಟ ಪಾದದ ಬಳಿ ಕಸ ಚೆಲ್ಲಾಪಿಲ್ಲಿಯಾಗಿ ಬಿದ್ದಿರುವ ಬಗ್ಗೆ ಸಾರ್ವಜನಿಕರಿಂದ ದೂರು ಬಂದ ಹಿನ್ನೆಲೆಯಲ್ಲಿ ಮೈಸೂರು ಮಹಾನಗರ ಪಾಲಿಕೆ ಸ್ವಚ್ಛತಾ ಕಾರ್ಯ ನಡೆಸಿದೆ. ಎಲ್ಲೆಂದರಲ್ಲಿ ಬಿಸಾಡಿದ್ದ ತ್ಯಾಜ್ಯವನ್ನು ಪೌರಕಾರ್ಮಿಕರು ಗುಡಿಸಿ, ಆಟೋಗೆ ತುಂಬಿ ವಿಲೇವಾರಿ ಮಾಡಿದರು. ಸಂಬಂಧಪಟ್ಟ ಅಧಿಕಾರಿಗಳು ಸ್ಥಳದಲ್ಲೇ ಇದ್ದು ಸ್ವಚ್ಛಗೊಳಿಸಿದರು. ಈ ಬಗ್ಗೆ ‘ಮೈಸೂರು ಮಿತ್ರ’ನಿಗೆ ನಗರ ಪಾಲಿಕೆ ಆರೋಗ್ಯಾಧಿಕಾರಿ ಡಾ.ಡಿ.ಜಿ.ನಾಗರಾಜು ಪ್ರತಿಕ್ರಿಯಿಸಿ, ದೂರು ಬಂದ ತಕ್ಷಣವೇ ಪಾಲಿಕೆ ವತಿಯಿಂದ ಸ್ವಚ್ಛಗೊಳಿಸಲಾಗಿದೆ. ಮೆಟ್ಟಿಲುಗಳು, ರಸ್ತೆ, ಮರಗಳ ಬುಡ, ನೀರಿನ ಟ್ಯಾಂಕ್ ಹೀಗೆ ಕಂಡ ಕಂಡಲ್ಲಿ ಬಿಸಾಡಿದ್ದ ತ್ಯಾಜ್ಯವನ್ನು ನಮ್ಮ ಪೌರಕಾರ್ಮಿಕರು ವಿಲೇವಾರಿ ಮಾಡಿದ್ದಾರೆ ಎಂದು ತಿಳಿಸಿದರು.

ಪರಿಶಿಷ್ಟರ ಮೀಸಲಾತಿ ಹೆಚ್ಚಳವನ್ನು 3 ತಿಂಗಳ ಒಳಗೆ ಸಂವಿಧಾನದ 9ನೇ ಶೆಡ್ಯೂಲ್‌ನಲ್ಲಿ ಸೇರಿಸಿ

ಸುಗ್ರೀವಾಜ್ಞೆ ಮೂಲಕವೇ ಅನುಷ್ಠಾನಕ್ಕೆ ತರಲು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಒತ್ತಾಯ

ಮೈಸೂರು,ಅ.10(ಪಿಎಂ)– ಪರಿಶಿಷ್ಟರ ಮೀಸಲಾತಿ ಹೆಚ್ಚಿಸುವಲ್ಲಿ ರಾಜ್ಯ ಬಿಜೆಪಿ ಸರ್ಕಾರಕ್ಕೆ ನಿಜವಾದ ಕಾಳಜಿ ಇದ್ದರೆ 3 ತಿಂಗಳ ಒಳಗೆ ಸಂವಿಧಾನದ 9ನೇ ಶೆಡ್ಯೂಲ್‌ನಲ್ಲಿ ಸೇರಿಸಿ ಸುಗ್ರೀವಾಜ್ಞೆ ಮೂಲಕ ಅನುಷ್ಠಾನಗೊಳಿಸುತ್ತೇವೆಂದು ಘೋಷಣೆ ಮಾಡಬೇಕು ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಒತ್ತಾಯಿಸಿದರು.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನ್ಯಾ.ನಾಗಮೋಹನ್‌ದಾಸ್ ನೇತೃತ್ವದ ಸಮಿತಿ ವರದಿಯಂತೆ ಪರಿಶಿಷ್ಟ ಜಾತಿ ಮೀಸಲಾತಿಯನ್ನು ಶೇ.15ರಿಂದ 17ಕ್ಕೆ ಹಾಗೂ ಪರಿಶಿಷ್ಟ ಪಂಗಡದ ಮೀಸಲಾತಿಯನ್ನು ಶೇ.3ರಿಂದ 7ಕ್ಕೆ ಹೆಚ್ಚಿಸಲು ಸರ್ಕಾರ ನಿರ್ಧಾರ ಕೈಗೊಂಡಿದೆ. ಪರಿಶಿಷ್ಟರ ಬಗ್ಗೆ ರಾಜ್ಯ ಬಿಜೆಪಿ ಸರ್ಕಾರಕ್ಕೆ ಕಾಳಜಿ ಇದ್ದರೆ ಕಾಲಮಿತಿಯೊಳಗೆ ಅನುಷ್ಠಾನಕ್ಕೆ ತರಬೇಕು. ಎಷ್ಟು ದಿನದ ಒಳಗೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತದೆ. ಎಷ್ಟು ದಿನಗಳ ಒಳಗೆ ಸಂವಿಧಾನದ 9ನೇ ಶೆಡ್ಯೂಲ್‌ನಲ್ಲಿ ಸೇರಿಸಲಾಗುತ್ತದೆ ಎಂಬುದನ್ನು ಸರ್ಕಾರ ಘೋಷಣೆ ಮಾಡಬೇಕು ಎಂದು ಆಗ್ರಹಿಸಿದರು.

ದೇಶದಲ್ಲಿ ಮೀಸಲಾತಿ ಶೇ.50ರಷ್ಟು ಮೀರುವಂತಿಲ್ಲ ಎಂದು ಸುಪ್ರೀಂಕೋರ್ಟ್‌ನ ಸಂವಿಧಾನ ಪೀಠದ ಆದೇಶವಿದೆ. ತಕ್ಷಣಕ್ಕೆ ಸಂವಿಧಾನದ 9ನೇ ಶೆಡ್ಯೂಲ್‌ನಲ್ಲಿ ಸೇರ್ಪಡೆ ಮಾಡಿದರೆ ಸುಪ್ರೀಂಕೋರ್ಟ್ ಮಧ್ಯಪ್ರವೇಶಿಸುವುದಿಲ್ಲ ಎಂಬ ಮಾಹಿತಿ ಇದೆ. ಆದರೆ ಮಹಾರಾಷ್ಟ್ರದಲ್ಲಿ ಮರಾಠಿ ಸಂಬಂಧ ಮೀಸಲಾತಿ ಕಲ್ಪಿಸಿದಾಗ 9ನೇ ಶೆಡ್ಯೂಲ್‌ನಲ್ಲಿ ಸೇರಿಸಿದ್ದರೂ ಮೀಸಲಾತಿ ಜಾರಿಗೆ ಕೋರ್ಟ್ ಅವಕಾಶ ನೀಡಿಲ್ಲ ಎಂದು ವಿವರಿಸಿದರು.

ಸ್ಪಷ್ಟನೆ ನೀಡಬೇಕು

"ಈಗ ಪರಿಶಿಷ್ಟರ ಒಟ್ಟಾರೆ ಶೇ.6ರಷ್ಟು ಮೀಸಲಾತಿ ಹೆಚ್ಚಳ ನಿರ್ಧಾರ ಸಂಬಂಧ ಶೇ.50ರಷ್ಟು ಒಳಗೆಯೇ ಮೀಸಲಾತಿ ಹೆಚ್ಚಳ ಮಾಡಲಾಗುತ್ತದೆಯೇ? ಅಥವಾ ಶೇ.50 ಹೊರತಾಗಿ ಹೆಚ್ಚಳ ಮಾಡಲಾಗುತ್ತದೆಯೇ? ಎಂಬ ಬಗ್ಗೆ ಸರ್ಕಾರ ಸ್ಪಷ್ಟೀಕರಣ ನೀಡಬೇಕು. ಏಕೆಂದರೆ ಶೇ.50 ಒಳಗೆಯೇ ಒಟ್ಟು ಶೇ.6ರಷ್ಟು ಮೀಸಲಾತಿ ನೀಡಿದ್ದಲ್ಲಿ ಶೇ.32ರಷ್ಟಿರುವ ಹಿಂದುಳಿದ ವರ್ಗಗಳ ಮೀಸ ಲಾತಿಗೆ ಹೊಡೆತ ಬೀಳಲಿದೆ. ಇಲ್ಲ ಒಟ್ಟಾರೆ ಮೀಸಲಾತಿ ಪ್ರಮಾಣ ಶೇ.50ಕ್ಕಿಂತ ಹೆಚ್ಚಳಗೊಳ್ಳುತ್ತದೆಯೇ ಎಂಬ ಬಗ್ಗೆ ಸರ್ಕಾರ ಸ್ಪಷ್ಟಪಡಿಸಬೇಕು. **–ಎಂ.ಲಕ್ಷ್ಮಣ್, ಕೆಪಿಸಿಸಿ ವಕ್ತಾರ**

ಚುನಾವಣೆ ಸಮೀಪದಲ್ಲಿರುವ ಹಿನ್ನೆಲೆಯಲ್ಲಿ ಬಿಜೆಪಿ ಸರ್ಕಾರ ಈ ರೀತಿಯ ಕ್ರಮ ವಹಿಸಿದೆ ಎಂಬುದು ಜನಸಾಮಾನ್ಯರ ಅಭಿಪ್ರಾಯ. ಸಿದ್ದರಾಮಯ್ಯನವರು ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ಕಾಂತರಾಜ್ ಅವರ ನೇತೃತ್ವದಲ್ಲಿ ಹಿಂದುಳಿದ ವರ್ಗಗಳ ಆಯೋಗ ರಚಿಸಿ, ಜಾತಿ ಜನಗಣತಿಗೆ ಆದೇಶಿಸಲಾಯಿತು. ಈ ಸಂಬಂಧ ಸರ್ಕಾರಕ್ಕೆ ವರದಿಯೂ ಸಲ್ಲಿಕೆಯಾಗಿದೆ. ಈ ವರದಿ ಅನುಸಾರವೇ ನ್ಯಾ.ನಾಗಮೋಹನ್‌ದಾಸ್ ನೇತೃತ್ವದ ಸಮಿತಿ ಪರಿಶಿಷ್ಟರ ಮೀಸಲಾತಿ ಹೆಚ್ಚಳದ ಶಿಫಾರಸ್ಸು ಮಾಡಿದೆ ಎಂದು ಹೇಳಿದರು.

ಕಾಂಗ್ರೆಸ್–ಜೆಡಿಎಸ್ ಮೈತ್ರಿ ಸರ್ಕಾರದ ಅವಧಿಯಲ್ಲಿ ನಾಗಮೋಹನ್‌ದಾಸ್ ನೇತೃತ್ವದ ಸಮಿತಿ ರಚನೆ ಮಾಡಲಾಯಿತು. ಅಂದು ಮೈತ್ರಿ ಸರ್ಕಾರದ ಸಮನ್ವಯ ಸಮಿತಿ ಅಧ್ಯಕ್ಷರಾಗಿದ್ದ ಸಿದ್ದರಾಮಯ್ಯ ಎಸ್‌ಸಿ–ಎಸ್‌ಟಿ ಮೀಸಲಾತಿ ಹೆಚ್ಚಿಸುವ ಸಂಬಂಧ ಸಮಿತಿ ರಚನೆ ಆಗಲೇಬೇಕೆಂದು ಒತ್ತಾಯಿಸಿದ ಹಿನ್ನೆಲೆಯಲ್ಲಿ ಅಂದಿನ ಮುಖ್ಯಮಂತ್ರಿ ಕುಮಾರಸ್ವಾಮಿ ನ್ಯಾ.ನಾಗಮೋಹನ್‌ದಾಸ್ ಸಮಿತಿ ರಚನೆ ಮಾಡಿದರು. ಅಂದು ಪ್ರಿಯಾಂಕ್ ಖರ್ಗೆ ಸಮಾಜ ಕಲ್ಯಾಣ ಸಚಿವರಾಗಿದ್ದರು. ಹಾಗಾಗಿ ಪರಿಶಿಷ್ಟರ ಮೀಸಲಾತಿ ಹೆಚ್ಚಳದ ವಿಚಾರ ಒಂದು ಹಂತಕ್ಕೆ ಬಂದಿದ್ದರೆ ಅದರ ಶ್ರೇಯಸ್ಸು ಸಿದ್ದರಾಮಯ್ಯ, ಕುಮಾರಸ್ವಾಮಿ, ಪ್ರಿಯಾಂಕ್ ಖರ್ಗೆ, ನ್ಯಾ.ನಾಗಮೋಹನ್‌ದಾಸ್ ಹಾಗೂ ಶ್ರೀ ಪ್ರಸನ್ನಾನಂದ ಸ್ವಾಮೀಜಿ ಅವರಿಗೆ ಸಲ್ಲಬೇಕು ಎಂದು ಹೇಳಿದರು.

ರಾಜ್ಯದಲ್ಲಿ 2,15,675 ಹುದ್ದೆಗಳು ಸರ್ಕಾರದಲ್ಲಿ ಖಾಲಿ ಉಳಿದಿವೆ. ಅಲ್ಲದೆ, ಕೇಂದ್ರದಲ್ಲಿ 32 ಲಕ್ಷ ಸರ್ಕಾರಿ ಹುದ್ದೆಗಳು ಖಾಲಿ ಇದ್ದು, ಇದನ್ನು ಭರ್ತಿ ಮಾಡಬೇಕು. ಇಡೀ ದೇಶದಲ್ಲಿ ಖಾಸಗೀಕರಣ ಮಾಡುತ್ತಿದ್ದು, ಖಾಸಗಿ ವಲಯದಲ್ಲೂ ಮೀಸಲಾತಿ ನೀಡಿ ಎಂದು ಆಗ್ರಹಿಸಿದರು. ಜಿಪಂ ಮಾಜಿ ಅಧ್ಯಕ್ಷ ಬಿ.ಎಂ.ರಾಮು, ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ ಮತ್ತಿತರರು ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಡಿಸೆಂಬರ್ ವೇಳೆಗೆ ಇಂಜಿನಿಯರಿಂಗ್‌ನಲ್ಲಿ ಸಮಗ್ರ ಸುಧಾರಣೆ

ಬೆಂಗಳೂರು, ಅ.10 (ಕೆಎಂಶಿ)–ಡಿಸೆಂಬರ್ ವೇಳೆಗೆ ಎಂಜಿನಿಯರಿಂಗ್ ಶಿಕ್ಷಣದಲ್ಲಿ ಸಮಗ್ರ ಸುಧಾರಣೆ ತರಲಾಗುವುದು. ಈ ಪ್ರಕ್ರಿಯೆ ಈಗ ಅಂತಿಮ ಹಂತದಲ್ಲಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥ ನಾರಾಯಣ ಹೇಳಿದ್ದಾರೆ. ಎಥ್ನೋಟೆಕ್ ಅಕಾಡೆಮಿಯ ಜತೆಗೂಡಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸದ್ಯಕ್ಕೆ ರಾಜ್ಯದಲ್ಲಿ ಸರಕಾರಿ ಕಾಲೇಜುಗಳಲ್ಲಿ ಕಲಿಕೆ ಮತ್ತು ಬೋಧನೆಯ ಡಿಜಿಟಲೀಕರಣ ನಡೆಯುತ್ತಿದೆ. ಇದನ್ನು ಸದ್ಯದಲ್ಲೇ ಖಾಸಗಿ ಕಾಲೇಜುಗಳಿಗೂ ವಿಸ್ತರಿಸಲಾಗುವುದು ಎಂದು ನುಡಿದರು. ರಾಜ್ಯದಲ್ಲಿ ಉನ್ನತ ಶಿಕ್ಷಣ ವಲಯದಲ್ಲಿ ಅಭೂತಪೂರ್ವ ಸುಧಾರಣೆಗಳನ್ನು ತರಲಾಗುತ್ತಿದೆ. ಈಗ ನಮ್ಮ ಉನ್ನತ ಶಿಕ್ಷಣ ಸಂಸ್ಥೆಗಳನ್ನು ಉದ್ಯಮಗಳ ಜತೆ ಬೆಸೆಯಲಾಗಿದೆ. ಈ ಮೂಲಕ ವಿದ್ಯಾರ್ಥಿಗಳಲ್ಲಿ ಉದ್ಯಮಶೀಲತೆಯನ್ನು ಬೆಳೆಸಲಾಗುತ್ತಿದೆ ಎಂದು ವಿವರಿಸಿದರು.



ಎಂಜಿನಿಯರಿಂಗ್ ಶಿಕ್ಷಣದ ಆಡಳಿತ, ಪಠ್ಯಕ್ರಮ, ಇಂಟರ್ನ್‌ಶಿಪ್ ಇತ್ಯಾದಿಗಳನ್ನು ಆಮೂಲಾಗ್ರವಾಗಿ ಸುಧಾರಿಸಲಾಗುವುದು. ಇಂಟರ್ನ್‌ಶಿಪ್ ಅವಧಿಯಲ್ಲಿ ವಿದ್ಯಾರ್ಥಿಗಳಿಗೆ ವೇತನ ಕೊಡುವುದನ್ನು ಕಡ್ಡಾಯ ಮಾಡಲಾಗಿದೆ. ಗುಣಮಟ್ಟದ ಶಿಕ್ಷಣದಿಂದ ಮಾತ್ರವೇ ಸಮಾಜದ ಸಬಲೀಕರಣ ಸಾಧ್ಯ. ನಾವು ಸೀಮಿತವಾಗಿ ಯೋಚಿಸದೆ ಜಾಗತಿಕ ಸ್ತರದಲ್ಲಿ ಸ್ಪರ್ಧೆಯನ್ನು ಎದುರಿಸುವಂತಹ ಗುರಿಯನ್ನು ಹೊಂದುವುದು ಅತ್ಯಗತ್ಯವಾಗಿದೆ. ಇಲ್ಲದೆ ಹೋದರೆ ಅವಕಾಶಗಳು ಕೈತಪ್ಪಿ ಹೋಗುತ್ತವೆ ಎಂದು ಪ್ರತಿಪಾದಿಸಿದರು.

ಮೈಸೂರಲ್ಲಿ ನ.11ರಿಂದ 3 ದಿನ ಕಿಸಾನ್ ಸ್ವರಾಜ್ ಸಮ್ಮೇಳನ

ಮೈಸೂರು,ಅ.10(ಆರ್‌ಕೆಬಿ)–ಮೈಸೂರಿನ ಮುಕ್ತ ವಿಶ್ವ ವಿದ್ಯಾನಿಲಯದ ಆವರಣದಲ್ಲಿ ನ.11ರಿಂದ ಮೂರು ದಿನಗಳ ಕಿಸಾನ್ ಸ್ವರಾಜ್ ಸಮ್ಮೇಳನ ಆಯೋಜಿಸಲಾಗಿದೆ ಎಂದು ಸಹಜ ಸಮೃದ್ಧ ಸಂಸ್ಥೆಯ ನಿರ್ದೇಶಕ ಕೃಷ್ಣಪ್ರಸಾದ್ ತಿಳಿಸಿದರು.

ಮೈಸೂರಿನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸುಸ್ಥಿರ ಮತ್ತು ಸಮಗ್ರ ಕೃಷಿ ಮೈತ್ರಿಕೂಟ ಹಾಗೂ ರಾಜ್ಯ ಮುಕ್ತ ವಿವಿ ಸಂಯುಕ್ತ ಆಶ್ರಯದಲ್ಲಿ ನಡೆಯುವ ಸಮ್ಮೇಳನದ ಸಂದರ್ಭದಲ್ಲಿ ಬೀಜ ಉತ್ಸವ, ಸಾವಯವ ಪ್ರದರ್ಶನ, ವಿಚಾರ ಸಂಕಿರಣ, ಚರ್ಚೆ ಹಾಗೂ ಉಪನ್ಯಾಸಗಳು ನಡೆಯಲಿವೆ. ಪರಿಸರ ದಿಗ್ಗಜರು ಇದರಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು. ದೇಶದ 15ಕ್ಕೂ ಹೆಚ್ಚು ರಾಜ್ಯಗಳಿಂದ 1500 ಕ್ಕೂ ಹೆಚ್ಚು ರೈತರು ಈ ಮಹಾ ಮೇಳದಲ್ಲಿ ಪಾಲ್ಗೊಳ್ಳಲಿದ್ದಾರೆ. ಸದ್ಯದಲ್ಲಿ ಕೃಷಿ ವಲಯ ಹಾಗೂ ರೈತರು ಎದುರಿಸುತ್ತಿರುವ ಸಮಸ್ಯೆ ಮತ್ತು ಅಲ್ಲಲ್ಲಿ ಕಂಡುಕೊಂಡಿರುವ ಸುಸ್ಥಿರ ಪರಿಹಾರೋಪಾಯ ಮಾರ್ಗಗಳನ್ನು ಒಂದೇ ವೇದಿಕೆಗೆ ತರುವುದು ಸಮ್ಮೇಳನದ ಉದ್ದೇಶವಾಗಿದೆ ಎಂದು ತಿಳಿಸಿದರು.

ಹಲವು ಕಾರಣಗಳಿಂದಾಗಿ ಜಾಗತಿಕ ತಾಪಮಾನ ಏರಿಕೆಯಾಗುತ್ತಿದೆ. ಭೂಮಂಡಲ ಬಿಸಿಯಾಗುತ್ತಿದ್ದು, ಎಲ್ಲ ದೇಶಗಳೂ ಈ ಬಿಕ್ಕಟ್ಟಿನ ಬಗ್ಗೆ ಚಿಂತನೆ ನಡೆಸಲು ಮುಂದಾಗಿವೆ. ಹೀಗಾಗಿ ಪರಿಸರ ಸ್ನೇಹಿ ಕೃಷಿ, ನಿಸರ್ಗದ ಸಂರಕ್ಷಣೆಯಂಥ ಕ್ರಮಗಳನ್ನು ಅನುಸರಿಸುವ ಮೂಲಕ ಜಾಗತಿಕ ತಾಪಮಾನ ಬಿಕ್ಕಟ್ಟಿಗೆ ಪರಿಹಾರ ಕಲ್ಪಿಸಬೇಕಾಗಿದೆ. ಇಂಥ ಹತ್ತು ಹಲವರು ವಿಧಾನಗಳನ್ನು ಕಿಸಾನ್ ಸ್ವರಾಜ್ ಸಮ್ಮೇಳನ ಪ್ರತಿಪಾದಿಸಲಿದೆ ಎಂದರು.

ವೇತನದಾರರು 3,500 ರೂ., ರೈತರು, ಪತ್ರಕರ್ತರು, ಸ್ವಯಂ ಸೇವಾ ಪ್ರತಿನಿಧಿಗಳು 2,500 ರೂ., ಪೂರ್ಣಾವಧಿ ರೈತರು 1,500 ರೂ., ಮಹಿಳಾ ರೈತರು 800 ರೂ. ಶುಲ್ಕ ನೀಡಿ ನೋಂದಣಿ ಮಾಡಿಕೊಳ್ಳಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಮೊ–99005 37434 ಅನ್ನು ಸಂಪರ್ಕಿಸಬಹುದಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಕವಿತಾ, ಸಂತೋಷ್ ಕೌಲಗಿ, ಕವಿತಾ ಶ್ರೀನಿವಾಸನ್, ಡಾ.ರಾಮಕೃಷ್ಣಪ್ಪ ಉಪಸ್ಥಿತರಿದ್ದರು.

ಕಾಲೇಜು ಉದ್ಯಾನ ಸ್ಪರ್ಧೆಯಲ್ಲಿ ವಿದ್ಯಾವರ್ಧಕ ಕಾಲೇಜಿಗೆ ಪ್ರಶಸ್ತಿ



ತೋಟಗಾರಿಕೆ ಇಲಾಖೆ ವತಿಯಿಂದ ನಡೆದ ದಸರಾ ಫಲಪುಷ್ಪ ಪ್ರದರ್ಶನದಲ್ಲಿ "ಕಾಲೇಜು ಉದ್ಯಾನವನ" ವಿಭಾಗದಲ್ಲಿ ಮೈಸೂರಿನ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು ಮೊದಲ ಸ್ಥಾನ ಗಳಿಸಿದೆ. ಕಾಲೇಜಿನ ಉದ್ಯಾನವನದ ಸಹಾಯಕರು, ಮೇಲ್ವಿಚಾರಕರು ಹಾಗೂ ಆಡಳಿತ ಮಂಡಳಿಯವರನ್ನು ಚಿತ್ರದಲ್ಲಿ ಕಾಣಬಹುದು.

ಗಾಂಧೀಜಿ ಬಗ್ಗೆ ಸಂತೋಷ್ ಹೇಳಿಕೆಗೆ ಸ್ವರಾಜ್ ಇಂಡಿಯಾ ಆಕ್ಷೇಪ

ಮೈಸೂರು, ಅ.10– ಗಾಂಧೀಜಿ ಒಬ್ಬರ ಕಾರಣದಿಂದ ದೇಶಕ್ಕೆ ಸ್ವಾತಂತ್ರ್ಯ ಬಂದಿದೆ ಎಂದು ಬಿಂಬಿಸಲಾಗುತ್ತಿದೆ. ಇದು ಇತರ ಹೋರಾಟಗಾರರಿಗೆ ಮಾಡುವ ಅವಮಾನ. ಇತರ ಹೋರಾಟಗಾರರನ್ನು ಸ್ಮರಿಸಿದರೆ ಗಾಂಧೀಜಿಗೆ ಅವಮಾನಿಸಿದಂತೆ ಅಲ್ಲ ಎಂದು ಬಿಜೆಪಿಯ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಹೇಳಿರುವುದು ಕುತಂತ್ರದ ಯೋಜನೆಯ ಹೇಳಿಕೆ ಎಂದು ಸ್ವರಾಜ್ ಇಂಡಿಯಾ ಟೀಕಿಸಿದೆ.

ಹೀಗೆ ಹೇಳುವ ಮೂಲಕ ಭಾರತದ ಸ್ವಾತಂತ್ರ್ಯ ಹೋರಾಟದ ಚಳವಳಿಯ ನಾಯಕತ್ವವನ್ನು ಬೇರೊಬ್ಬರ ಹೆಸರಿಗೆ ವರ್ಗಾಯಿಸಲು ಆಗುವುದಿಲ್ಲ. ಮತ್ತು ಸ್ವಾತಂತ್ರ್ಯ ಚಳವಳಿಗೆ ಸಾವರ್ಕರ್ ಬಗೆದ ದ್ರೋಹ ಮತ್ತು ಬ್ರಿಟಿಷ್‌ರೊಂದಿಗೆ ಕೈ ಜೋಡಿಸಿದ ಸತ್ಯವನ್ನು ಭಾರತೀಯರ ಮನಸ್ಸಿನಿಂದ ಮರೆಮಾಚಲು ಸಾಧ್ಯವಿಲ್ಲ ಎಂದು ಸ್ವರಾಜ್ ಇಂಡಿಯಾದ ಉಗ್ರನರಸಿಂಹೇಗೌಡ ಅಭಿಪ್ರಾಯಪಟ್ಟಿದ್ದಾರೆ.



ಮೈಸೂರು ವಿವಿ ಮಾನಸಗಂಗೋತ್ರಿ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದಲ್ಲಿ ದಸರಾ ವಿಶೇಷಾಂಕ ವಿದ್ಯಾರ್ಥಿಗಳ ಪ್ರಾಯೋಗಿಕ ಪತ್ರಿಕೆಯನ್ನು ಬಿಡುಗಡೆಗೊಳಿಸಲಾಯಿತು. ಈ ವೇಳೆ 'ಡೆಕ್ಕನ್ ಹೆರಾಲ್ಡ್' ಸಹಾಯಕ ಸಂಪಾದಕ ಸತೀಶ್, ವಿಭಾಗದ ಪ್ರಾಧ್ಯಾಪಕಿ ಪ್ರೊ.ಎಂ.ಎಸ್.ಸಪ್ನಾ, ಸಹ ಪ್ರಾಧ್ಯಾಪಕಿ ಡಾ.ಎನ್.ಮಮತಾ, ಸಂಶೋಧಕರು, ವಿಭಾಗದ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಅ.15ರಂದು ಕ್ರೈಸ್ತ ವಧು–ವರರ ಅನ್ವೇಷಣೆ

ಮೈಸೂರು,ಅ.10(ಪಿಎಂ)– ಹೀ ಅಂಡ್ ಶಿ ಕ್ರೈಸ್ತರ ವಧು–ವರರ ವೇದಿಕೆ ವತಿಯಿಂದ ಮೈಸೂರು ನಗರ ಮತ್ತು ಜಿಲ್ಲೆಯ ಕ್ರೈಸ್ತ ಸಮುದಾಯದ ಎಲ್ಲಾ ಪಂಗಡಗಳಿಗೆ ಅ.15ರಂದು ವಧು–ವರರ ಅನ್ವೇಷಣೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ವೇದಿಕೆಯ ನೆಲ್ಸನ್ ಸೆಲ್ವರಾಜ್ ತಿಳಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಹೋಟೆಲ್ ಗೋವರ್ಧನ್‌ನಲ್ಲಿ ಅಂದು ಸಂಜೆ 5ಕ್ಕೆ ಕಾರ್ಯಕ್ರಮ ನಡೆಯಲಿದೆ. ಆಸಕ್ತರು ನೋಂದಾಯಿಸಿಕೊಳ್ಳಲು 98800 99929 ಅನ್ನು ಸಂಪರ್ಕಿಸಬಹುದು ಎಂದರು.

ವಿವಿಧ ಸೌಲಭ್ಯಗಳಿಗಾಗಿ ಅರ್ಜಿ ಆಹ್ವಾನ

ಮೈಸೂರು, ಅ.10– ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ ಕಾರ್ಯಾಲಯ ವತಿಯಿಂದ ಪಂಚಾಯಿತಿ ವ್ಯಾಪ್ತಿಯ ಸಾರ್ವಜನಿಕರಿಗೆ 2022–23ನೇ ಸಾಲಿನ ಎಸ್.ಎಫ್.ಸಿ ಪಟ್ಟಣ ಪಂಚಾಯಿತಿ ನಿಧಿಯಡಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ಜನರ ಮತ್ತು ವಿಶೇಷಚೇತನರ ಕಲ್ಯಾಣಕ್ಕಾಗಿ ವಿವಿಧ ವೈಯಕ್ತಿಕ ಸೌಲಭ್ಯ ಕಲ್ಪಿಸುವ ಉದ್ದೇಶಕ್ಕಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದ್ದು ಅ. 31ರೊಳಗಾಗಿ ಅರ್ಜಿಯನ್ನು ಸಲ್ಲಿಸಬೇಕು. ಆಸಕ್ತರು ರಮ್ಮನಹಳ್ಳಿ ಪಟ್ಟಣ ಪಂಚಾಯಿತಿಯ ನಿವಾಸಿ ಆಗಿರಬೇಕು, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಪಡಿತರ ಚೀಟಿ, ಆಧಾರ್ ಕಾರ್ಡ್, ಚುನಾವಣಾ ಗುರುತಿನ ಚೀಟಿಗಳ ಸ್ವಯಂ ದೃಢೀಕೃತ ನಕಲು ಪ್ರತಿ, ಇತ್ತೀಚಿನ 03 ಭಾವಚಿತ್ರ ಇನ್ನಿತರೆ ಅಗತ್ಯ ದಾಖಲೆಗಳೊಂದಿಗೆ ಕಚೇರಿಗೆ ಸಲ್ಲಿಸಲು ತಿಳಿಸಿದೆ. ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ಸಂಬಂಧಪಟ್ಟ ಸಿಬ್ಬಂದಿಯನ್ನು ಸಂಪರ್ಕಿಸಬಹುದು ಎಂದು ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನ.10ರಂದು ಕೆಐಎ ಟರ್ಮಿನಲ್–2 ಪ್ರಧಾನಿ ಮೋದಿ ಉದ್ಘಾಟನೆ

ಬೆಂಗಳೂರು,ಅ.10–ಬಹು ನಿರೀಕ್ಷಿತ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ (ಕೆಐಎ) ಟರ್ಮಿನಲ್ 2 ಅನ್ನು ಪ್ರಧಾನಿ ನರೇಂದ್ರ ಮೋದಿ ನವೆಂಬರ್ 10 ರಂದು ಉದ್ಘಾಟಿಸಲಿದ್ದಾರೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.



ಬಿಜೆಪಿ ರಾಜ್ಯ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, "ಎಲ್ಲರೂ ಕಾರ್ಯಕ್ರಮದಲ್ಲಿ ಭಾಗವಹಿಸಿ, ಯಶಸ್ವಿಗೊಳಿಸಬೇಕು" ಎಂದರು. 13,000 ಕೋಟಿ ವೆಚ್ಚದ 2ನೇ ಟರ್ಮಿನಲ್ ಅನ್ನು ಉದ್ಯಾನವನದೊಳಗೆ ಒಂದಾಗಿ ಕಲ್ಪಿಸಲಾಗಿದೆ. ಅದು ಉದ್ಯಾನ ನಗರಿಯಾಗಿ ಬೆಂಗಳೂರಿನ ತತ್ವಗಳೊಂದಿಗೆ ಬೆರೆಯುತ್ತದೆ. ನಿಲ್ದಾಣದ ಒಳಾಂಗಣವು ಕರ್ನಾಟಕದ ಕಲೆ, ಸಂಪ್ರದಾಯ ಮತ್ತು ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ. ಇದು ಮಾರ್ಚ್ 2021 ರಲ್ಲಿ ಸಿದ್ಧವಾಗಬೇಕಿತ್ತು. ಆದರೆ, ಕಾರಣಾಂತರಗಳಿಂದ ಕಾಮಗಾರಿ ಮುಗಿಯಲಿಲ್ಲ ಎಂದರು. ದೇಶೀಯ ಮತ್ತು ಅಂತಾರಾಷ್ಟ್ರೀಯ ಪ್ರಯಾಣಿಕರನ್ನು ನಿಭಾಯಿಸಲು ಟರ್ಮಿನಲ್ 2 ಅನ್ನು ಸಮಗ್ರವಾಗಿ ವಿನ್ಯಾಸಗೊಳಿಸಲಾಗುತ್ತಿದೆ. 108 ಅಡಿ ಎತ್ತರದ ಕೆಂಪೇಗೌಡರ ಪ್ರತಿಮೆ ಮತ್ತು ಅದರ ಸುತ್ತಲಿನ 'ಥೀಮ್ ಪಾರ್ಕ್' ಅನ್ನು ಮೋದಿ ಉದ್ಘಾಟಿಸಲಿದ್ದಾರೆ ಎಂದು ಹೇಳಿದರು.

ಅ.14ರಂದು ಬೌದ್ಧ ಧರ್ಮ ದೀಕ್ಷೆ

ಮೈಸೂರು,ಅ.10(ಪಿಎಂ)– ದಲಿತ ಸಮುದಾಯದ 100ಕ್ಕೂ ಹೆಚ್ಚು ಮಂದಿ ಅ.14ರಂದು ಬ್ಯಾತಹಳ್ಳಿಯ ಬುದ್ಧವಿಹಾರದಲ್ಲಿ ಬೌದ್ಧ ಧರ್ಮ ದೀಕ್ಷೆ ಪಡೆಯಲಿದ್ದಾರೆ ಎಂದು ಮಹಿಷಾ ಮಂಡಲ ಅಂತಾರಾಷ್ಟ್ರೀಯ ಬುದ್ಧಿಸ್ಟ್ ಕಲ್ಚರಲ್ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಶಾಂತರಾಜು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಸ್ಪೃಶ್ಯತೆ ಆಚರಣೆ ಕಾನೂನಡಿ ಶಿಕ್ಷಾರ್ಹ ಅಪರಾಧ. ಆದರೂ ನಿತ್ಯ ದಲಿತರ ವಿಚಾರದಲ್ಲಿ ಅಸ್ಪೃಶ್ಯತೆ ಆಚರಣೆ ಹಾಗೂ ದೌರ್ಜನ್ಯ ನಡೆಯುತ್ತಲೇ ಇವೆ. ಹಿಂದೂ ಧರ್ಮದ ಪ್ರಾಚೀನ ದಿಗ್ಬಂಧ ಆಚರಣೆಗಳು ಇಂದಿಗೂ ಚಾಲ್ತಿಯಲ್ಲಿವೆ ಎಂದರು. ದಲಿತರು ಶೋಷಿತ ಸಮಾಜದಿಂದ ವಿಮೋಚನೆ ಪಡೆಯಲು ಡಾ.ಬಿ.ಆರ್.ಅಂಬೇಡ್ಕರ್ ಅವರು ತೋರಿದ ಬುದ್ಧ ಮಾರ್ಗದಲ್ಲಿ ನಡೆಯುವುದೊಂದೇ ದಾರಿಯಾಗಿದೆ. ಈ ಹಿನ್ನೆಲೆಯಲ್ಲಿ ಅಂದು ಬೆಳಗ್ಗೆ 11ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ ಮೈಸೂರಿನ ನೂರಾರು ದಲಿತರು ಬೌದ್ಧ ಧರ್ಮ ದೀಕ್ಷೆ ಪಡೆಯಲಿದ್ದಾರೆ ಎಂದು ತಿಳಿಸಿದರು.

ಕಿಡಿನುಡಿ: ನಮ್ಮ ಸಮುದಾಯದ ಕೆಲ ಜನಪ್ರತಿನಿಧಿಗಳು ಗುಲಾಮಗಿರಿ ಮಾಡಿಕೊಂಡು ಇದ್ದಾರೆಯೇ ಹೊರತು ಸಮುದಾಯದ ಹಿತಕಾಯುತ್ತಿಲ್ಲ. ಶಾಸಕ ಎನ್.ಮಹೇಶ್ ಹಾಗೂ ಛಲವಾದಿ ನಾರಾಯಣಸ್ವಾಮಿ ಅವರನ್ನು ಈ ನಿಟ್ಟಿನಲ್ಲಿ ಉದಾಹರಿಸಬಹುದು. ಇವರು ಕೊಡುತ್ತಿರುವ ಹೇಳಿಕೆಗಳನ್ನು ಗಮನಿಸಿದರೆ ಇವರಲ್ಲಿ ಸಮುದಾಯದ ಹಿತಕಾಯುವ ಬದ್ಧತೆ ಇಲ್ಲವೆಂದು ಗೋಚರಿಸುತ್ತದೆ. ಸಣ್ಣಮಟ್ಟ ರಾಜಕೀಯ ಸ್ಥಾನಮಾನಕ್ಕೆ ಗುಲಾಮಗಿರಿಗೆ ಇವರು ಶರಣಾಗಿದ್ದಾರೆ ಎಂದು ಕಿಡಿಕಾರಿದರು. ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಚಿಕ್ಕಂದಾನಿ, ಖಜಾಂಚಿ ಸಿ.ರವೀಶ್, ಮುಖಂಡ ನಂಜುಂಡಸ್ವಾಮಿ ಮತ್ತಿತರರು ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ವಿಶ್ವ ಆಡಿಯಾಲಜಿಸ್ಟ್ಸ್ ದಿನದ ಅಂಗವಾಗಿ ಸೈಕ್ಲೋಥಾನ್



ಮೈಸೂರು, ಅ.10(ಆರ್‌ಕೆ)–ಮೈಸೂರಿನ ಜೆಎಸ್‌ಎಸ್ ವಾಕ್ ಮತ್ತು ಶ್ರವಣ ಸಂಸ್ಥೆಯಿಂದ ವಿಶ್ವ ಆಡಿಯಾಲಜಿಸ್ಟ್ಸ್ ದಿನದ ಅಂಗವಾಗಿ ಸೋಮವಾರ ಸೈಕ್ಲೋಥಾನ್ ಆಯೋಜಿಸಲಾಗಿತ್ತು. ಸಂಸ್ಥೆ ನಿರ್ದೇಶಕ ಡಾ.ಎನ್.ಪಿ.ನಟರಾಜ್ ಹಸಿರು ನಿಶಾನೆ ತೋರುವ ಮೂಲಕ ಸೈಕ್ಲೋಥಾನ್‌ಗೆ ಚಾಲನೆ ನೀಡಿದರು. ಬಸವೇಶ್ವರ ಸರ್ಕಲ್, ಹಾರ್ಡಿಂಜ್ ಸರ್ಕಲ್, ಚಾಮರಾಜ ಸರ್ಕಲ್, ಡಿ.ದೇವರಾಜ ಅರಸು ರಸ್ತೆ, ಜೆಎಲ್‌ಬಿ ರಸ್ತೆ, ರಾಮಸ್ವಾಮಿ ಸರ್ಕಲ್, ಆರ್‌ಟಿಓ ಸರ್ಕಲ್, ಅಗ್ರಹಾರ ಸರ್ಕಲ್ ಮಾರ್ಗವಾಗಿ ಸಾಗಿದ ಸೈಕ್ಲೋಥಾನ್ ಮರಳಿ ಜೆಎಸ್‌ಎಸ್ ವಾಕ್ ಮತ್ತು ಶ್ರವಣ ಸಂಸ್ಥೆ ತಲುಪಿತು.

ವಿವಿಧ ವಯೋಮಾನದವರಲ್ಲಿ ಕಾಣಿಸಿಕೊಳ್ಳುವ ವಾಕ್ ಮತ್ತು ಶ್ರವಣ ದೋಷಗಳ ನಿವಾರಣೆ, ಮುಂಜಾಗ್ರತೆ ಕುರಿತಂತೆ ಸೈಕ್ಲೋಥಾನ್‌ನಲ್ಲಿ ಭಾಗವಹಿಸಿದ್ದ 100ಕ್ಕೂ ಹೆಚ್ಚು ಮಂದಿ ವಿದ್ಯಾರ್ಥಿಗಳು ಸಾರ್ವಜನಿಕರಿಗೆ ಅರಿವು ಮೂಡಿಸಿದರು. ಸಂಸ್ಥೆಯ ಆಡಿಯಾಲಜಿ ವಿಭಾಗದ ಮುಖ್ಯಸ್ಥ ಡಾ.ಹೇಮಂತ್, ಸಹಾಯಕ ಪ್ರಾಧ್ಯಾಪಕಿ ಡಾ.ಸಂಜನಾ, ಕಾಲೇಜು ಪ್ರಾಂಶುಪಾಲೆ ಡಾ.ಆರ್.ಸುಮಾ, ಪ್ರಾಧ್ಯಾಪಕಿ ಡಾ.ಆಶಾ ಯತಿರಾಜ್ ಹಾಗೂ ಇತರರು ಈ ಸಂದರ್ಭ ಭಾಗವಹಿಸಿದ್ದರು.

ಸೋಮಶೇಖರ್‌ಗೆ ಪಿಹೆಚ್.ಡಿ



ಮೈಸೂರು,ಅ.10–ಡಾ.ಕೆ.ಸೌಭಾಗ್ಯವತಿ ಅವರ ಮಾರ್ಗದರ್ಶನದಲ್ಲಿ ಪಿ.ಸೋಮಶೇಖರ್ ಅವರು ಜಾನಪದ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಕಾಂಗ್ರೆಸ್‌ಗೆ ನೇಮಕ



ಮೈಸೂರು,ಅ.10–ಕರ್ನಾಟಕ ಪ್ರದೇಶ ಪರಿಶಿಷ್ಟ ಜಾತಿ ವಿಭಾಗದ ಮೈಸೂರು ನಗರದ ಜಿಲ್ಲಾಧ್ಯಕ್ಷರನ್ನಾಗಿ ಮಂಜುನಾಥಪುರದ ನಿವಾಸಿ ಕೆ.ರಮೇಶ್ ಅವರನ್ನು ನೇಮಕ ಮಾಡಲಾಗಿದೆ.

ಒಕ್ಕಲಿಗರು ಒಕ್ಕಲಿಗರನ್ನೇ ತುಳಿಯುವುದನ್ನು ಬಿಡಿ: ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಮನವಿ

ಒಕ್ಕಲಿಗ ಮಹಾಸಭಾಗೆ ಮುಡಾದಿಂದ ಭೂಮಿ; ಜೊತೆಗೆ ವೈಯಕ್ತಿಕ ನೆರವಿನ ಭರವಸೆ

ಮೈಸೂರು, ಅ. 10–ಒಕ್ಕಲಿಗರು ಒಕ್ಕಲಿಗರನ್ನೇ ತುಳಿಯುವುದನ್ನು ಬಿಟ್ಟು ಸಮಾಜವನ್ನು ಬೆಳೆಸುವ ಕೆಲಸವನ್ನು ಮಾಡಬೇಕು ಎಂದು ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಮನವಿ ಮಾಡಿದರು.




ಅಖಿಲ ಕರ್ನಾಟಕ ಒಕ್ಕಲಿಗರ ಮಹಾಸಭಾದ ವತಿಯಿಂದ ರಾಣಿಬಹದ್ದೂರ್ ಸಭಾಂಗಣದಲ್ಲಿ ಏರ್ಪಡಿಸಿದ್ದ ನಾಡಪ್ರಭು ಕೆಂಪೇಗೌಡ ಮತ್ತು ಒಕ್ಕಲಿಗರ ರಾಜಮನೆತನದ ಇತಿಹಾಸ ಕುರಿತ ವಿಚಾರ ಸಂಕಿರಣದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ನಮ್ಮ ಸಮಾಜದವರು ಸಭೆ ಸಮಾರಂಭಗಳಿಗೆ ಸೀಮಿತವಾಗಿರದೆ, ಒಗ್ಗಟ್ಟನ್ನು ಪ್ರದರ್ಶಿಸಬೇಕು, ರಾಜ್ಯದಲ್ಲಿ ಇಂದು ಒಕ್ಕಲಿಗ ಸಮಾಜವನ್ನು ಯಾರೂ ಎದುರು ಹಾಕಿಕೊಳ್ಳಲು ಆಗುವುದಿಲ್ಲ, ತುಳಿಯಲೂ ಆಗುವುದಿಲ್ಲ. ನಮ್ಮ ಸಮಾಜದ ಬಗ್ಗೆ ನನಗೆ ಹೆಮ್ಮೆ ಇದೆ. ಇದು ಎಲ್ಲರಿಗೂ ಬರಬೇಕು. ನನ್ನ ಸಮಾಜಕ್ಕೆ ನನ್ನ ಕೊಡುಗೆ ಏನು ಎಂಬುದನ್ನು ಕೆಲವರು ತಾವೇ ಪ್ರಶ್ನೆ ಮಾಡಿಕೊಳ್ಳಬೇಕು. ಮನುಷ್ಯ ಹುಟ್ಟಿದ ಮೇಲೆ ಈ ಭೂಮಿ ಮೇಲೆ ತನ್ನ ಹೆಜ್ಜೆ ಗುರುತುಗಳನ್ನು ಬಿಟ್ಟು ಹೋಗಬೇಕು, ಪ್ರತಿಯೊಬ್ಬ ಮನುಷ್ಯನಿಗೂ ಇತಿಹಾಸ ಗೊತ್ತಿರಬೇಕು. ಮಾನವೀಯತೆಯ ಗುಣಗಳನ್ನು ಬೆಳೆಸಿಕೊಳ್ಳಬೇಕು. ಸಮಾಜದಲ್ಲಿರುವ ನ್ಯೂನತೆಗಳನ್ನು ಎತ್ತಿ ತೋರಿಸುವುದರ ಜೊತೆಗೆ ಸಮಾಜವನ್ನು ಕಟ್ಟುವ ಕೆಲಸ ಮಾಡಬೇಕು. ಈ ಮಹಾ ಸಭಾಗೆ ಹೆಚ್ಚು ಸದಸ್ಯರನ್ನು ನೋಂದಾಯಿಸಿ, ಒಗ್ಗಟ್ಟಾಗಿರಿ. ಮುಡಾದಿಂದ ಒಕ್ಕಲಿಗ ಮಹಾಸಭಾಗೆ ಎರಡು ಎಕರೆ ಭೂಮಿ ಕೊಡಿಸುವುದರ ಜೊತೆಗೆ ವೈಯಕ್ತಿಕವಾಗಿಯೂ ಸಹಾಯ ಮಾಡುವುದಾಗಿ ತಿಳಿಸಿದರು.

ಸಮಾರಂಭದಲ್ಲಿ ವಿಶ್ವ ಒಕ್ಕಲಿಗ ಮಠದ ಪೀಠಾಧ್ಯಕ್ಷರಾದ ಶ್ರೀ ಚಂದ್ರಶೇಖರನಾಥಸ್ವಾಮೀಜಿ, ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್, ಡಾ.ಎಸ್.ಪಿ.ಯೋಗಣ್ಣ, ಮಹಾಸಭಾದ ಅಧ್ಯಕ್ಷ ಎನ್.ಬೆಟ್ಟೇಗೌಡ, ಡಾ.ಬಿ.ಎನ್.ರವೀಶ್, ಎಂ.ಎನ್. ಚಂದ್ರಶೇಖರ್, ಡಾ.ಶಂಕರೇಗೌಡ, ಮಾ.ವೆಂಕಟೇಶ್ ಇನ್ನಿತರರು ಉಪಸ್ಥಿತರಿದ್ದರು.

ಸಿಎಂ ಬೊಮ್ಮಾಯಿ ಸಾಧನೆ; ಧ್ವನಿಸುರುಳಿ ರೆಡಿ


ಬೆಂಗಳೂರು, ಅ.10(ಕೆಎಂಶಿ)–ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸಾಧನೆಗಳು ಹಾಗೂ ಅವರ ವ್ಯಕ್ತಿತ್ವ ಬಿಂಬಿಸುವ ಧ್ವನಿಸುರುಳಿಗಳು ಹೊರಬಿದ್ದಿವೆ. ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ರಾಜ್ಯ ಪ್ರವಾಸ ಕೈಗೊಳ್ಳುವ ಸಮಯದಲ್ಲಿ ಈ ಧ್ವನಿಸುರುಳಿಗಳನ್ನು ಬಳಸಿಕೊಳ್ಳಲು ಪಕ್ಷ ಮುಂದಾಗಿದೆ. ಬೊಮ್ಮಾಯಿ ಅವರ ಅಭಿಮಾನಿಗಳು ಈ ಧ್ವನಿ ಸುರುಳಿಗಳನ್ನು ಸಿದ್ಧಪಡಿಸಿದ್ದು, ಇದರಲ್ಲಿ ಮುಖ್ಯಮಂತ್ರಿಯಾಗಿ ಕಳೆದ 14 ತಿಂಗಳಲ್ಲಿ ಅವರು ಮಾಡಿರುವ ಸಾಧನೆಗಳನ್ನು ಜನರ ಮುಂದಿಡುವ ಪ್ರಯತ್ನ ನಡೆದಿದೆ. ಮೊದಲ ಬಜೆಟ್‌ನಲ್ಲೇ ಮಕ್ಕಳಿಗಾಗಿ ಪ್ರತ್ಯೇಕ ಬಜೆಟ್ ಕೊಟ್ಟಿದ್ದಾರೆ. ಅವರು ಜಾರಿಗೆ ತಂದಿರುವ ವಿದ್ಯಾನಿಧಿ, ವಿಧವೆಯರಿಗೆ–ವಯೋವೃದ್ಧರಿಗೆ ಪಿಂಚಣಿ ಹೆಚ್ಚಳ ಮಾಡಿರುವಂತಹದ್ದು, ಅಮೃತ ಯೋಜನೆಗಳು, ಪೌರಕಾರ್ಮಿಕರನ್ನು ಖಾಯಂ ಮಾಡಿರುವಂತಹದ್ದು ಜನಸೇವಕ ಯೋಜನೆ.



ರೈತ ಶಕ್ತಿ, ಪ್ರತಿ ಗ್ರಾಮದಲ್ಲಿ ಎರಡು ಯುವಕ ಸಂಘ ಸ್ಥಾಪನೆ ಮಾಡಿ, ಅವರಿಗೆ ಆರ್ಥಿಕ ನೆರವು ನೀಡಿರುವುದು, ಸ್ತ್ರೀ ಸಾಮರ್ಥ್ಯ ಯೋಜನೆಯಡಿ ಮಹಿಳೆಯರಿಗೆ ಆರ್ಥಿಕ ಸ್ವಾವಲಂಬನೆಗೆ ನೆರವು ನೀಡುವುದು ಸೇರಿದಂತೆ ಬೊಮ್ಮಾಯಿ ಅವರು ತಂದಿರುವ ಜನಪ್ರಿಯ ಯೋಜನೆಗಳನ್ನು ಈ ಧ್ವನಿಸುರುಳಿಯಲ್ಲಿ ಬಿಡಿಸಿಡಲಾಗಿದೆ.


ಅಷ್ಟೇ ಅಲ್ಲ, ಬೊಮ್ಮಾಯಿ ಅವರ ವ್ಯಕ್ತಿತ್ವದ ಬಗ್ಗೆ ಹಾಡುಗಳನ್ನು ಮಾಡಿದ್ದಾರೆ. ಮುಖ್ಯಮಂತ್ರಿಯವರು ಕಾಮನ್‌ಮ್ಯಾನ್ ಅಂತ ಜನಮಾನಸದಲ್ಲಿ ಅಚ್ಚಳಿಯದಂತೆ ಉಳಿದಿದ್ದಾರೆ. ಅವರು ಹೇಗೆ ಕಾಮನ್‌ಮ್ಯಾನ್ ಎಂದು ಹಾಡಿನ ಮೂಲಕ ಪ್ರಸ್ತುತಪಡಿಸಲಾಗಿದೆ.

ಹೆಚ್.ಡಿ.ಪ್ರೀತಮ್ ಪಿಹೆಚ್.ಡಿ



ಮೈಸೂರು,ಅ.10–ಡಾ.ಕೆ.ಎಸ್.ರಂಗಪ್ಪ ಅವರ ಮಾರ್ಗದರ್ಶನದಲ್ಲಿ ಹೆಚ್.ಡಿ.ಪ್ರೀತಮ್ ಅವರು ರಸಾಯನಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...




ಇಂದಿನ ಪಂಚಾಂಗ

11.10.2022 ಮಂಗಳವಾರ, ಮಳೆ ನಕ್ಷತ್ರ: ಚಿತ್ತ 11.10.2022 ರಿಂದ 23.10.2022
ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಆಶ್ವಯುಜ ಮಾಸ, ಕೃಷ್ಣ ಪಕ್ಷ,
ತಿಥಿ: ದ್ವಿತೀಯ, ನಕ್ಷತ್ರ : ಅಶ್ವಿನಿ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** 'ಮಧುಮೇಹ ತೊಂದರೆ' ಇರುವ ರೋಗಿಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆಯಿಂದಲೂ.
- **ಎನ್.ಜೆ.ಎಸ್. ಚಾರಿಟಬಲ್ ಟ್ರಸ್ಟ್, ಮೈಸೂರು ವೀರಶೈವ ಸಜ್ಜನ ಸಂಘ :** ಉಚಿತ ಹೃದಯ, ಕಣ್ಣು, ಹಲ್ಲು, ಚರ್ಮ ತಪಾಸಣೆ, ವೃದ್ಧಾರೋಗ್ಯ, ಯೋಗ, ಪ್ರಾಣ ವಿದ್ಯಾ ಶಿಬಿರ, ಸ್ಥಳ:ಕಂಠಿ ಮಲ್ಲಣ್ಣನವರ ಕಲ್ಯಾಣ ಮಂಟಪ, ಕಬೀರ್ ರಸ್ತೆ, ಬೆಳಗ್ಗೆ 9.30 ರಿಂದ.
- **ರಾಮ್‌ಸನ್ಸ್ ಕಲಾ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ.
- **ಗೊಂಬೆಗಳ ಪ್ರದರ್ಶನ :** ರಾಘವೇಂದ್ರ ಕೆ.ಎಸ್. ಅವರು ಕೈಯಿಂದ ಮಾಡಿರುವ 170 ಬೊಂಬೆಗಳ ಪ್ರದರ್ಶನ, ಸ್ಥಳ: ಇಂಚರ ಕಲಾ ಕ್ಷೇತ್ರ, ವಿಜಯನಗರ, ಬೆಳಗ್ಗೆ 10 ಗಂಟೆಯಿಂದ.
- **ಚಿತ್ಕಲಾ ಫೌಂಡೇಷನ್, ಹಾಸನ, ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್ :** ಬಿ.ಎನ್. ದೇಸಾಯಿ ಅವರಿಂದ ಪಕ್ಷಿ–ಕೀಟಗಳ ನವರಾತ್ರಿ ಕಲೋತ್ಸವ, ಏಕವ್ಯಕ್ತಿ ಛಾಯಾಚಿತ್ರ ಪ್ರದರ್ಶನ, ಸ್ಥಳ: ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿ, ವಿಜಯನಗರ, ಎರಡನೇ ಹಂತ, ಬೆಳಗ್ಗೆ 10 ಗಂಟೆಯಿಂದ.
- **ಜೆಎಸ್‌ಎಸ್ ನರ್ಸಿಂಗ್ ಕಾಲೇಜು :** ಮೆಟಾಮೊರ್‌ಪೋಸಿಸ್ ಇನ್ ಕ್ಲಿನಿಕಲ್ ಪ್ರಾಕ್ಟೀಸ್ ಕುರಿತು ಸಮ್ಮೇಳನ, ಮುಖ್ಯ ಅತಿಥಿಗಳು : ಅನ್ನೈ ಜೆಕೆಕೆ ಸಂಪೂರಾನಿ ಅಮ್ಮಾಳ್ ಕಾಲೇಜ್ ಆಫ್ ನರ್ಸಿಂಗ್, ನಾಮಕ್ಕಲ್, ತಮಿಳುನಾಡು ಡಾ. ಜಯಶೀಲನ್ ಮಾನಿಕಂ ದೇವದಾಸನ್, ಪ್ರೊ. ಎಲಿಜಬೆತ್ ವರ್ಕಿ, ಅಧ್ಯಕ್ಷತೆ : ಜೆಎಸ್‌ಎಸ್ ವಿದ್ಯಾಪೀಠದ ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್. ಮಹೇಶ್, ಸ್ಥಳ: ಜೆಎಸ್‌ಎಸ್ ಆಸ್ಪತ್ರೆ ಆವರಣ, ಬೆಳಗ್ಗೆ 10.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಶ್ರದ್ಧೆಯ ಶಿಲ್ಪ–ಮೈಸೂರು ಸುತ್ತಲಿನ ದೇಗುಲಗಳ ಪರಿಚಯ, ಪ್ರಸ್ತುತಿ– ಡಾ. ಟಿ.ಎಸ್. ಗೋಪಾಲ್, 6.40 ಅರಿವಿನ ಶಿಖರ– ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ– ದೀಪಿಕಾ ಪಾಂಡುರಂಗಿ, ಪಿ. ಸುರಭಿ, ವ್ಯಾಖ್ಯಾನ– ಡಾ. ಹೆಚ್.ಎಂ. ಕಲಾಶ್ರೀ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ – ದೂರ ಸರಿದರು ಕಾದಂಬರಿಯ ಪ್ರಸ್ತುತಿ– ಉಮೇಶ್.ಎಸ್., 9.00 ವೃತ್ತಿ ಮಾರ್ಗದರ್ಶನ–ಭೌತ ಚಿಕಿತ್ಸೆ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಡಾ.ಎಸ್.ಎನ್. ತೇಜಸ್ವಿನಿ ಅವರೊಂದಿಗೆ ಮಾತುಕತೆ, 10.00 ಗಾನರಸೋತ್ತುಂಗ ಶ್ರೀ ಶ್ಯಾಮಶಾಸ್ತ್ರಿಗಳ ರಚನೆಗಳನ್ನಾಧರಿಸಿದ ಕಾರ್ಯಕ್ರಮ ಸರಣಿ ಸಾಹಿತ್ಯ ಮತ್ತು ನಿರೂಪಣೆ– ಪ್ರೊ. ಆರ್.ವಿಶ್ವೇಶ್ವರನ್, ನಿರ್ಮಾಣ–ಗೀತಾ ರಮಾನಂದ್, 10.30ನಮ್ಮ ಆರೋಗ್ಯ–ಕ್ಯಾನ್ಸರ್ ಜಾಗೃತಿ ಕುರಿತ ಪ್ರಾಯೋಜಿತ ಕಾರ್ಯಕ್ರಮ, ವಿಷಯ– ಸ್ತನ ಕ್ಯಾನ್ಸರ್–ಲಕ್ಷಣಗಳು ಮತ್ತು ಚಿಕಿತ್ಸೆ

ಮಧ್ಯಾಹ್ನ: 12.05 ವನಿತಾ ವಿಹಾರ, 12.30 ದೇವರನಾಮ–ನರಸಿಂಹ ನಾಯಕ್, ಎಂ.ಎಸ್. ಶೀಲ, 12.45 ಮುದ್ರಣ ಮಾಧ್ಯಮ ಎದುರಿಸಿದ ಕೋವಿಡ್–ಮಾತನಾಡುತ್ತಾರೆ ಚೀ.ಜ. ರಾಜೀವ್, 1.20 ಭಾವಗೀತೆಗಳು–ಶಿವಮೊಗ್ಗ ವೇಣುಗೋಪಾಲ್, ಜಿ.ಪುಷ್ಪಲತಾ, 3.00 ನಿಲಯದ ಕಲಾವಿದರಿಂದ ವಾದ್ಯವೃಂದ, 4.00 ಕಥಾ ಕಾಲಕ್ಷೇಪ "ಭಕ್ತ ಪ್ರಹ್ಲಾದ"–ವಿದ್ವಾನ್ ಆರ್.ಗುರುರಾಜುಲು ನಾಯ್ಡು, 6.50 ಕೃಷಿರಂಗ–ಕಿಸಾನ್‌ವಾಣಿ– ಪಶುಗಳಲ್ಲಿ ಕಾಲುಬಾಯಿ ರೋಗ ಹಾಗೂ ನಿರ್ವಹಣೆ ಕುರಿತು ಡಾ.ಎನ್. ಸಂತೋಷ್‌ಗೌಡ ಅವರೊಡನೆ ಸಂದರ್ಶನ, 9.30 ಹೈದರಾಬಾದ್ ಸಹೋದರಿಯರು –ಯುಗಳ ಗಾಯನ, 10.00 ಕಾವ್ಯವಾಚನ, ವಾಚನ– ಹೆಚ್. ಯಜ್ಞೇಶ್, ವ್ಯಾಖ್ಯಾನ– ಸರ್ಪಂಗಳ ಈಶ್ವರಭಟ್

ಮೈಸೂರು ಮಿತ್ರ

ಮಂಗಳವಾರ 11 ಅಕ್ಟೋಬರ್ 2022



ಹುಟ್ಟುಹಬ್ಬ ಆಚರಿಸಿಕೊಂಡ ಪಾಲಿಕೆ ಮಾಜಿ ಸದಸ್ಯ ಪಿ.ದೇವರಾಜು ಅವರನ್ನು ಶ್ರೀ ಮನೆ ಮಂಚಮ್ಮ ದೇವಸ್ಥಾನ ಸೇವಾ ಟ್ರಸ್ಟ್ ಅಧ್ಯಕ್ಷ ಹುಯಿಲಾಳು ರಾಮಸ್ವಾಮಿ ಅಭಿನಂದಿಸಿದರು. ಈ ವೇಳೆ ಹುಯಿಲಾಳು ಜಯರಾಮು, ಗೋಪಾಲ್‌ಗೌಡ, ಸುನಿಲ್, ಮಾಲೇಗೌಡ ಇತರರಿದ್ದಾರೆ.

ರೇಷ್ಮೆ ಕೃಷಿ ಪ್ರಶಸ್ತಿಗೆ ಅರ್ಜಿ ಆಹ್ವಾನ

ಮೈಸೂರು,ಅ.10–ಜಿಲ್ಲಾ ಪಂಚಾಯತ್ ಹಾಗೂ ರೇಷ್ಮೆ ಉಪನಿರ್ದೇಶಕರ ಕಚೇರಿ ವತಿಯಿಂದ 2021–22ನೇ ಸಾಲಿನ ರೇಷ್ಮೆ ಕೃಷಿ ಪ್ರಶಸ್ತಿಗಾಗಿ ಪ್ರಗತಿಪರ ರೇಷ್ಮೆ ಬೆಳೆಗಾರರಿಂದ ಅರ್ಜಿ ಆಹ್ವಾನಿಸಿದೆ. ಆಸಕ್ತರು ಭರ್ತಿ ಮಾಡಿದ ಅರ್ಜಿಯನ್ನು ಅ.15ರೊಳಗಾಗಿ ಆಯಾ ರೇಷ್ಮೆ ವಿಸ್ತರಣಾಧಿಕಾರಿ/ರೇಷ್ಮೆ ಸಹಾಯಕ ನಿರ್ದೇಶಕರ ಕಚೇರಿಗೆ ಸಲ್ಲಿಸಬಹುದು. ಆಸಕ್ತರು ತಮ್ಮ ರೇಷ್ಮೆ ಪಾಸ್ ಪುಸ್ತಕ, ರೇಷ್ಮೆ ಮೊಟ್ಟೆ ಚಾಕಿ ಖರೀದಿ ಹಾಗೂ ರೇಷ್ಮೆಗೂಡು ಮಾರಾಟ ಮಾಡಿರುವ ಬಗ್ಗೆ ದಾಖಲಾತಿಗಳನ್ನು ಅರ್ಜಿಯೊಂದಿಗೆ ಲಗತ್ತಿಸಿ ಸಲ್ಲಿಸಬೇಕು ಎಂದು ಇಲಾಖೆ ಉಪನಿರ್ದೇಶಕಿ ಎಸ್.ಕೆ.ಮಂಜುಳ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕ್ರೈಂ ಬಾಕ್ಸ್

ಪ್ರಮುಖ ದಾಖಲೆ, ನಗದು, ಬೆಲೆಬಾಳುವ ಪದಾರ್ಥಗಳಿದ್ದ ವಿದೇಶಿ ಮಹಿಳೆ ಬ್ಯಾಗ್ ಕಳವು



ಮೈಸೂರು,ಅ.10–ವಿದೇಶಿ ಪ್ರವಾಸಿ ಯೊಬ್ಬರು ಕಾರಿನಲ್ಲಿಟ್ಟಿದ್ದ ಬೆಲೆ ಬಾಳುವ ವಸ್ತುಗಳಿದ್ದ ಬ್ಯಾಗನ್ನು ಕಳವು ಮಾಡಿ ರುವ ಘಟನೆ ಸಯ್ಯಾಜಿ ರಾವ್ ರಸ್ತೆಯಲ್ಲಿ ನಡೆದಿದೆ. ವಿದೇಶದಿಂದ ಬೆಂಗಳೂರಿನ ಮಹದೇವಪುರದಲ್ಲಿರುವ ಬ್ಯಾಗ್‌ಮನೆ ವರ್ಲ್ಡ್ ಟೆಕ್ನಾಲಜಿ ಸೆಂಟರ್‌ಗೆ ಆಗಮಿಸಿದ್ದ ಇವಾಬೆಟಾ ಕೊಂದ್ರ (53) ಎಂಬ ಮಹಿಳೆ ತನ್ನ ಸ್ನೇಹಿತರಾದ ಭಾರತದ ಬೋನಿ ಸೇಟ್ ಮತ್ತು ಪೋಲ್ಯಾಂಡ್‌ನ ಗ್ರೆಜಾರ್ಜ್ ಪಬೀನ್ ಎಂಬುವ ರೊಂದಿಗೆ ಬೆಂಗಳೂರಿನಲ್ಲಿ ಟ್ಯಾಕ್ಸಿ ಬುಕ್ ಮಾಡಿಕೊಂಡು ಅ.8ರಂದು ಮೈಸೂರಿಗೆ ಪ್ರವಾಸ ಬಂದಿದ್ದಾರೆ. ಅಂದು ಸಂಜೆ 5.30ರ ವೇಳೆಯಲ್ಲಿ ಸಯ್ಯಾಜಿರಾವ್ ರಸ್ತೆಯಲ್ಲಿರುವ ಕಾವೇರಿ ಎಂಪೋರಿಯಂಗೆ ಭೇಟಿ ನೀಡಿ ಹಿಂದಿರುಗಿದಾಗ ಅವರು ಕಾರಿನಲ್ಲಿಟ್ಟಿದ್ದ ಲೇಡಿ ಬ್ಯಾಗ್ ಕಳುವಾಗಿದೆ.

ಈ ಬ್ಯಾಗ್‌ನಲ್ಲಿ ಪಾಸ್‌ಪೋರ್ಟ್, ಅಮೇರಿಕನ್ ಎಕ್ಸ್‌ಪ್ರೆಸ್ ಕ್ರೆಡಿಟ್ ಕಾರ್ಡ್, ಪೋಲೀಶ್ ಐಡಿ ಕಾರ್ಡ್, ಡಚ್ ಐಡಿ ಕಾರ್ಡ್, ಭಾರತದ 24,216 ರೂ. ಮೌಲ್ಯದ 300 ಯುರೋ, ಭಾರತದ 36,708 ರೂ. ಮೌಲ್ಯದ 1000 ಪಿಎಲ್‌ಎನ್ ಮತ್ತು 250 ಯುಎಸ್‌ಡಿ, 16,000 ರೂ. ಮೌಲ್ಯದ ಸನ್‌ಗ್ಲಾಸ್, 8000 ರೂ. ಮೌಲ್ಯದ ಜೆಬಿಎಲ್ ಏರ್‌ಪೋಡ್, ಲಾಯಲ್ಟಿ ಕಾರ್ಡ್, ಕಾಸ್ಮೆಟಿಕ್ಸ್, ಮನೆಯ ಕೀಲಿಗಳು, ಬೆಂಗಳೂರಿನಲ್ಲಿ ಅವರು ವಾಸ್ತವ್ಯವಿದ್ದ ಹೋಟೆಲ್‌ನ ಕೀ, 40,360 ರೂ. ಮೌಲ್ಯದ ಬಿಎಂಡಬ್ಲ್ಯೂ ಕಾರ್ ಕೀ ಮುಂತಾದವು ಬ್ಯಾಗ್‌ನಲ್ಲಿತ್ತು ಎಂದು ಅವರು ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಈ ಸಂಬಂಧ ದೇವರಾಜ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಹುಮಾನದ ಆಸೆ ತೋರಿಸಿ ಮಹಿಳೆಗೆ 1.22 ಲಕ್ಷ ರೂ. ಆನ್‌ಲೈನ್ ವಂಚನೆ

ಮೈಸೂರು, ಅ.10– ಬಹುಮಾನ ಬಂದಿದೆ ಎಂದು ಮೊಬೈಲ್‌ಗೆ ಮೆಸೇಜ್ ರವಾನಿಸಿ ಮಹಿಳೆಯೊಬ್ಬರಿಗೆ ಆನ್‌ಲೈನ್ ಮೂಲಕ 1.22 ಲಕ್ಷ ರೂ. ವಂಚಿಸಿರುವ ಬಗ್ಗೆ ವರದಿಯಾಗಿದೆ.

ಮೈಸೂರಿನ ರಾಜೇಂದ್ರನಗರ ನಿವಾಸಿ ಮಂಗಳಗೌರಿ (38) ಎಂಬುವರ ಮೊಬೈಲ್‌ಗೆ 10 ಲಕ್ಷ ರೂ. ಬಹು ಮಾನ ಬಂದಿರುವುದಾಗಿ ಮೆಸೇಜ್ ರವಾನಿಸಲಾಗಿದೆ. ಮೆಸೇಜ್ ಬಂದ ನಂಬರನ್ನು ಅವರು ಸಂಪರ್ಕಿಸಿದಾಗ ಆದಾಯ ತೆರಿಗೆ ಮತ್ತು ಜಿಎಸ್‌ಟಿ ಶುಲ್ಕ ಎಂದು ಅವರಿಂದ 1,22,100 ರೂ. ವರ್ಗಾವಣೆ ಮಾಡಿಸಿಕೊಂಡು ವಂಚನೆ ಎಸಗಲಾಗಿದೆ. ಈ ಸಂಬಂಧ ಮೈಸೂರು ನಗರ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಫೈನಾನ್ಸ್ ಕಚೇರಿ ಹಿಂಬಾಗಿಲು ಮುರಿದು ಸಿಸಿ ಕ್ಯಾಮರಾ, ಡಿವಿಆರ್ ಕಳವು

ನಂಜನಗೂಡು, ಅ.10– ಸ್ಮಾಲ್ ಫೈನಾನ್ಸ್ ಹಿಂಬಾಗಿಲು ಮುರಿದು ಸಿಸಿ ಕ್ಯಾಮರಾ ಹಾಗೂ ಡಿವಿಆರ್ ಕಳವು ಮಾಡಿರುವ ಘಟನೆ ನಂಜನಗೂಡು ತಾಲೂಕು ಕನಕನಗರದಲ್ಲಿ ನಡೆದಿದೆ. ಕನಕನಗರದಲ್ಲಿರುವ ಇಎಸ್‌ಎಎಫ್ ಸ್ಮಾಲ್ ಫೈನಾನ್ಸ್ ಬ್ಯಾಂಕ್‌ನ್ನು ಅ.7ರ ರಾತ್ರಿ ಬಾಗಿಲು ಹಾಕಿಕೊಂಡು ಸಿಬ್ಬಂದಿ ಹೋಗಿದ್ದು, ಅ.8ರ ಬೆಳಗಿನ ಜಾವ 2.28ರಲ್ಲಿ ವಿ.ಪ್ರೊಟೆಕ್ಟ್ ಟೀಂನವರು ಬ್ಯಾಂಕ್‌ನ ವ್ಯಾನೇಜರ್ ಸಿಂಧು ಅವರಿಗೆ ಕರೆ ಮಾಡಿ, ಲಾಕರ್ ಟಚ್ ಆಗಿರುವ ಬಗ್ಗೆ ಮಾಹಿತಿ ನೀಡಿದ್ದಾರೆ. ತಕ್ಷಣವೇ ಸಿಂಧು ನಂಜನಗೂಡು ಪೊಲೀಸರಿಗೆ ಕರೆ ಮಾಡಿ ವಿಷಯ ತಿಳಿಸಿದ್ದು, ಪೊಲೀಸರು ಮತ್ತು ಬ್ಯಾಂಕ್ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ನೋಡಿದಾಗ ಖದೀಮರು ಬ್ಯಾಂಕ್‌ನ ಹಿಂಬಾಗಿಲು ಮುರಿದು ಸಿಸಿ ಕ್ಯಾಮರಾ ಮತ್ತು ಡಿವಿಆರ್ ಕಳವು ಮಾಡಿರುವುದು ಹಾಗೂ ಲಾಕರ್ ಅನ್ನು ತೆರೆಯಲು ಪ್ರಯತ್ನಿಸಿರುವುದು ಕಂಡು ಬಂದಿದೆ. ಈ ಸಂಬಂಧ ನಂಜನಗೂಡು ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹೋಟೆಲ್‌ನ ಗಲ್ಲಾ ಪೆಟ್ಟಿಗೆ ಮೀಟಿ ನಗದು, ಮ್ಯಾನೇಜರ್ ಸ್ಕೂಟರ್ ಕದ್ದೊಯ್ದ ಸೆಕ್ಯೂರಿಟಿ!

ಬೈಲುಕುಪ್ಪೆ, ಅ.10– ಕಾವಲಿಗಿದ್ದ ಸೆಕ್ಯೂರಿಟಿ ಗಾರ್ಡ್ ಹೋಟೆಲ್‌ನ ಗಲ್ಲಾ ಪೆಟ್ಟಿಗೆ ಮೀಟಿ ನಗದು ಮತ್ತು ಮ್ಯಾನೇಜರ್‌ನ ಸ್ಕೂಟರ್ ಕಳವು ಮಾಡಿರುವ ಘಟನೆ ಬೈಲುಕುಪ್ಪೆ ಸಮೀಪದ ಮಂಚದೇವನಹಳ್ಳಿಯಲ್ಲಿರುವ ಸಿರಿ ಅಂಬಾರಿ ಹೋಟೆಲ್‌ನಲ್ಲಿ ನಡೆದಿದೆ. ಈ ಹೋಟೆಲ್‌ಗೆ ಬಾಲಾಜಿ ಎಂಟರ್‌ಪ್ರೈಸಸ್ ಲೇಬರ್ ಅಂಡ್ ಸೆಕ್ಯೂರಿಟಿ, ಹೌಸ್‌ಕೀಪಿಂಗ್ ಸರ್ವೀಸ್ ಸಂಸ್ಥೆಯಿಂದ ಸೆಕ್ಯೂರಿಟಿ ಗಾರ್ಡ್‌ಗಳ ಸೇವೆ ಪಡೆಯಲಾಗಿತ್ತು. ಅ.3ರಂದು ಪಿರಿಯಾಪಟ್ಟಣ ತಾಲೂಕು ಕೀರನಹಳ್ಳಿ ಗ್ರಾಮದ ರಘು ಎಂಬಾತ ಹೊಸದಾಗಿ ಸೆಕ್ಯೂರಿಟಿ ಗಾರ್ಡ್ ಕೆಲಸಕ್ಕೆ ಬಂದು ಹೋಗಿದ್ದಾನೆ. ಮತ್ತೆ ಆತ ಅ.5ರಂದು ರಾತ್ರಿ ಕೆಲಸಕ್ಕೆ ಹಾಜರಾಗಿದ್ದು, ಅ.6ರ ಮುಂಜಾನೆ 3 ಗಂಟೆ ಸುಮಾರಿನಲ್ಲಿ ರೂಂ ಬೇಕೆಂದು ಗ್ರಾಹಕರು ಹೋಟೆಲ್‌ನ ಮ್ಯಾನೇಜರ್ ಹನೀಫ್ ಅವರಿಗೆ ಕರೆ ಮಾಡಿದ್ದಾರೆ. ಅವರು ಹೊರಬಂದಾಗ ಹೋಟೆಲ್ ಗಲ್ಲಾಪೆಟ್ಟಿಗೆಯನ್ನು ಕಬ್ಬಿಣದ ರಾಡ್‌ನಿಂದ ಮೀಟಿ ಅವರಲ್ಲಿದ್ದ 30 ಸಾವಿರ ರೂ. ಹಾಗೂ ಹೋಟೆಲ್ ಆವರಣದಲ್ಲಿ ನಿಲ್ಲಿಸಿದ್ದ ಹನೀಫ್ ಅವರ ಟಿವಿಎಸ್ ಜ್ಯುಪಿಟರ್ (ಕೆಎ12, ಯು5942) ಅನ್ನು ಕಳವು ಮಾಡಿರುವುದು ಬೆಳಕಿಗೆ ಬಂದಿದೆ. ಸೆಕ್ಯೂರಿಟಿ ಏಜೆನ್ಸಿಯ ಮಾಲೀಕರಿಗೆ ವಿಷಯ ತಿಳಿಸಿ ಅಂದು ರಾತ್ರಿ ಸೆಕ್ಯೂರಿಟಿಯಾಗಿ ಕೆಲಸ ಮಾಡುತ್ತಿದ್ದ ರಘು ಎಂಬಾತನ ಗ್ರಾಮಕ್ಕೆ ತೆರಳಿ ನೋಡಿದಾಗ, ಆತ ನಾಪತ್ತೆಯಾಗಿದ್ದ. ಈ ಹಿನ್ನೆಲೆಯಲ್ಲಿ ಆತನೇ ಕಳವು ಮಾಡಿದ್ದಾನೆ ಎಂದು ಹನೀಫ್ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಬೈಲುಕುಪ್ಪೆ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಆಯುಷ್ ಸ್ಟಾಫ್ ಕ್ವಾಟ್ರಸ್‌ನಲ್ಲಿ ಚಿನ್ನಾಭರಣ ಕಳವು

ಮೈಸೂರು,ಅ.10–ಮನೆ ಬೀಗ ಮುರಿದು ಚಿನ್ನಾಭರಣ ಕಳವು ಮಾಡಿರುವ ಘಟನೆ ಮಾನಸಗಂಗೋತ್ರಿಯಲ್ಲಿರುವ ಆಯುಷ್ ಸ್ಟಾಫ್ ಕ್ವಾಟ್ರಸ್‌ನಲ್ಲಿ ನಡೆದಿದೆ. ಮಾನಸಗಂಗೋತ್ರಿಯ ಆಯುಷ್‌ನಲ್ಲಿ ಅಸಿ ಸ್ಟೆಂಟ್ ಮೆಡಿಕಲ್ ಆಫೀಸರ್ ಆಗಿ ಕೆಲಸ ಮಾಡುತ್ತಿರುವ ಆರ್.ರಾಧಾಮಣಿ (40) ಅವರು ತಮ್ಮ ಮಗಳನ್ನು ನೋಡಲು ಸೆ.30ರಂದು ಮಧ್ಯಾಹ್ನ ಮನೆಗೆ ಬೀಗ ಹಾಕಿಕೊಂಡು ತುಮಕೂರಿಗೆ ಹೋಗಿದ್ದರು. ಅ.7ರಂದು ಆಯುಷ್‌ನ ಸೆಕ್ಯೂರಿಟಿ ಗಾರ್ಡ್ ಅವರಿಗೆ ಕರೆ ಮಾಡಿ ಮನೆ ಬಾಗಿಲು ಮುರಿದಿರುವ ಬಗ್ಗೆ ತಿಳಿಸಿದ್ದಾನೆ. ಹಿಂದಿರುಗಿ ಬಂದು ಅವರು ಪರಿಶೀಲಿಸಿದಾಗ ಮನೆ ಬೀಗ ಮುರಿದು ಒಳನುಗ್ಗಿದ್ದ ಖದೀಮರು 44 ಗ್ರಾಂ ತೂಕದ ಚಿನ್ನಾಭರಣ ಕಳವು ಮಾಡಿರುವುದು ಗೊತ್ತಾಗಿದೆ. ಜಯಲಕ್ಷ್ಮೀಪುರಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಸ್ತುಪ್ರದರ್ಶನದಲ್ಲಿ ಸೈಬರ್ ಅಪರಾಧ ಪ್ರಕರಣಗಳ ಮಾಹಿತಿ ಮಳಿಗೆ

ಮೈಸೂರು ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ಉದ್ಘಾಟನೆ



ಮೈಸೂರು ದಸರಾ ವಸ್ತು ಪ್ರದರ್ಶನದಲ್ಲಿ ಸೈಬರ್ ಅಪರಾಧ ಪ್ರಕರಣಗಳ ನಿಯಂತ್ರಣ ಹಾಗೂ ಜಾಗೃತಿ ಕುರಿತು ಸಿಐಡಿ ಸಹಯೋಗ ದೊಂದಿಗೆ ಪೊಲೀಸ್ ಇಲಾಖೆ ವತಿಯಿಂದ ತೆರೆದಿರುವ ಮಳಿಗೆಯನ್ನು ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ವೀಕ್ಷಿಸಿದರು.

ಮೈಸೂರು, ಅ.10(ಎಂಕೆ)– ಮೈಸೂರು ದಸರಾ ವಸ್ತು ಪ್ರದರ್ಶನದಲ್ಲಿ ಸೈಬರ್ ಅಪರಾಧ ಪ್ರಕರಣಗಳ ನಿಯಂತ್ರಣ ಹಾಗೂ ಜಾಗೃತಿ ಕುರಿತು ಸಿಐಡಿ ಸಹಯೋಗದೊಂದಿಗೆ ಕರ್ನಾಟಕ ಪೊಲೀಸ್ ಇಲಾಖೆ ವತಿಯಿಂದ ತೆರೆದಿರುವ ಮಳಿಗೆಯನ್ನು ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ಸೋಮವಾರ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಹೆಚ್ಚಾಗುತ್ತಿರುವ ಸೈಬರ್ ಅಪರಾಧ ಪ್ರಕರಣಗಳ ನಿಯಂತ್ರಣಕ್ಕೆ ಸಾಕಷ್ಟು ಉಪಯುಕ್ತವಾದ ಮಾಹಿತಿಗಳನ್ನು ಈ ಮಳಿಗೆಯಲ್ಲಿ ನೀಡಲಾಗಿದೆ. ಮಳಿಗೆಯಲ್ಲಿರುವ ಕ್ಯೂರ್ ಕೋಡ್‌ಗಳನ್ನು ಸ್ಕ್ಯಾನ್ ಮಾಡಿ ವಿವಿಧ ಬಗೆಯ ಸೈಬರ್ ಕ್ರೈಂಗಳ ಕುರಿತಾದ ಮಾಹಿತಿಯುಳ್ಳ ವಿಡಿಯೋಗಳನ್ನು ಡೌನ್‌ಲೋಡ್ ಮಾಡಿಕೊಂಡು ತಾವು ನೋಡುವುದಲ್ಲದೆ ಬೇರೆಯವರಿಗೂ ಕಳುಹಿಸಬಹುದಾಗಿದೆ ಎಂದರು.

ಸೈಬರ್ ಕ್ರೈಂ ಪತ್ತೆಗೆ ಕರ್ನಾಟಕ ಪೊಲೀಸ್ ಇಲಾಖೆ ತೆಗೆದುಕೊಂಡಿರುವ ಕ್ರಮಗಳ ಬಗ್ಗೆಯೂ ಮಾಹಿತಿ ಪಡೆದುಕೊಳ್ಳಬಹುದಾಗಿದೆ. ಮುಖ್ಯವಾಗಿ ಒಟಿಪಿ, ಆನ್‌ಲೈನ್ ಜಾಹಿರಾತು, ಕೆಲಸದ ಆಮಿಷ, ಲೋನ್ ಆ್ಯಪ್ ಸೇರಿದಂತೆ ಇತರೆ ಮಾರ್ಗಗಳ ಮೂಲಕ ವಂಚಿಸಿವವರ ಪತ್ತೆ ಕಾರ್ಯದ ಮಾಹಿತಿಯನ್ನು ತಿಳಿದುಕೊಳ್ಳಬಹುದಾಗಿದೆ. ಸೈಬರ್ ವಂಚನೆಗೆ ಒಳಗಾದವರು ಸೆನ್ ಪೊಲೀಸ್ ಹಾಗೂ ತುರ್ತು ಸಹಾಯವಾಣಿ 112ಗೆ ಕರೆ ಮಾಡಿ ಮಾಹಿತಿ ನೀಡಿ, ನಂತರ ದೂರು ದಾಖಲು ಮಾಡಬಹುದಾಗಿದೆ. ಸಾರ್ವಜನಿಕರಿಗೆ ಈ ಸೈಬರ್ ಕ್ರೈಂ ಕುರಿತಾದ ಮಳಿಗೆ ಅತ್ಯಂತ ಉಪಯುಕ್ತವಾಗಿದ್ದು, ಭೇಟಿ ನೀಡುವಂತೆ ಮನವಿ ಮಾಡಿದರು.

ಸೈಬರ್ ಕ್ರೈಂ ವಿಭಾಗದ ಎಸ್‌ಪಿ ಅನುಚೇತ್ ಮಾತನಾಡಿ, ಸೈಬರ್ ಕ್ರೈಂ ನಿಯಂತ್ರಣಕ್ಕೆ ಪೊಲೀಸ್ ಇಲಾಖೆಯ ಬೇರೆ ಬೇರೆ ವಿಭಾಗಗಳಲ್ಲಿ ನಡೆಯುವ ಕಾರ್ಯಚಟುವಟಿಕೆಗಳ ಮಾಹಿತಿ ನೀಡಲಾಗಿದೆ. 16 ಬಗೆಯ ಸೈಬರ್ ಕ್ರೈಂಗಳಿದ್ದು, ಅಪರಾಧಿಗಳಿಗೆ ಕನಿಷ್ಠ ಮೂರು ವರ್ಷದಿಂದ ಜೀವಾವಧಿ ಶಿಕ್ಷೆ ವಿಧಿಸಲಾಗುವುದು. ಆನ್‌ಲೈನ್ ವಂಚನೆಗೆ ಒಳಗಾದವರು ಏನೂ ಮಾಡಬೇಕು ಎಂಬುದನ್ನು ಸಂಕ್ಷಿಪ್ತವಾಗಿ ತಿಳಿಸಲಾಗಿದ್ದು, ವಸ್ತು ಪ್ರದರ್ಶನಕ್ಕೆ ಭೇಟಿ ನೀಡುವವರು ಮಳಿಗೆ ವೀಕ್ಷಣೆ ಮಾಡುವಂತೆ ತಿಳಿಸಿದರು.

ವಿಡಿಯೋಗಳ ಪ್ರಸಾರ: ಮಳಿಗೆಯಲ್ಲಿ ಬೆಳಿಗ್ಗೆಯಿಂದ ರಾತ್ರಿವರೆಗೂ ಟಿವಿ ಮೂಲಕ ಸೈಬರ್ ಕ್ರೈಂ ಕುರಿತ ವಿಡಿಯೋಗಳನ್ನು ಪ್ರಸಾರ ಮಾಡಲಾಗುವುದು. ಭೇಟಿ ನೀಡುವವರು ಕರಪತ್ರಗಳನ್ನು ಪಡೆದು, ಪೋಸ್ಟರ್‌ಗಳ ವೀಕ್ಷಣೆ ಜೊತೆಗೆ ವಿಡಿಯೋಗಳನ್ನು ನೋಡಬಹುದಾಗಿದೆ ಇದೇ ವೇಳೆ ಸೈಬರ್ ಅಪರಾಧ ತಡೆ, ಸುರಕ್ಷಾ ಸಲಹೆಗಳುಳ್ಳ ಕರಪತ್ರ ಬಿಡುಗಡೆ ಮಾಡಲಾಯಿತು. ದಸರಾ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್‌ಗೌಡ, ಮೌಂಟೆಡ್ ಕಮಾಂಡೆಂಟ್ ಎಂ.ಜಿ.ನಾಗರಾಜು, ಸೈಬರ್ ಕ್ರೈಂ ವಿಭಾಗದ ಡಿವೈಎಸ್‌ಪಿ ಯಶವಂತ್, ಎಸಿಪಿ ಶಶಿಧರ್ ಇದ್ದರು.

ಕಾಂಪೋಸ್ಟ್ ಮಳಿಗೆ ಉದ್ಘಾಟನೆ....



ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ 'ಕಸದಿಂದ ರಸ' ಶೀರ್ಷಿಕೆಯಡಿ ನಿರ್ಮಾಣಗೊಂಡಿರುವ ಮಳಿಗೆಯನ್ನು ಉದ್ಘಾಟಿಸಲಾಯಿತು. ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್.ಮಹದೇವಯ್ಯ, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್, ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್‌ಗೌಡ, ಕಾಡಾ ಅಧ್ಯಕ್ಷ ನಿಜಗುಣರಾಜು, ಕಾಂಪೋಸ್ಟ್ ಅಭಿವೃದ್ಧಿ ನಿಗಮ ನಿಯಮಿತ ಉಪಾಧ್ಯಕ್ಷ ಹೆಚ್.ಆರ್.ಸತೀಶ್, ನಿರ್ದೇಶಕ ಸದಾಶಿವಯ್ಯ ಮತ್ತಿತರರಿದ್ದರು.



ಮೈಸೂರು ರೈಲ್ವೆ ನಿಲ್ದಾಣಕ್ಕೆ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರ ಹೆಸರು ನಾಮಕರಣ ಮಾಡುವಂತೆ ಕೇಂದ್ರ ರೈಲ್ವೆ ಸಚಿವರಿಗೆ ಮನವಿ ಪತ್ರವನ್ನು ಮೈಸೂರಿನ ಡಿ.ದೇವರಾಜ ಅರಸು ಪ್ರತಿಮೆ ಪ್ರತಿಷ್ಠಾಪನಾ ಸಮಿತಿ ಆಶ್ರಯದಲ್ಲಿ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಸೋಮವಾರ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದರು. ಈ ವೇಳೆ ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕರೆ ಗೋಪಾಲ್, ಮಾಜಿ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ, ಎಂ.ಚಂದ್ರಶೇಖರ್, ರಾಜಶೇಖರ ಕದಂಬ, ಮಾಜಿ ಮೇಯರ್ ಪುರುಷೋತ್ತಮ್, ಅರಸು ಪ್ರತಿಮೆ ಪ್ರತಿಷ್ಠಾಪನಾ ಸಮಿತಿ ಅಧ್ಯಕ್ಷ ಜಾಕೀರ್ ಹುಸೇನ್ ಇತರರಿದ್ದರು.

ನಕ್ಕರೆ ಅದೇ ಸ್ವರ್ಗ

ಹೆಂಡತಿ : ವಧು ಪರೀಕ್ಷೆಯ ಸಮಯದಲ್ಲಿ ನೀವು ತುಂಬಾ ಕೋಪದಲ್ಲಿದ್ರಿ ನೆನಪಿದೆಯೇ?

ಗಂಡ : ಹೌದು ! ಕೋಪದಲ್ಲಿ ತೆಗೆದುಕೊಳ್ಳುವ ಯಾವ ನಿರ್ಧಾರವೂ ಸರಿಯಿರುವುದಿಲ್ಲ ಎಂದು ನಮ್ಮ ಮದುವೆಯ ನಂತರವೇ ಗೊತ್ತಾದದ್ದು

ಮೈಸೂರು ಮಿತ್ರ
ಮಂಗಳವಾರ, 11 ಅಕ್ಟೋಬರ್ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಭವಿಷ್ಯತ್ತಿನೊಂದಿಗೆ ಯಾರು ಅತಿ ಸಮೀಪವರ್ತಿಯಾಗಿದ್ದಾನೋ ಅವನನ್ನು ನಾನು ಸನ್ಮಾರ್ಗಿ ಎಂದು ಭಾವಿಸುತ್ತೇನೆ. –ಹೆನ್ರಿಕ್ ಇಬ್ಸನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಊರನ್ನೇ ಬಿಟ್ಟೋನಿಗೆ ನೀರಿನ ಹಂಗೇನು

ನಿಮ್ಮ ಪತ್ರಗಳು

ಮುತ್ಸದ್ದಿ ರಾಜಕಾರಣಿ ಮುಲಾಯಂ

ಮಾನ್ಯರೆ,



ದೇಶದ ಹಿರಿಯ ಮುತ್ಸದ್ದಿ ರಾಜಕಾರಣಿ, ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿ, ಮಾಜಿ ಕೇಂದ್ರ ರಕ್ಷಣಾ ಸಚಿವ ಹಾಲಿ ಲೋಕಸಭಾ ಸದಸ್ಯ ಮುಲಾಯಂ ಸಿಂಗ್ ಯಾದವ್ (22.11.1939– 10.10.2022) ಉಸಿರಾಟದ ಸಮಸ್ಯೆಯಿಂದಾಗಿ ತಮ್ಮ 82ನೇ ವಯಸ್ಸಿನಲ್ಲಿ ನಿಧನ ಹೊಂದಿದ್ದಾರೆ. ಸಮಾಜವಾದಿ ಪಕ್ಷದ ಸಂಸ್ಥಾಪಕ ಅಧ್ಯಕ್ಷರಾಗಿದ್ದ ಮುಲಾಯಂ ಸಿಂಗ್ ಯಾದವ್ ದೇಶದ ಅತಿ ದೊಡ್ಡ ರಾಜ್ಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಉತ್ತರಪ್ರದೇಶದಲ್ಲಿ ಮೂರು ಬಾರಿ ಮುಖ್ಯಮಂತ್ರಿಗಳಾಗಿ ಸೇವೆ ಸಲ್ಲಿಸಿ, ದಾಖಲೆ ಬರೆದಿದ್ದಾರೆ. ಕೇಂದ್ರದಲ್ಲಿ ತೃತೀಯ ರಂಗ ಸರ್ಕಾರದ ರಚನೆಯಲ್ಲೂ ಸಹ ಪ್ರಮುಖ ಪಾತ್ರ ವಹಿಸಿದ್ದ ಮುಲಾಯಂ ಸಿಂಗ್ ಯಾದವ್, 01.06.1996ರಿಂದ 19.03.1998ರವರೆಗೆ ಅಂದಿನ ಪ್ರಧಾನಮಂತ್ರಿಗಳಾಗಿದ್ದ ಹೆಚ್.ಡಿ.ದೇವೇಗೌಡ ಹಾಗೂ ದಿವಂಗತ ಐ.ಕೆ.ಗುಜ್ರಾಲ್ ಸಚಿವ ಸಂಪುಟದಲ್ಲಿ ರಕ್ಷಣಾ ಸಚಿವರಾಗಿ ಉತ್ತಮ ಸೇವೆ ಸಲ್ಲಿಸಿದ್ದಾರೆ. ರಾಜ್ಯ ಹಾಗೂ ಕೇಂದ್ರ ಮಟ್ಟದಲ್ಲಿ ಹಲವು ಪ್ರಮುಖ ಜವಾಬ್ದಾರಿಗಳನ್ನು ಅತ್ಯಂತ ಯಶಸ್ವಿಯಾಗಿ ನಿರ್ವಹಿಸಿರುವ ಮುಲಾಯಂ ಸಿಂಗ್ ಯಾದವ್ 10 ಬಾರಿ ಶಾಸಕರಾಗಿ, ಏಳು ಬಾರಿ ಸಂಸದರಾಗಿ ದಾಖಲೆ ಬರೆದಿದ್ದಾರೆ. 1992ರಲ್ಲಿ ತಮ್ಮದೇ ಆದ ಸಮಾಜವಾದಿ ಪಕ್ಷ (ಎಸ್‌ಪಿ)ವನ್ನು ಸ್ಥಾಪಿಸಿ ಮುಲಾಯಂ ಸಿಂಗ್ ಯಾದವ್, ಪಕ್ಷಕ್ಕೆ ಉತ್ತರ ಪ್ರದೇಶದಲ್ಲಿ ಭದ್ರ ನೆಲೆ ಒದಗಿಸಿದ್ದರು. ಅವರ ಮಗ ಅಖಿಲೇಶ್ ಯಾದವ್ ಉತ್ತರ ಪ್ರದೇಶದ 20ನೇ ಮುಖ್ಯಮಂತ್ರಿಯಾಗಿ ಕಾರ್ಯನಿರ್ವಹಿಸಿದ್ದಾರೆ. ಭಾರತೀಯ ಜನತಾ ಪಕ್ಷದ ಕಡು ವಿರೋಧಿಯಾಗಿದ್ದ ಮುಲಾಯಂ ಸಿಂಗ್ ಯಾದವ್, ರಾಷ್ಟ್ರೀಯ ಪಕ್ಷಗಳಾದ ಬಿಜೆಪಿ ಹಾಗೂ ಕಾಂಗ್ರೆಸ್‌ಗೆ ಪರ್ಯಾಯವಾಗಿ ತೃತೀಯ ರಂಗವನ್ನು ತಮ್ಮ ಮಿತ್ರರಾದ ಜ್ಯೋತಿ ಬಸು, ಚಂದ್ರಬಾಬು ನಾಯ್ಡು, ಎಸ್.ಆರ್.ಬೊಮ್ಮಾಯಿ, ಹರಿಕಿಶನ್ ಸಿಂಗ್ ಸುರ್ಜಿತ್ ಮುಂತಾದವರೊಡನೇ ಸೇರಿ ಸ್ಥಾಪಿಸಿದ್ದರು. ತೃತೀಯ ರಂಗ ಹೆಚ್.ಡಿ.ದೇವೇಗೌಡರ ನೇತೃತ್ವದಲ್ಲಿ 1.6.1996ರಂದು ಕೇಂದ್ರದಲ್ಲಿ ಸರ್ಕಾರ ರಚಿಸಿತು. ಹಿರಿಯ ರಾಜಕೀಯ ಮುತ್ಸದ್ದಿಯಾಗಿದ್ದ ಮುಲಾಯಂ ಅವರನ್ನು ದೇವೇಗೌಡರು ತಮ್ಮ ಸಂಪುಟದಲ್ಲಿ ರಕ್ಷಣಾ ಸಚಿವರನ್ನಾಗಿ ನೇಮಕ ಮಾಡಿಕೊಂಡರು. ಮುಂದೆ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದ ಇಂದ್ರಕುಮಾರ್ ಗುಜ್ರಾಲ್ ಸಂಪುಟದಲ್ಲಿ ಕೂಡ ಅವರು ಇದೇ ಖಾತೆಯನ್ನು ಯಶಸ್ವಿಯಾಗಿ ನಿರ್ವಹಿಸಿದರು.

ಸಮಾಜವಾದಿ ಪಕ್ಷವು ಉತ್ತರ ಪ್ರದೇಶದ ರಾಜಕೀಯದಲ್ಲಿ ಮಹತ್ವದ ಸ್ಥಾನ ಹೊಂದಿದೆ. ಇದಕ್ಕೆ ಮುಲಾಯಂ ಸಿಂಗ್ ಅವರ ರಾಜಕೀಯ ಚಿಂತನೆಗಳೇ ಕಾರಣ. ಮುಲಾಯಂ ಸಿಂಗ್ ಯಾದವ್ ಅವರ ಪುತ್ರ ಅಖಿಲೇಶ್ ಯಾದವ್ ತಮ್ಮ ತಂದೆಯೊಡನೆ ಉತ್ತಮ ಬಾಂಧವ್ಯ ಹೊಂದಿರಲಿಲ್ಲ. ಅವರು ತಮ್ಮದೇ ನಿಜವಾದ ಹಾಗೂ ಅಧಿಕೃತವಾದ ಸಮಾಜವಾದಿ ಪಕ್ಷ ಎಂದು ಘೋಷಿಸುವ ಮೂಲಕ ಜನ್ಮ ಕೊಟ್ಟ ತಂದೆಗೆ ಸೆಡ್ಡು ಹೊಡೆದಿದ್ದರು. 2019ರಲ್ಲಿ ಜರುಗಿದ ಚುನಾವಣೆಯಲ್ಲಿ ಉತ್ತರ ಪ್ರದೇಶದ ಮೈನ್ ಪುರಿ ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆಯಾಗಿದ್ದ ಮುಲಾಯಂ ಸಿಂಗ್ ಯಾದವ್, ತಮ್ಮ ರಾಜಕೀಯ ಪಟ್ಟುಗಳನ್ನು ಮಾಜಿ ಪ್ರಧಾನಿ ದಿವಂಗತ ಚಂದ್ರಶೇಖರ್ ಅವರಿಂದ ಕಲಿತಿದ್ದರು.

ಓರ್ವ ಶ್ರೇಷ್ಠ ಸಂಸದೀಯ ಪಟುವಾಗಿ, ಉತ್ತಮ ವಾಗ್ಮಿಯಾಗಿ ಉತ್ತರ ಪ್ರದೇಶ ಹಾಗೂ ರಾಷ್ಟ್ರ ರಾಜಕಾರಣದಲ್ಲಿ ವಿಶಿಷ್ಟ ಛಾಪು ಮೂಡಿಸಿದ್ದ ಮುಲಾಯಂ ಸಿಂಗ್ ಓರ್ವ ದಕ್ಷ ಹಾಗೂ ಶ್ರೇಷ್ಠ ರಾಜಕಾರಣಿಯಾಗಿದ್ದರು. ಅವರಿಗೆ ಗೌರವಪೂರ್ವಕ ಶ್ರದ್ಧಾಂಜಲಿಗಳು.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಹೆಚ್ಚಿನ ರೈಲ್ವೆ ಸೇವೆ ದೊರೆಯಲಿ

ಮಾನ್ಯರೆ,

ವಿಶ್ವವಿಖ್ಯಾತ ದಸರಾ ಹಬ್ಬದ ಪ್ರಯುಕ್ತ ಮೈಸೂರಿನಿಂದ ಇತರ ಸ್ಥಳಗಳಿಗೆ ಅದರಲ್ಲೂ ಮುಖ್ಯವಾಗಿ ಬೆಂಗಳೂರಿಗೆ ರಾತ್ರಿ 22:20 ಹೊರಡುವ ರೈಲು ಕೊನೆಯ ರೈಲಾಗಿದೆ. ದಸರಾ ಪ್ರಯುಕ್ತ ಅರಮನೆ, ಮೃಗಾಲಯ, ಚಾಮುಂಡಿಬೆಟ್ಟ, ಕೃಷ್ಣರಾಜಸಾಗರ ಜೊತೆ ದೀಪಾಲಂಕಾರಗಳನ್ನು ನೋಡಲು ಹೆಚ್ಚಿನ ಜನರು ಮೈಸೂರಿಗೆ ಆಗಮಿಸುತ್ತಿದ್ದಾರೆ. ರಾತ್ರಿ ಬೆಂಗಳೂರಿನ ಕಡೆಗೆ ಹೋಗುವ ರೈಲು 22:20ಕ್ಕೆ ಕೊನೆಗೊಂಡಿದೆ. ಮುಂಚೆ ಇದ್ದ 23:30 ರೈಲು ಗಾಡಿ ಸೇವೆ ರದ್ದಾಗಿರುವ ವಿಷಯ ಯಾತ್ರಿಕರಿಗೆ ತಿಳಿಯದ ಕಾರಣ ಈ ರೈಲಿಗೆ ಎಂದು ರೈಲ್ವೇ ನಿಲ್ದಾಣಕ್ಕೆ ಬಂದವರು ರೈಲು ಸಿಗದೆ, ಮುಂಜಾನೆ 3ರವರೆಗೆ ಬಹಳ ತೊಂದರೆ ಅನುಭವಿಸುವಂತಹ ಸ್ಥಿತಿ ನಿರ್ಮಾಣವಾಗಿದೆ.

ಮೈಸೂರಿಗೆ ದಸರಾ ದೀಪಾಲಂಕಾರ ನೋಡಲು ಬಂದವರಿಗೆ ರಾತ್ರಿ ರೈಲು ಅವಶ್ಯಕತೆ ಇರುವುದರಿಂದ ಮೈಸೂರು ಜಿಲ್ಲೆಯ ಉಸ್ತುವಾರಿ ಸಚಿವರು, ಸಂಸದರು, ಮುಖ್ಯಮಂತ್ರಿಗಳು ರೈಲ್ವೆ ಸಚಿವರೊಡನೆ ಚರ್ಚಿಸಿ 23:30ಕ್ಕೆ ಮೈಸೂರಿನಿಂದ–ಬೆಂಗಳೂರಿಗೆ ಹೊರಡುತ್ತಿದ್ದ ರೈಲು ಸೇವೆಯು ಪುನರಾರಂಭವಾಗಿ ಪ್ರಯಾಣಿಕರಿಗೆ ಅನುಕೂಲವಾಗಲು ಕ್ರಮ ಕೈಗೊಳ್ಳಬೇಕು.

–ನಾಗೇಶ್, ಮಾನಸಗಂಗೋತ್ರಿ

ಮೂಲಭೂತ ಸೌಕರ್ಯಗಳಿಂದ ವಂಚಿತ ಬಡಾವಣೆ

ಮಾನ್ಯರೆ,

ಮೈಸೂರಿನ ದಟ್ಟಗಳ್ಳಿ ವ್ಯಾಪ್ತಿಯ ಸೋಮನಾಥನಗರ ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿದ್ದು, ಇಲ್ಲಿ ವಾಸಿಸುವ ಜನರ ಪಾಡು ಹೇಳತೀರದಾಗಿದೆ.

ಬಡಾವಣೆ ಇತ್ತೀಚೆಗೆ ತಾನೇ ಬೋಗಾದಿ ಪಟ್ಟಣ ಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದ್ದು, ಸಂಬಂಧಪಟ್ಟ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಬಡಾವಣೆಗೆ ಭೇಟಿ ನೀಡಿ, ಅಲ್ಲಿನ ದುಃಸ್ಥಿತಿಯನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಬೇಕಾಗಿದೆ.

ಆದಿತ್ಯ ಸರ್ಕಲ್ ಬಳಿ ಇರುವ ಬಡಾವಣೆಯ ಪಾರ್ಕು, ಆಳೆತ್ತರದ ಗಿಡ–ಮರಗಳು ಬೆಳೆದು ನಿಂತು ಕಾಡಿನಂತೆ ಕಾಣುತ್ತಿದೆ. ಇದು ಕಾಡುಪ್ರಾಣಿಗಳು ಮತ್ತು ಹಾವು–ಚೇಳುಗಳ ಆವಾಸ ಸ್ಥಾನವಾಗಿದೆ. ಪಾರ್ಕಿನ ಸುತ್ತ ಬೆಳೆದು ನಿಂತಿರುವ ಗಿಡಗಳೂ ಜನರನ್ನು ಭಯದಿಂದ ಓಡಾಡದಂತೆ ಮಾಡಿದೆ.

ಇಲ್ಲಿ ಬೀದಿ ದೀಪಗಳು ಇಲ್ಲ. ಚರಂಡಿ ವ್ಯವಸ್ಥೆ ಸರಿ ಇಲ್ಲ. ಕುಡಿಯಲು ಸಿಹಿನೀರಿನ ಭಾಗ್ಯವಂತೂ ಇಲ್ಲವೇ ಇಲ್ಲ. ಉಪ್ಪು ನೀರು ಉಪಯೋಗಿಸಿ ಮನೆಯ ಪಾತ್ರೆಗಳು, ನಲ್ಲಿಗಳು ಉಪ್ಪು ತಿಂದು ಹಾಕಿದ್ದು, ಜನರು ಭಾರೀ ಸಂಕಷ್ಟಪಡುತ್ತಿದ್ದಾರೆ. ಈ ಬಗ್ಗೆ ಈ ಹಿಂದೆ ಇದ್ದ ಬಡಾವಣೆಯ ಮಾಲೀಕರ ಗಮನಕ್ಕೂ ತಂದರೂ ಯಾವುದೇ ಪ್ರಯೋಜನವಾಗಿಲ್ಲ. ಇದೀಗ ಪಟ್ಟಣ ಪಂಚಾಯ್ತಿಯವರಾದರೂ, ಜನರ ಸಮಸ್ಯೆಗೆ ಸ್ಪಂದಿಸಿ ಎಂಬುದೇ ನಮ್ಮ ಮನವಿ.

–ಅಶೋಕಕುಮಾರ್, ಸೋಮನಾಥನಗರ.




ಕಾರ್ಕಳ ಆನಂದಭಟ್
ಮೊ.7676554198

ದಿಕ್ಕುದೆಸೆ

ಶಸ್ತ್ರಾಸ್ತ್ರಗಳ ರಫ್ತು ರಾಷ್ಟ್ರವಾಗುತ್ತ ಭಾರತ

ಜಾಗತಿಕ ಮಟ್ಟದಲ್ಲಿ ಶಸ್ತ್ರಾಸ್ತ್ರಗಳ ಉತ್ಪಾದನೆ ಮತ್ತು ಮಾರಾಟ ಮಾಡುವ ಕೆಲವೇ ಬಲಾಢ್ಯ ದೇಶಗಳ ಸಾಲಿಗೆ ಭಾರತ ಸೇರ್ಪಡೆಯಾಗಿದೆ. ಮೋದಿಯವರ ಮೇಕ್ ಇನ್ ಇಂಡಿಯಾ ಯೋಜನೆ ರಕ್ಷಣಾ ಕ್ಷೇತ್ರದಲ್ಲಿ ಅತ್ಯಾಧುನಿಕ ಶಸ್ತ್ರಾಸ್ತ್ರಗಳ ಸಂಶೋಧನೆ ಮತ್ತು ಉತ್ಪಾದನೆಗೆ ಭಾರಿ ಉತ್ತೇಜನ ನೀಡಿದೆ. ಇದರ ಪರಿಣಾಮ ಇತ್ತೀಚಿನ ವರ್ಷಗಳಲ್ಲಿ ಭಾರತದಿಂದ ಶಸ್ತ್ರಾಸ್ತ್ರಗಳ ರಫ್ತು ಪ್ರಮಾಣ ಅನೇಕ ಪಟ್ಟು ಏರಿಕೆ ದಾಖಲಿಸಿದೆ. ಹೊಸದಾಗಿ ಇತ್ತೀಚೆಗೆ ಆರ್ಮೇನಿಯ ದೇಶಕ್ಕೆ ರಾಕೆಟ್ ಲಾಂಚರ್ ವ್ಯವಸ್ಥೆ ಮಾರಾಟ ಮಾಡುವ ಒಪ್ಪಂದವಾಗಿದೆ. ಈ ಒಪ್ಪಂದದನ್ವಯ ಭಾರತವು ಆರ್ಮೇನಿಯಾಕ್ಕೆ 'ಪಿನಾಕ' ಬಹು–ಕ್ಷಿಪಣಿ ಉಡಾವಣಾ ವ್ಯವಸ್ಥೆ ಪೂರೈಸಲಿದೆ. ಈ ಲಾಂಚರ್ (ಉಡಾವಣೆ) ವ್ಯವಸ್ಥೆ ಕೇವಲ 44 ಸೆಕೆಂಡ್‌ಗಳಲ್ಲಿ 12 ಹೆಚ್‌ಇ ರಾಕೆಟ್‌ಗಳನ್ನು ಉಡಾಯಿಸುವ ಸಾಮರ್ಥ್ಯ ಹೊಂದಿದೆ. ಇದರೊಂದಿಗೆ ಆರ್ಮೇನಿಯಾಕ್ಕೆ ಟ್ಯಾಂಕ್ ವಿರೋಧಿ ಕ್ಷಿಪಣಿಗಳು ಹಾಗೂ ಅನೇಕ ಶಸ್ತ್ರಾಸ್ತ್ರಗಳನ್ನು ಒಪ್ಪಂದದ ಭಾಗವಾಗಿ ಪೂರೈಸಲಿದೆ. ಕಾರ್ಗಿಲ್ ಸಮರದ ಸಂದರ್ಭದಲ್ಲಿ ಪಿನಾಕ ಅತ್ಯಂತ ಪರಿಣಾಮಕಾರಿ ಹಾಗೂ ವಿನಾಶಕಾರಿ ಮಾರಕ ಕ್ಷಮತೆಯನ್ನು ತೋರಿತ್ತು. ಈ ರಾಕೆಟ್ ಲಾಂಚರ್ ವ್ಯವಸ್ಥೆ ಅತ್ಯಂತ ಎತ್ತರದ ದುರ್ಗಮ ಪರ್ವತ ಪ್ರದೇಶಗಳಲ್ಲಿದ್ದ ವೈರಿಗಳ ನೆಲೆಗಳನ್ನು ನಾಶಪಡಿಸುವಲ್ಲಿ ಪರಿಣಾಮಕಾರಿ ಎಂದು ಸಾಬೀತುಗೊಂಡಿತು. ವ್ಯವಹಾರದ ಗಾತ್ರ ಹಾಗೂ ಇನ್ನಿತರ ಮಾಹಿತಿಗಳು ಸಂಪೂರ್ಣ ಬಹಿರಂಗವಾಗಿಲ್ಲ. ಆದರೆ ಮುಂದಿನ ಕೆಲವೇ ತಿಂಗಳುಗಳಲ್ಲಿ ಭಾರತವು ಆರ್ಮೇನಿಯಾಕ್ಕೆ 250 ಮಿಲಿಯನ್ ಡಾಲರ್ (2 ಸಾವಿರ ಕೋಟಿ ರೂ.) ಮೌಲ್ಯದ ಶಸ್ತ್ರಾಸ್ತ್ರಗಳನ್ನು ಮಾರಾಟ ಮಾಡಲಿದೆ. ಈಗಾಗಲೇ ಒಪ್ಪಂದಕ್ಕೆ ಸಹಿ ಹಾಕಲಾಗಿದ್ದು, ತುರ್ತಾಗಿ ಶಸ್ತ್ರಾಸ್ತ್ರಗಳ ಪೂರೈಕೆಯಾಗಲಿದೆ. ಭಾರತವು ಆರ್ಮೇನಿಯಾಕ್ಕೆ ಶಸ್ತ್ರಾಸ್ತ್ರಗಳ ಮಾರಾಟ ಮಾಡುತ್ತಿರುವುದು ಇದೇ ಮೊದಲ ಬಾರಿಯಲ್ಲ. 2020ರಲ್ಲಿ ರಷ್ಯಾ ಮತ್ತು ಪೋಲೆಂಡ್‌ಗಳನ್ನು ಹಿಂದಿಕ್ಕಿ ಭಾರತವು ಆರ್ಮೇನಿಯಾಕ್ಕೆ 40 ಮಿಲಿಯನ್ ಡಾಲರ್ ಮೌಲ್ಯದ ನಾಲ್ಕು ಸ್ವಾತಿ ಕೌಂಟರ್ ಬ್ಯಾಟರಿ ರಾಡರ್‌ಗಳನ್ನು ಮಾರಾಟ ಮಾಡಿತ್ತು.





ಭಾರತದ ಶಸ್ತ್ರಾಸ್ತ್ರ ರಫ್ತು ಬೆಳವಣಿಗೆ

ಈ ಮಧ್ಯೆ ಅಜರ್‌ಬೈಜಾನ್–ಆರ್ಮೇನಿಯಾ ನಡುವೆ ಸೆಪ್ಟೆಂಬರ್ 13ರಿಂದ ಮತ್ತೆ ಮಿಲಿಟರಿ ಘರ್ಷಣೆ ಪ್ರಾರಂಭವಾಗಿರುವುದು ಭಾರತದ ಶಸ್ತ್ರಾಸ್ತ್ರ ರಫ್ತಿಗೆ ಹೊಸ ಉತ್ತೇಜನ ನೀಡಿದೆ. ಇತ್ತೀಚಿನ ವರದಿಗಳಂತೆ ಭಾರತದ ಶಸ್ತ್ರಾಸ್ತ್ರ ರಫ್ತು ಬೆಳವಣಿಗೆ ಪ್ರಮಾಣವು ಕಳೆದ ಐದು ವರ್ಷಗಳಲ್ಲಿ ಶೇ.334ರಷ್ಟು ಭಾರಿ ದೊಡ್ಡ ಜಿಗಿತ ದಾಖಲಿಸಿದೆ.

ವಾಸ್ತವವಾಗಿ ಭಾರತ ಇನ್ನು ದೊಡ್ಡ ಗುರಿ ಸಾಧಿಸುವತ್ತ ಕ್ರಿಯಾಶೀಲವಾಗಿದೆ. 2020ರಲ್ಲಿ ಮೋದಿ ಸರ್ಕಾರವು ಮುಂದಿನ 5 ವರ್ಷಗಳಲ್ಲಿ ಮೂವತ್ತೈದು ಸಾವಿರ ಕೋಟಿ ರೂ. (5 ಬಿಲಿಯನ್ ಡಾಲರ್) ಮೊತ್ತದ ಏರೋಸ್ಪೇಸ್ ಹಾಗೂ ರಕ್ಷಣಾ ಉತ್ಪನ್ನಗಳು ಮತ್ತು ಸೇವಾ ಸೌಲಭ್ಯ ಗಳನ್ನು ರಫ್ತು ಮಾಡುವ ಗುರಿ ನಿಗದಿಪಡಿಸಿತ್ತು. ಇದು ಸರ್ಕಾರವು 2025ರ ವೇಳೆಗೆ ನಿಗದಿಪಡಿಸಿರುವ ಭಾಗವಾಗಿದೆ. 1.75 ಲಕ್ಷ ಕೋಟಿ (25 ಬಿಲಿಯನ್ ಡಾಲರ್) ಮೌಲ್ಯದ ರಕ್ಷಣಾ ಉತ್ಪನ್ನಗಳ ಉತ್ಪಾದನೆಯ ಒಟ್ಟು ವ್ಯವಹಾರದ ಭಾಗವಾಗಿದೆ. ಭಾರತದ ಶಸ್ತ್ರಾಸ್ತ್ರ ರಫ್ತು ಪ್ರಮಾಣದಲ್ಲಿ 2021–22ರಲ್ಲಿ ದಾಖಲೆ ರೂ. 11607 ಕೋಟಿಗೇರಿದ್ದು, 5 ವರ್ಷಗಳ ಹಿಂದಿದ್ದ ಪ್ರಮಾಣದ ಎಂಟು ಪಟ್ಟು ಏರಿಕೆ ದಾಖಲಿಸಿದೆ. ಆರ್ಮೇನಿಯಾದೊಂದಿಗೆ ಶಸ್ತ್ರಾಸ್ತ್ರ ಮಾರಾಟ ಒಪ್ಪಂದವು ವ್ಯೂಹಾತ್ಮಕ ಮಹತ್ವ ಹೊಂದಿರುವುದರೊಂದಿಗೆ ದೇಶೀಯ ಶಸ್ತ್ರಾಸ್ತ್ರ ಉತ್ಪಾದಿಸುವ ಹಾಗೂ ಮಾರಾಟ ಮಾಡುವ ಸರ್ಕಾರದ ತೀವ್ರ ಆಸಕ್ತಿಗೆ ಪೂರಕವಾಗಿದೆ.

ಜಾಗತಿಕವಾಗಿ ಪ್ರತಿ ವರ್ಷ ಶಸ್ತ್ರಾಸ್ತ್ರಗಳ ಮಾರಾಟದ ವ್ಯವಹಾರದ ಪ್ರಮಾಣ 1.8 ಟ್ರಿ. ಡಾಲರ್ ಆಗಿದೆ. ಕೇವಲ ಭಾರತವೇ ಕಳೆದ ಐದು ವರ್ಷಗಳಲ್ಲಿ ಆಮದು ಮಾಡಿಕೊಂಡ ಶಸ್ತ್ರಾಸ್ತ್ರಗಳ ಪ್ರಮಾಣ ಶೇ. 11 ಆಗಿದೆ. ಆದರೆ ಕುತೂಹಲಕರ ವಿಷಯವೆಂದರೆ ಮೇಕ್ ಇನ್ ಇಂಡಿಯಾದಿಂದಾಗಿ ಇದೇ ಅವಧಿಯಲ್ಲಿ ಆಮದು ಪ್ರಮಾಣ ಶೇ.21ರಷ್ಟು ಕುಸಿತಗೊಂಡಿದ್ದು, ಭಾರತವೀಗ ಶಸ್ತ್ರಾಸ್ತ್ರಗಳನ್ನು ರಫ್ತು ಮಾಡುವ ದೇಶವಾಗಿ ಬದಲಾಗಿದೆ. ಜಗತ್ತಿನ ಮಧ್ಯಮ ಪ್ರಮಾಣದ ಆರ್ಥಿಕತೆ ಹೊಂದಿರುವ ದೇಶಗಳು ಭಾರತದಿಂದ ಶಸ್ತ್ರಾಸ್ತ್ರಗಳನ್ನು ಖರೀದಿಸಲು ಹೆಚ್ಚೆಚ್ಚು ಆಸಕ್ತಿ ತೋರುತ್ತಿವೆ. ಭಾರತವು 2022 ಜನವರಿಯಲ್ಲಿ ಫಿಲಿಫೈನ್ಸ್ ದೇಶದೊಂದಿಗೆ ಮಾಡಿಕೊಂಡ ಒಪ್ಪಂದದನ್ವಯ 374.9 ಮಿಲಿಯನ್ ಡಾಲರ್ ಮೌಲ್ಯದ ಬ್ರಹ್ಮೋಸ್ ಮಧ್ಯಮ ದೂರದ ಖಂಡಾಂತರ ಕ್ಷಿಪಣಿಗಳನ್ನು ಮಾರಾಟ ಮಾಡಲಿದೆ. ವಿಯೆಟ್ನಾಂ ಹಾಗೂ ಇಂಡೋನೇಷ್ಯಾಗಳು ಬ್ರಹ್ಮೋಸ್ ಖರೀದಿಸಲು ಆಸಕ್ತಿ ತೋರಿಸಿವೆ.

ಈಗಾಗಲೇ ಭಾರತವು ವಿಯೆಟ್ನಾಂಗೆ ಹನ್ನೆರಡು ಹೈಸ್ಪೀಡ್ ಬೋಟ್‌ಗಳನ್ನು ನೀಡುವುದರೊಂದಿಗೆ 500 ಮಿಲಿಯನ್ ಡಾಲರ್ ಮಿಲಿಟರಿ ಉದ್ದೇಶಗಳಿಗಾಗಿ ಸಾಲ ಸೌಲಭ್ಯ ನೀಡಿದೆ. ಭಾರತದಲ್ಲಿ ಸಂಶೋಧಿಸಿ ಅಭಿವೃದ್ಧಿಪಡಿಸಿರುವ ಸಿಂಗಲ್ ಇಂಜಿನ್‌ನ ಲಘು ಯುದ್ಧ ವಿಮಾನ ತೇಜಸ್ ಅಮೇರಿಕ, ಆಸ್ಟ್ರೇಲಿಯಾ ಸಹಿತ ವಿಶ್ವದ ಅನೇಕ ದೇಶಗಳ ಗಮನ ಸೆಳೆದಿದೆ. 1.6 ಮ್ಯಾಕ್ ಅಂದರೆ ಶಬ್ದದ 1.6 ಪಟ್ಟು ವೇಗದಲ್ಲಿ ಈ ವಿಮಾನವು ಗಂಟೆಗೆ 2000 ಕಿ.ಮೀ. ವೇಗದಲ್ಲಿ ಚಲಿಸುತ್ತದೆ. 13500 ಕೆ.ಜಿ. ಶಸ್ತ್ರಾಸ್ತ್ರಗಳನ್ನು ಹೊತ್ತೊಯ್ಯುವ ಸಾಮರ್ಥ್ಯ ಈ ಯುದ್ಧ ವಿಮಾನ ಹೊಂದಿದೆ. ಬೆಂಗಳೂರು ಹಾಗೂ ನಾಸಿಕ್‌ನ ಹೆಚ್‌ಎಎಲ್‌ನಲ್ಲಿ ತಯಾರಿಸಲಾಗುತ್ತಿದೆ. ಭಾರತೀಯ ವಾಯುಪಡೆಯು 48 ಸಾವಿರ ಕೋಟಿಯ 83 ತೇಜಸ್ ವಿಮಾನಗಳನ್ನು ಖರೀದಿಸಲಿದೆ. ಜಾಗತಿಕವಾಗಿ ಫಿಲಿಪೈನ್ಸ್, ಈಜಿಪ್ಟ್, ಇಂಡೋನೇಷ್ಯಾ, ಅರ್ಜೆಂಟೀನಾ ಹಾಗೂ ಮಲೇಷಿಯಾಗಳು ಈ ಯುದ್ಧ ವಿಮಾನಗಳನ್ನು ಖರೀದಿಸಲು ಮುಂದೆ ಬಂದಿವೆ.

ಪ್ರಸ್ತುತ ಭಾರತವು ಜಗತ್ತಿನ ಸುಮಾರು 75 ದೇಶಗಳಿಗೆ ರಕ್ಷಣಾ ಉತ್ಪನ್ನಗಳು, ಬಿಡಿ ಭಾಗಗಳು, ಸಲಕರಣೆಗಳನ್ನು ರಫ್ತು ಮಾಡುತ್ತಿದೆ. ಇವುಗಳಲ್ಲಿ ಶಸ್ತ್ರಾಸ್ತ್ರ ಸಿಮ್ಯುಲೇಟರ್‌ಗಳು, ಅಶ್ರುವಾಯು ಲಾಂಚರ್‌ಗಳು, ಟೊರ್ಪಡೋ ಲೋಡಿಂಗ್ ತಂತ್ರಜ್ಞಾನ, ಮುನ್ನೆಚ್ಚರಿಕೆ ಮತ್ತು ನಿಯಂತ್ರಕಗಳು, ಹಗುರ ಭಾರದ ಟೊರ್ಪೆಡೋ ಮತ್ತು ಅಗ್ನಿ ನಿಯಂತ್ರಕ ವ್ಯವಸ್ಥೆಗಳು, ಆರ್ಮರ್ಡ್ ರಕ್ಷಣಾ ವಾಹನಗಳು ರ್‍ಯಾಡರ್‌ಗಳು, ಉನ್ನತ ತರಂಗದ ರೇಡಿಯೋ ಹಾಗೂ ಕರಾವಳಿ ಕಣ್ಗಾವಲು ರಾಡರ್‌ಗಳು ಸೇರಿವೆ.

ಆರ್ಮೇನಿಯಾ–ಅಜರ್‌ಬೈಜಾನ್ ಘರ್ಷಣೆ

ಸೋವಿಯತ್ ರಷ್ಯಾ ಪತನಗೊಂಡ ನಂತರ ಆರ್ಮೇನಿಯಾ ಮತ್ತು ಅಜರ್‌ಬೈಜಾನ್ ಎರಡು ಪ್ರತ್ಯೇಕ ಸ್ವತಂತ್ರ ದೇಶಗಳಾಗಿ ಅಸ್ತಿತ್ವಕ್ಕೆ ಬಂದವು. ಆನಂತರ ಈ ಎರಡೂ ದೇಶಗಳ ನಡುವಿರುವ ನಗೋರ್ನಾ–ಕಾರಾಬಾಕ್ ಎಂಬ ಪ್ರದೇಶದ ಮೇಲೆ ತಮ್ಮ ತಮ್ಮ ಸಾರ್ವಭೌಮತ್ವ ಸ್ಥಾಪಿಸಲು ಯತ್ನಿಸುತ್ತಿವೆ. ಈ ವಿವಾದಿತ ಪ್ರದೇಶ ಅಜರ್‌ಬೈಜಾನ್‌ನ ಸನಿಹದಲ್ಲಿದೆ. ಆದರೆ ಈ ಪ್ರದೇಶದಲ್ಲಿ ಆರ್ಮೇನಿಯನ್ ಮೂಲ ಜನಾಂಗೀಯರು ದೊಡ್ಡ ಸಂಖ್ಯೆಯಲ್ಲಿ ವಾಸವಾಗಿದ್ದಾರೆ. ಈ ಪ್ರದೇಶಕ್ಕಾಗಿ ನಡೆದ ಸಣ್ಣ ಪ್ರಮಾಣದ ಘರ್ಷಣೆ 1990ರಲ್ಲಿ ಪೂರ್ಣ ಪ್ರಮಾಣದ ಯುದ್ಧವಾಗಿ ಭಾರೀ ಸಾವು–ನೋವು ಸಂಭವಿಸಿತು. 2016, ಏಪ್ರಿಲ್‌ನಲ್ಲಿ ಮತ್ತೆ ಘರ್ಷಣೆ. 2020ರಲ್ಲಿ ಮತ್ತೆ ಪೂರ್ಣ ಪ್ರಮಾಣದ ಸಮರ ನಡೆಯಿತು.

ಟರ್ಕಿ ಮತ್ತು ಇಸ್ರೇಲ್‌ಗಳು ಅಜರ್‌ಬೈಜಾನ್‌ನ ಸಾಂಪ್ರದಾಯಿಕ ಮಿತ್ರ ದೇಶಗಳಾಗಿವೆ. 2020ರ ಕದನದಲ್ಲಿ ಟರ್ಕಿ ಮತ್ತು ಇಸ್ರೇಲ್ ನಿರ್ಮಿತ ಡ್ರೋನ್‌ಗಳಿಂದ ಅಜರ್‌ಬೈಜಾನ್ ವಿಜಯ ಸಾಧಿಸಿತು. ಆರ್ಮೇನಿಯಾಕ್ಕೆ ತನ್ನ ಮಿತ್ರ ದೇಶ ರಷ್ಯಾವು ಉಕ್ರೇನ್ ಕದನದಲ್ಲಿ ನಿರತರಾಗಿರುವುದರಿಂದ ಈ ಬಾರಿ ನಿರೀಕ್ಷಿತ ಬೆಂಬಲ ಸಿಗಲಿಲ್ಲ. ಈ ಕಾರಣದಿಂದಾಗಿ ಆರ್ಮೇನಿಯಾಕ್ಕೆ ಭಾರತದ ಶಸ್ತ್ರಾಸ್ತ್ರಗಳು ಹೊಸ ಶಕ್ತಿ–ಉತ್ಸಾಹ–ವಿಶ್ವಾಸ ನೀಡಿದೆ.

ಅಜರ್‌ಬೈಜಾನ್–ಪಾಕ್–ಟರ್ಕಿ ಸಂಬಂಧ

ಆರ್ಮೇನಿಯಾಕ್ಕೆ ಭಾರತದ ಶಸ್ತ್ರಾಸ್ತ್ರ ಮಾರಾಟವು ಪಾಕ್‌ನೊಂದಿಗಿನ ಪ್ರಾದೇಶಿಕ ವೈರತ್ವದ ಆಧಾರದ ಮೇಲೆ ಸಂಭವಿಸಿದೆ. ಪಾಕ್ ನಿರಂತರವಾಗಿ ಅಜರ್‌ಬೈಜಾನ್‌ನನ್ನು ಬೆಂಬಲಿಸುತ್ತಿದೆ. ಆರ್ಮೇನಿಯಾಕ್ಕೆ ಮಾನ್ಯತೆಯನ್ನು ನೀಡಿಲ್ಲ. ಅಜರ್‌ಬೈಜಾನ್ ದೇಶವು ಟರ್ಕಿ–ಪಾಕ್‌ನೊಂದಿಗೆ ತ್ರಿಪಕ್ಷೀಯ ಸಂಬಂಧ ರಚಿಸಿಕೊಂಡಿದೆ. ಈ ದೇಶ ಆರ್ಮೇನಿಯಾದೊಂದಿಗೆ ಹೋರಾಡಲು ಟರ್ಕಿ ನಿರ್ಮಿತ ಡ್ರೋಣ್‌ಗಳನ್ನು ಹಾಗೂ ಪಾಕ್‌ನಿಂದ ಜೆಎಫ್–17 ಯುದ್ಧ ವಿಮಾನ ಖರೀದಿಸಲು ಮಾತುಕತೆ ನಡೆಸಿದೆ. ಕಳೆದ ವರ್ಷ ಈ ಮೂರು ದೇಶಗಳು 'ತ್ರಿಬದರ್ಸ್' ಸಂಕೇತ ನಾಮದಡಿ ಮಿಲಿಟರಿ ಅಭ್ಯಾಸ ನಡೆಸಿದ್ದವು. ಮೂರು ದೇಶಗಳ ನಡುವಿನ ಮಿಲಿಟರಿ ಸಹಕಾರವು ಭಾರತಕ್ಕೆ ಅಪಾಯಕಾರಿಯಾಗಿದೆ. ಅಜರ್‌ಬೈಜಾನ್ ಇಸ್ಲಾಂ ಹೆಸರಿನಲ್ಲಿ ಅನೇಕ ಶಸ್ತ್ರಾಸ್ತ್ರಗಳನ್ನು ಪಡೆದುಕೊಂಡಿದೆ. ಇತರೆ ಇಸ್ಲಾಮಿಕ್ ದೇಶಗಳು ಇದೇ ದಾರಿಯಲ್ಲಿ ಸಾಗುವ ಅಪಾಯವಿದೆ. ಈ ರೀತಿಯ ಬೆಳವಣಿಗೆಯ ಮಧ್ಯೆ, ಕುತೂಹಲಕರ ಅಂಶವೆಂದರೆ ಭಾರತವು ಆರ್ಮೇನಿಯಾಕ್ಕಿಂತ ಅಜರ್‌ಬೈಜಾನ್‌ನೊಂದಿಗೆ ಅತ್ಯಂತ ಬಲವಾದ ಆರ್ಥಿಕ ಸಹಕಾರ ಹೊಂದಿದೆ. ಭಾರತ–ಅಜರ್‌ಬೈಜಾನ್ ಮಧ್ಯೆ ದ್ವಿಪಕ್ಷೀಯ ವಾಣಿಜ್ಯ ವ್ಯವಹಾರ ಪ್ರಮಾಣವು 2019ರಲ್ಲಿ 1093 ಮಿಲಿಯನ್ ಡಾಲರ್ ಆಗಿತ್ತು. ಆದರೆ ಆರ್ಮೇನಿಯಾದೊಂದಿಗೆ 2020ರಲ್ಲಿ ಕೇವಲ 48 ಮಿಲಿಯನ್ ಡಾಲರ್ ಆರ್ಮೇನಿಯಾ ಹಾಗೂ ಇನ್ನಿತರ ದೇಶಗಳಿಗೆ ಶಸ್ತ್ರಾಸ್ತ್ರಗಳ ಮಾರಾಟ ಒಪ್ಪಂದದಿಂದಾಗಿ ಭಾರತವು ಜಾಗತಿಕವಾಗಿ ಪ್ರಬಲ ಶಸ್ತ್ರಾಸ್ತ್ರ ರಫ್ತು ಸಾಮರ್ಥ್ಯದ ದೇಶವಾಗುತ್ತಿದೆ. ಶಸ್ತ್ರಾಸ್ತ್ರಗಳ ಉತ್ಪಾದನೆ ಮತ್ತು ರಫ್ತು ಸಾಮರ್ಥ್ಯವು ಭಾರತವನ್ನು ಮಧ್ಯ ಏಷ್ಯಾ ದೇಶಗಳ ನಡುವೆ ಹಾಗೂ ಪ್ರಾದೇಶಿಕ ನೆಲೆಯಲ್ಲಿ ಪ್ರಧಾನ ಶಕ್ತಿಶಾಲಿ ರಾಷ್ಟ್ರದ ಭೂಮಿಕೆ ನಿರ್ವಹಿಸುವ ಅವಕಾಶ ನೀಡಲಿದೆ.

ಮೇಕ್ ಇನ್ ಇಂಡಿಯಾ ಭಾರತದ ಶಸ್ತ್ರಾಸ್ತ್ರ ಉತ್ಪಾದನಾ ಕ್ಷೇತ್ರದಲ್ಲಿ ಅದ್ಭುತ ಪರಿಣಾಮ ಬೀರಿದೆ. ಫಲಿತಾಂಶ ನೀಡಿದೆ. ಆದರೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಯವರು ಹಿಂದೆ ಸಂಸತ್ತಿನಲ್ಲಿ ಮೇಕ್ ಇನ್ ಇಂಡಿಯಾ ಸಾಧ್ಯವೇ ಇಲ್ಲ ಎಂದು ದೇಶದ ರಕ್ಷಣಾ ವಿಜ್ಞಾನಿಗಳಿಗೆ, ತಂತ್ರಜ್ಞರಿಗೆ ಅಪಮಾನವಾಗುವ ಹೇಳಿಕೆ ನೀಡಿದ್ದರು. ವಾಸ್ತವವಾಗಿ ಗಾಂಧಿ ಪರಿವಾರಕ್ಕೆ ಭಾರತ ಸ್ವಾವಲಂಬಿ ಶಕ್ತಿಶಾಲಿ ದೇಶವಾಗುವುದು ಬೇಕಿಲ್ಲ. ಇವರಿಗೆ ಶಸ್ತ್ರಾಸ್ತ್ರಗಳ ಆಮದು ಅತೀ ಹೆಚ್ಚು ಲಾಭ. ಕಮಿಷನ್ ತರುವ ಪ್ರಾಯಶಃ ಹುಲುಸಾದ ಕ್ಷೇತ್ರವಾಗಿತ್ತು. ಈ ಕಾರಣದಿಂದ ಯುಪಿಎ ಅವಧಿಯಲ್ಲಿ ರಕ್ಷಣಾ ಸಂಬಂಧಿ ಸಂಶೋಧನಾ, ಉತ್ಪಾದನಾ ಸಂಸ್ಥೆಗಳಾದ ಡಿಆರ್‌ಡಿಓ, ಹೆಚ್‌ಎಎಲ್‌ಗಳಿಗೆ ಯಾವುದೇ ರೀತಿಯ ಉತ್ತೇಜನವಾಗಲೀ, ಪ್ರೋತ್ಸಾಹವಾಗಲೀ ನೀಡಲಿಲ್ಲ. ಗಾಂಧಿ ಪರಿವಾರಕ್ಕೆ ಈ ದೇಶ ಕೇವಲ ತಮ್ಮ ಪರಿವಾರ ಆಳುವುದಕ್ಕೆ ಹಾಗೂ ಲೂಟಿ ಹೊಡೆಯಲಿಕ್ಕಿರುವುದು ಎಂಬ ಭಾವನೆ ಇದೆ. ಈ ಕಾರಣ ದಿಂದ ರಾಹುಲ್ ಗಾಂಧಿಯನ್ನು ದೇಶದ ಮೇಲೆ ಪ್ರಧಾನಿಯಾಗಿ ಹೇರುವ ಯತ್ನದಲ್ಲಿದ್ದಾರೆ. ಕಾಂಗ್ರೆಸ್ಸಿಗರು ಇದನ್ನು ತಿಳಿದರೂ ಗಾಂಧಿ ಪರಿವಾರದ ಬಗ್ಗೆ ಹೊಂದಿರುವ ಗುಲಾಮಿ ಮಾನಸಿಕತೆಯಿಂದ ರಾಹುಲ್‌ರನ್ನು ಪ್ರಧಾನಿ ಮಾಡುವುದಕ್ಕೆ ಕಾರ್ಯನಿರತರಾಗಿದ್ದಾರೆ. ಈ ಕಾರಣಕ್ಕೆ ಗಾಂಧಿ ಪರಿವಾರ ಹಾಗೂ ಕಾಂಗ್ರೆಸ್ಸಿಗರ ಈ ಗುಲಾಮ ಮಾನಸಿಕತೆಯನ್ನು, ದೇಶದ ಜನತೆ ಎಲ್ಲಾ ಹಂತಗಳಲ್ಲಿ ಧಿಕ್ಕರಿಸಬೇಕಾಗಿದೆ.

ಬಹು ಆಕರ್ಷಣೀಯ ಸೆಲ್ಫಿ ಸ್ಪಾಟ್...



ದಸರಾ ವಸ್ತುಪ್ರದರ್ಶನ ಆವರಣದಲ್ಲಿ ಸೈಕಲ್ ಪ್ಯೂರ್ ಅಗರಬತ್ತೀಸ್ ವತಿಯಿಂದ ನಿರ್ಮಿಸಿರುವ ಅಂಬಾರಿ ಸೆಲ್ಫಿ ಸ್ಪಾಟ್ ಪ್ರವಾಸಿಗರ ಕಣ್ಮನ ಸೆಳೆಯುತ್ತಿದೆ. ಸೈಕಲ್ ಪ್ಯೂರ್ ಅಗರಬತ್ತೀಸ್‌ನ ವಿವಿಧ ಬಗೆಯ ಅಗರಬತ್ತಿ ಪ್ಯಾಕೆಟ್‌ಗಳಿಂದ ನಿರ್ಮಾಣ ಮಾಡಿರುವ ಚಿನ್ನದ ಅಂಬಾರಿ ಹೊತ್ತ ಆನೆ ಮಾದರಿ ಪ್ರವಾಸಿಗರ ನೆಚ್ಚಿನ ಆಕರ್ಷಣೆಯಾಗಿದೆ. ವಸ್ತು ಪ್ರದರ್ಶನಕ್ಕೆ ಭೇಟಿ ನೀಡುವ ಪ್ರವಾಸಿಗರು ಈ ವಿಶಿಷ್ಟ ಅಂಬಾರಿ ಮುಂದೆ ನಿಂತು ಫೋಟೊ ಕ್ಲಿಕ್ಕಿಸಿಕೊಳ್ಳಲು ಮುಗಿಬೀಳುತ್ತಿದ್ದಾರೆ.

ಅಣ್ಣನ ಕೊಲೆ ಆದಾಗ ಆಶ್ವಾಸನೆ ನೀಡಿದವರು ಸಹಾಯಕ್ಕೆ ಬರಲಿಲ್ಲ...

ಹತ್ಯೆಗೀಡಾದ ಆರ್‌ಎಸ್‌ಎಸ್ ಮುಖಂಡ ಕ್ಯಾತಮಾರನಹಳ್ಳಿ ರಾಜು ಸಹೋದರಿ ಅಳಲು

ಮೈಸೂರು, ಅ.10– ರಾಜಕಾರಣಿಗಳು ನೀಡಿದ ಯಾವೊಂದು ಭರವಸೆಗಳು ಈಡೇರಿಲ್ಲ. ಜಿಲ್ಲಾಡಳಿತ ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವಾಗುವುದಾಗಿ ಹೇಳಿತ್ತು. ಆದರೆ ಅದೂ ಆಗಿಲ್ಲ ಎಂದು 6 ವರ್ಷದ ಹಿಂದೆ ಹತ್ಯೆಗೀಡಾಗಿದ್ದ ಆರ್‌ಎಸ್‌ಎಸ್ ಕಾರ್ಯಕರ್ತ ಕ್ಯಾತಮಾರನಹಳ್ಳಿ ರಾಜು ಸಹೋದರಿ ಕವಿತಾ ಮಾಧ್ಯಮಗಳ ಎದುರು ತಮ್ಮ ಅಳಲು ತೋಡಿಕೊಂಡಿದ್ದಾರೆ.



ರಾಜು ಹತ್ಯೆಯಾದಾಗ ಎಲ್ಲರೂ ಬಂದು ಆಶ್ವಾಸನೆ ನೀಡಿದ್ದರು. ನಮಗೆ ಆಧಾರವಾಗಿದ್ದ ರಾಜಣ್ಣ ಸತ್ತಾಗ ಅವನ ಅಣ್ಣನ ಇಬ್ಬರು ಮಕ್ಕಳನ್ನು ಕಾಲೇಜಿಗೆ ಸೇರಿಸುವುದಾಗಿ ಹೇಳಿದ್ದರು. ಸರ್ಕಾರಿ ನೌಕರಿ ಕೊಡಿಸುತ್ತೇವೆ ಎಂದಿದ್ದರು. ಆದರೆ ಯಾವ ಆಶ್ವಾಸನೆಯೂ ಈಡೇರಿಲ್ಲ. ಇವತ್ತು ಅಣ್ಣನ ಮಗ ಕಾಲೇಜಿಗೆ ಹೋಗೋದನ್ನು ಬಿಟ್ಟು ದಿನಕ್ಕೆ 50–100 ರೂ.ಗೆ ಮನೆ ಮನೆಗೆ ಸಿಲಿಂಡರ್ ಹಾಕಲು ಹೋಗುತ್ತಿದ್ದಾನೆ. ಅಣ್ಣ ಸತ್ತಾಗ ನಮಗೆ 50–60 ಲಕ್ಷ ರೂ. ಹಣ ಬಂತು ಎನ್ನುತ್ತಾರೆ. ಅಷ್ಟು ದುಡ್ಡು ಬಂದಿದ್ದರೆ ಮಳೆಯಲ್ಲಿ ಸೋರುವ ಮನೆಯಲ್ಲಿ ಇರಬೇಕಿತ್ತಾ? ಬೇರೆ ಮನೆ ಮಾಡಬಹುದಾಗಿತ್ತಲ್ವಾ? ಎಂದು ಬೇಸರ ವ್ಯಕ್ತಪಡಿಸಿದರು. ಕೊಲೆ ಮಾಡಿದವರು ಆರಾಮಾಗಿ ಓಡಾಡಿಕೊಂಡಿದ್ದಾರೆ. ಅವರು ಜೈಲಿನಿಂದ ಹೇಗೆ ಹೊರಬಂದರು. ಅಣ್ಣನ ಫೋಟೋವನ್ನು ರ್‍ಯಾಲಿ, ಸಮಾವೇಶಗಳಲ್ಲಿ ನೋಡಿದಾಗ ನೋವಾಗುತ್ತದೆ. ದಯವಿಟ್ಟು ಅವರ ಫೋಟೋಗಳನ್ನು ಹಾಕಬೇಡಿ. ಇದರಿಂದ ನಮಗೆ ಮತ್ತೊಮ್ಮೆ ತೊಂದರೆ ಎದುರಾಗಬಹುದು. ನಮ್ಮಣ್ಣ ರಾಜು ಇದ್ದಿದ್ದರೆ ನಾವು ಚೆನ್ನಾಗಿಯೇ ಇರುತ್ತಿದ್ದೆವು ಎಂದು ಕವಿತಾ ಕಣ್ಣೀರಿಟ್ಟರು.

ಮೈಸೂರಲ್ಲಿ ಅಂತರರಾಷ್ಟ್ರೀಯ ಮೇಕಪ್ ಕಲಾವಿದರಿಂದ ಮಾಸ್ಟರ್ ಕ್ಲಾಸ್ ಆರಂಭ



ಮೈಸೂರು, ಅ. 10 (ಆರ್‌ಕೆ)– ಮೈಸೂರಿನ ಬಿಎನ್ ರಸ್ತೆಯಲ್ಲಿರುವ ದಿ ಪ್ರೆಸಿಡೆಂಟ್ ಹೋಟೆಲ್‌ನಲ್ಲಿ ಬ್ಯೂಟೀಷಿಯನ್‌ಗಳಿಗೆ ಎರಡು ದಿನಗಳ ಮಾಸ್ಟರ್ ತರಗತಿಗಳು ಇಂದು ಆರಂಭವಾದವು. ಮೈಸೂರು ಬ್ಯೂಟಿಷಿಯನ್ಸ್ ವೆಲ್‌ಫೇರ್ ಅಸೋಸಿಯೇಷನ್ ಆಯೋಜಿಸಿದ್ದ ಮಾಸ್ಟರ್ ಕ್ಲಾಸ್ ಅನ್ನು ಅಂತರರಾಷ್ಟ್ರೀಯ ಮೇಕಪ್ ಆರ್ಟಿಸ್ಟ್ ಹಾಗೂ ಹೇರ್ ಸ್ಟೈಲಿಸ್ಟ್ ಅಲ್ವಾ ರಾಜ್‌ಗೋರ್ ಹಾಗೂ ಬಾಲಿವುಡ್ ಮೇಕಪ್ ಕಲಾವಿದ ರಾಜು ಓರ್ವೆ ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿದರು.

ಮೈಸೂರಿನ 15 ಮಂದಿ ಸೇರಿದಂತೆ ಮಂಡ್ಯ, ಕೊಳ್ಳೇಗಾಲ, ಚಾಮರಾಜನಗರದಿಂದ 30 ಮಂದಿ ಬ್ಯೂಟಿಷಿಯನ್‌ಗಳು ಈ ಪ್ರಾಯೋಗಿಕ ತರಗತಿಯಲ್ಲಿ ಪಾಲ್ಗೊಂಡು ಅಲ್ವಾ ರಾಜ್‌ಗೋರ್ ಮತ್ತು ರಾಜು ಓರ್ವೆ ಅವರ ತರಗತಿಯಿಂದ ವಿಶೇಷ ಕೇಶಾಲಂಕಾರ ಕಲಿತು ನಂತರ ಪ್ರಾತ್ಯಕ್ಷಿಕೆ ಮಾಡಿದರು. ಮೇಕಪ್ ತಂತ್ರಗಾರಿಕೆ, ಹೇರ್‌ಸ್ಟೈಲಿಂಗ್ ಹಾಗೂ ಇನ್ನಿತರ ಬ್ಯೂಟೀಷಿಯನ್ ವಿನ್ಯಾಸದ ಬಗ್ಗೆ ಸಂಪನ್ಮೂಲ ವ್ಯಕ್ತಿಗಳು ಬ್ಯೂಟೀಷಿಯನ್‌ಗಳಿಗೆ ತರಬೇತಿ ನೀಡಿದರು. ನಾಳೆ (ಅ.11) ಸಂಜೆವರೆಗೂ ತರಗತಿಗಳು ನಡೆಯಲಿದ್ದು, ತಾವು ಕಲಿತ ವಿದ್ಯೆಯನ್ನು ಬಳಸಿಕೊಂಡು ತಮ್ಮ ವೃತ್ತಿ ಕೌಶಲ್ಯ ಹೆಚ್ಚಿಸಿಕೊಳ್ಳುವಂತೆ ಮೈಸೂರು ಬ್ಯೂಟಿಷಿಯನ್ ವೆಲ್‌ಫೇರ್ ಅಸೋಸಿಯೇಷನ್ ಅಧ್ಯಕ್ಷೆ ಕೆ.ವೇದಾವತಿ ಎನ್.ರೈ ಸಲಹೆ ನೀಡಿದರು. ಸಂಘದ ಕಾರ್ಯದರ್ಶಿ ಎಂ.ಎ.ಸಬಿನಾ, ಖಜಾಂಚಿ ಪ್ರತಿಭಾ ಶೆಟ್ಟಿ, ಸದಸ್ಯರಾದ ನಸ್ರೀನ್, ಮಂಜುಳ, ಅಹಲ್ಯ ಹಾಗೂ ಇತರರಿದ್ದರು.



ಮೈಸೂರಿನ ಪೀಪಲ್ಸ್ ಪಾರ್ಕ್ ಹಾಗೂ ವಿದ್ಯಾ ವಿಕಾಸ ಕಾಲೇಜು ವಿದ್ಯಾರ್ಥಿಗಳು ಬಾಗಲಕೋಟೆ ಮತ್ತು ಬೆಳಗಾವಿಯಲ್ಲಿ ನಡೆದ ಅಂತರರಾಜ್ಯ ಮಟ್ಟದ ಕಬಡ್ಡಿ ಪಂದ್ಯಾವಳಿಯಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ. ವಿಜೇತರನ್ನು ಕಾಲೇಜಿನ ಸಿಬ್ಬಂದಿ ಅಭಿನಂದಿಸಿದ್ದಾರೆ

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಒಂದನೇ ಪುಟದಿಂದ

ಮತ್ತೆರಡು ದಿನ ದಸರಾ ದೀಪಾಲಂಕಾರ ವಿಸ್ತರಣೆ

ಹೃದಯ ಭಾಗ ಹಾಗೂ ಮುಖ್ಯರಸ್ತೆಗಳಲ್ಲಿ ಅ.12ರವರೆಗೆ ದೀಪಾಲಂಕಾರ ಅವಧಿ ವಿಸ್ತರಿಸಲಾಗಿದೆ ಎಂದು ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕ ಜಯವಿಭವಸ್ವಾಮಿ ಹಾಗೂ ದಸರಾ ವಿದ್ಯುತ್ ದೀಪಾಲಂಕಾರ ಉಪಸಮಿತಿ ಅಧ್ಯಕ್ಷ ಟಿ.ರಮೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಅಂದರೆ ಅಂಬಾವಿಲಾಸ ಅರಮನೆ ಸುತ್ತಲಿನ ವೃತ್ತಗಳು ಹಾಗೂ ರಸ್ತೆಗಳು, ಸಯ್ಯಾಜಿರಾವ್ ರಸ್ತೆ, ಡಿ.ದೇವರಾಜ ಅರಸ್ ರಸ್ತೆ ಇನ್ನಿತರ ಪ್ರಮುಖ ರಸ್ತೆಗಳಲ್ಲಿ ನಾಳೆ(ಅ.11) ಹಾಗೂ ನಾಳಿದ್ದು(ಅ.12) ಸಂಜೆ 6.30ರಿಂದ ರಾತ್ರಿ 10.30ರವರೆಗೆ ವಿದ್ಯುತ್ ದೀಪಾಲಂಕಾರವನ್ನು ಕಣ್ತುಂಬಿಕೊಂಡು ಸಂಭ್ರಮಿಸಬಹುದು. ದೀಪಾಲಂಕಾರ ಮುಕ್ತಾಯವಾಗುವುದೆಂದು ಸೋಮವಾರ ರಾತ್ರಿ ಸಾವಿರಾರು ಜನ ಮೈಸೂರಿನ ರಸ್ತೆಗಳನ್ನು ಸುತ್ತುಹಾಕಿ ದೀಪಾಲಂಕಾರ ವೀಕ್ಷಿಸಿದರು.

ಉಪ ಸಮಿತಿ ಅಭಿನಂದನೆ: ಈ ಬಾರಿ ದಸರಾ ವಿದ್ಯುತ್ ದೀಪಾಲಂಕಾರ ಆರಂಭದಲ್ಲಿ ನೀರಸವೆನಿಸಿದ್ದರೂ ನಂತರದ ಸುಧಾರಣಾ ಕ್ರಮದ ಪರಿಣಾಮವಾಗಿ ಅತ್ಯಾಕರ್ಷಕವೆನಿಸಿತು. ಮುಖ್ಯಮಂತ್ರಿಗಳಾದಿಯಾಗಿ ಹಲವು ಸಚಿವರು, ಶಾಸಕರು, ಉದ್ಯಮಿಗಳು, ಸಾರ್ವಜನಿಕರಿಂದಲೂ ಮೆಚ್ಚುಗೆ ವ್ಯಕ್ತವಾಯಿತು. ದೀಪಾಲಂಕಾರ ಯಶಸ್ವಿಯಾದ ಹಿನ್ನೆಲೆಯಲ್ಲಿ ದೀಪಾಲಂಕಾರ ಉಪ ಸಮಿತಿ ವತಿಯಿಂದ ಇದಕ್ಕೆ ಕಾರಣೀಭೂತರಾದ ಎಲ್ಲರಿಗೂ ಧನ್ಯವಾದ ತಿಳಿಸಲಾಗಿದೆ.

'ಅನಾಗರಿಕ' ಭಕ್ತರ ಹೇಸಿಗೆ ಕೆಲಸ

ಆದರೆ ಈ ಪವಿತ್ರ ಸ್ಥಳದಲ್ಲಿ ಎಲ್ಲೆಂದರಲ್ಲಿ ಕಸ ಬಿಸಾಡಿ ದುರ್ವರ್ತನೆ ಮೆರೆದವರು ಹಾಗೂ ಅದಕ್ಕೆ ಕಾರಣರಾದವರು ಅದೆಷ್ಟೇ ಮಹಾ ಭಕ್ತರಾದರು ತಾಯಿ ಚಾಮುಂಡೇಶ್ವರಿಯೂ ಸಹಿಸುವುದಿಲ್ಲ. ಭಕ್ತರು ರಥೋತ್ಸವದ ದಿನ ಬೆಟ್ಟದ ತಪ್ಪಲಿನ ಮೆಟ್ಟಿಲು ಮಾರ್ಗದ ಬಳಿ ಪ್ರಸಾದ ವಿನಿಯೋಗ ಮಾಡಿದ್ದಾರೆ. ಆದರೆ ಪ್ರಸಾದ ಸೇವನೆ ಬಳಿಕ ಪ್ಲೇಟ್ ಹಾಗೂ ಲೋಟಗಳನ್ನು ಒಂದು ಕಡೆ ಹಾಕದೆ ಎಲ್ಲೆಂದರಲ್ಲಿ ಬಿಸಾಡಿದ್ದರು. ಕೆಲವರು ಪೂರ್ಣ ಪ್ರಸಾದ ಸೇವಿಸದೆ ಎಸೆದಿದ್ದರು. ಅಲ್ಲದೆ ಇಲ್ಲಿರುವ ಚಾಮುಂಡಿ ಕಲ್ಲಿನ ಮೂರ್ತಿಗೆ ಪೂಜೆ ಸಲ್ಲಿಸಿದವರು ಗಂಧದ ಕಡ್ಡಿ, ಕರ್ಪೂರ, ಅರಿಶಿನ-ಕುಂಕುಮದ ಕವರ್‌ಗಳನ್ನು ಮೂರ್ತಿ ಸುತ್ತಲೂ ಹಾಕಿದ್ದರು. ಎಲ್ಲೆಡೆ ಬಿಡಿ ಹೂವು, ಪ್ಲಾಸ್ಟಿಕ್ ಬಾಟಲ್, ಕವರ್‌ಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಮೆಟ್ಟಿಲುಗಳು, ಇಕ್ಕೆಲಗಳಲ್ಲಿರುವ ಕಾಂಪೌಂಡ್ ಮಾದರಿ ಕಲ್ಲಿನ ಕಟ್ಟೆ, ನೀರಿನ ಟ್ಯಾಂಕ್, ಅಕ್ಕಪಕ್ಕದ ಖಾಲಿ ಜಾಗ, ಹೀಗೆ ಎಲ್ಲಾ ಸ್ಥಳವೂ ಕಸಮಯವಾಗಿತ್ತು. ಸರಿರಾತ್ರಿಯಿಂದ ಬೆಳಗ್ಗೆವರೆಗೂ ಮಳೆ ಸುರಿದ ಪರಿಣಾಮ ಇಲ್ಲಿನ ಪರಿಸ್ಥಿತಿ ಮತ್ತಷ್ಟು ಅಯೋಮಯವಾಗಿತ್ತು. ತ್ಯಾಜ್ಯವನ್ನು ಡಂಪ್ ಮಾಡುವ ಜಾಗದಂತಾಗಿತ್ತು. ಮೆಟ್ಟಿಲು ಮಾರ್ಗದಲ್ಲಿ ಬೆಟ್ಟವೇರಲು ಹೋದವರು ಒಂದು ಕ್ಷಣ ಅವಕ್ಕಾದರು. ಇದ್ಯಾವ ರೀತಿಯ ಭಕ್ತಿಯ ಪರಿ, ಈ ರೀತಿಯ ನಡೆಯನ್ನು ದೇವರೂ ಮೆಚ್ಚುವುದಿಲ್ಲ ಎಂದು ಅವರು ಶಪಿಸಿದರು.

ವ್ಯವಸ್ಥೆ ವೈಫಲ್ಯ: ಎಲ್ಲೆಂದರಲ್ಲಿ ಕಸ ಎಸೆಯುವುದು ಅನಾಗರಿಕ ನಡೆ. ತ್ಯಾಜ್ಯವನ್ನು ನಿಗದಿತ ಸ್ಥಳ ಅಥವಾ ಡಬ್ಬದಲ್ಲಿ ಹಾಕಬೇಕು. ಅದರಲ್ಲೂ ಧಾರ್ಮಿಕ ಕ್ಷೇತ್ರದಲ್ಲಿ ಇಂತಹ ಕೃತ್ಯ ನಡೆಯಲೇಬಾರದು. ತ್ಯಾಜ್ಯ ಚೆಲ್ಲಾಪಿಲ್ಲಿಯಾಗಿ ಎಸೆದು ಅವಿವೇಕತನ ತೋರಿದ ಜನರ ಜೊತೆಗೆ ವ್ಯವಸ್ಥೆಯ ವೈಫಲ್ಯವೂ ಇದಕ್ಕೆ ಪ್ರಮುಖ ಕಾರಣವಾಗಿದೆ. ತ್ಯಾಜ್ಯ ವಿಲೇವಾರಿ ಹಾಗೂ ಸಂಸ್ಕರಣೆಗಿರುವ ಯೋಜನೆಗಳು ಕೇವಲ ಕಡತದಲ್ಲಿ ಅಡಕವಾಗಿವೆ. ಸ್ವಚ್ಛತಾ ನಿರ್ವಹಣೆಯಲ್ಲಿ ವ್ಯವಸ್ಥೆ ವಿಫಲವಾಗಿದೆ. ವಿಶೇಷ ದಿನಗಳಲ್ಲಿ ಸ್ವಚ್ಛತೆಗೆ ಕನಿಷ್ಟ ಕ್ರಮಗಳನ್ನೂ ಕೈಗೊಳ್ಳುತ್ತಿಲ್ಲ. ಬೆಟ್ಟದ ಪಾದದ ಬಳಿಯಷ್ಟೇ ಅಲ್ಲ ಮೆಟ್ಟಿಲು ಮಾರ್ಗದುದ್ದಕ್ಕೂ ಎಲ್ಲೆಂದರಲ್ಲಿ ಕಸ ಬಿದ್ದಿರುತ್ತದೆ. ಚಾಮುಂಡಿ ಬೆಟ್ಟದ ಪರಿಸರದಲ್ಲಿ ತ್ಯಾಜ್ಯವೇ ರಾಕ್ಷಸನಂತೆ ಕಾಡುತ್ತಿದೆ.

ದೇವಾಲಯ ಆವರಣ ಹಾಗೂ ಮೆಟ್ಟಿಲು ಮಾರ್ಗದ ಸ್ವಚ್ಛತಾ ನಿರ್ವಹಣೆ ಚಾಮುಂಡಿ ಬೆಟ್ಟ ಗ್ರಾಮ ಪಂಚಾಯ್ತಿಯ ಜವಾಬ್ದಾರಿ. ಆದರೆ ವಿಶೇಷ ದಿನಗಳಲ್ಲಿ ಮಾತ್ರ ಮೈಸೂರು ಮಹಾನಗರಪಾಲಿಕೆ ಸಹಕಾರದೊಂದಿಗೆ ಸ್ವಚ್ಛತೆ ಕೈಗೊಳ್ಳಲಾಗುತ್ತದೆ. ಆದರೆ ಮಹಾ ರಥೋತ್ಸವದ ದಿನ ಎರಡೂ ಸ್ಥಳೀಯ ಸಂಸ್ಥೆಗಳು ಜವಾಬ್ದಾರಿ ಮರೆತಿವೆ ಎಂದು ಪರಿಸರ ಪ್ರೇಮಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪ್ರಸಾದವನ್ನು ಗೌರವಿಸಿ: ಹಸಿದ ಹೊಟ್ಟೆಗೆ ಅನ್ನ ನೀಡುವುದೇ ಶ್ರೇಷ್ಠ ಭಕ್ತಿ. ಅದರಲ್ಲೂ ದೇವರಲ್ಲಿ ಹರಸಿಕೊಂಡು ಪ್ರಸಾದದ ರೂಪದಲ್ಲಿ ನೀಡುವುದನ್ನು ದೇವರಂತೆಯೇ ಕಾಣಬೇಕು. ಎಷ್ಟು ಸಾಧ್ಯವೇ ಅಷ್ಟನ್ನು ಮಾತ್ರ ಪಡೆದು ಸಂಪೂರ್ಣವಾಗಿ ಸೇವಿಸಬೇಕು. ನಂತರ ತಟ್ಟೆ, ಲೋಟ ಇನ್ನಿತರ ತ್ಯಾಜ್ಯವನ್ನು ನಿಗದಿತ ಸ್ಥಳದಲ್ಲಿಯೇ ಹಾಕಬೇಕು. ಈ ಕನಿಷ್ಟ ಕ್ರಮವನ್ನೂ ಅನುಸರಿಸದಿದ್ದರೆ ದೇವರ ಕೃಪೆಗೆ ಪಾತ್ರರಾಗಬೇಕೆಂಬ ಆಶಯ ಈಡೇರುವುದಿಲ್ಲ.

ನಿಯಮ ಪಾಲಿಸಿ: ವಿಶೇಷ ದಿನಗಳಲ್ಲಿ ಹೀಗೆ ಪ್ರಸಾದ ವಿತರಿಸುವವರ ಸಂಖ್ಯೆ ಹೆಚ್ಚಾಗುವುದರಿಂದ ತ್ಯಾಜ್ಯವೂ ವಿಪರೀತವಾಗಿ ಉತ್ಪತ್ತಿಯಾಗುತ್ತದೆ. ಹಾಗಾಗಿ ಪ್ರಸಾದ ವಿತರಿಸುವ ಪ್ರತಿಯೊಬ್ಬರೂ ಮೈಸೂರು ನಗರ ಪಾಲಿಕೆ ಅಥವಾ ಚಾಮುಂಡಿ ಬೆಟ್ಟ ಗ್ರಾಪಂನಿಂದ ಅನುಮತಿ ಪಡೆಯುವುದನ್ನು ಕಡ್ಡಾಯಗೊಳಿಸಬೇಕು. ಅಲ್ಲದೆ ಪ್ರಸಾದ ವಿತರಿಸುವ ಹಾಗೂ ಆಸುಪಾಸಿನ ಸ್ಥಳವನ್ನು ಸ್ವಚ್ಛಗೊಳಿಸಬೇಕೆಂಬ ಷರತ್ತು ವಿಧಿಸಬೇಕು. ಅಂತಹ ಸ್ಥಳದಲ್ಲಿ ಹಾಗೂ ಜನದಟ್ಟಣೆ ಹೆಚ್ಚಿರುವ ಸೂಕ್ತ ಜಾಗಗಳಲ್ಲಿ ಕಸದ ಡಬ್ಬಿಗಳನ್ನು ಹೆಚ್ಚಾಗಿ ಇಡಬೇಕು. ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕರು ಈ ನಿಯಮ ಪಾಲಿಸದ ಹೊರತು ಪವಿತ್ರ ಚಾಮುಂಡಿ ಬೆಟ್ಟದಲ್ಲಿ ಶುಚಿತ್ವ ಕಾಯ್ದುಕೊಳ್ಳಲು ಸಾಧ್ಯವೇ ಇಲ್ಲ ಎಂಬುದು ಪ್ರಜ್ಞಾವಂತರ ಅಭಿಪ್ರಾಯವಾಗಿದೆ.

ಹೊಸ ಜೀವನ ಆರಂಭಿಸಿ, ನಿಮ್ಮ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕೊಡಿಸಿ...

● ಮದ್ಯವ್ಯಸನ ಮುಕ್ತರಿಗೆ ಶಾಸಕ ನಾಗೇಂದ್ರ ಕಿವಿಮಾತು ● ಸಮಸ್ಯೆಗಳನ್ನು ವಿವೇಚನೆಯಿಂದ ಬಗೆಹರಿಸಿಕೊಳ್ಳಿ: ತನ್ವೀರ್ ಸಲಹೆ ● ಶೇ. 30-50 ಅಪರಾಧಗಳಿಗೆ ಮದ್ಯಪಾನವೇ ಕಾರಣ: ಎಸ್‌ಪಿ

ಮೈಸೂರು,ಅ.10(ಎಂಟಿವೈ)- ಮದ್ಯಪಾನ ದುಶ್ಚಟದಿಂದ ಹೊರ ಬಂದಿರುವವರು ಹೊಸ ಜೀವನ ಆರಂಭಿಸುವುದರೊಂದಿಗೆ ತಮ್ಮ ಮಕ್ಕಳಿಗೆ ಗುಣಮಟ್ಟದ ಉತ್ತಮ ಶಿಕ್ಷಣ ಕೊಡಿಸಿ ಸಾಧಕರನ್ನಾಗಿ ಮಾಡುವಂತೆ ಶಾಸಕ ಎಲ್.ನಾಗೇಂದ್ರ ಸಲಹೆ ನೀಡಿದ್ದಾರೆ.



ಮೈಸೂರಿನ ಕಳಸ್ತವಾಡಿಯಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್, ಅಖಿಲ ಕರ್ನಾಟಕ ಜಿಲ್ಲಾ ಜನಜಾಗೃತಿ ವೇದಿಕೆ ವತಿಯಿಂದ ಗಾಂಧಿ ಜಯಂತಿ ಅಂಗವಾಗಿ ಆಯೋಜಿಸಿದ್ದ ಮದ್ಯಪಾನ ಮುಕ್ತರ ಸಮಾವೇಶ ಹಾಗೂ ನವಜೀವನ ಸಮಿತಿ ಸದಸ್ಯರ ಅಭಿನಂದನಾ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಈಗಾಗಲೇ ಸಾಕಷ್ಟು ಕುಡಿದಿದ್ದೀರಿ, ಮತ್ತೆ ಕುಡಿಯಬೇಡಿ. ನಿಮಗೆ ಗೌರವ ಸಿಗಬೇಕಾದರೆ ಉತ್ತಮ ರೀತಿಯಲ್ಲಿ ಬದುಕಬೇಕು. ಜನರ ಜೀವನ ಹಸನು ಮಾಡಲು ಧರ್ಮಸ್ಥಳ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ ಹಾಗೂ ಶ್ರೀಮತಿ ಹೇಮಾವತಿ ಹೆಗ್ಗಡೆ ಅವರ ಮಾರ್ಗದರ್ಶನದಲ್ಲಿ ಟ್ರಸ್ಟ್ ಹಲವಾರು ರಚನಾತ್ಮಕ ಕಾರ್ಯಕ್ರಮಗಳನ್ನು ರೂಪಿಸಿ, ಅನುಷ್ಠಾನಗೊಳಿಸುತ್ತಿದೆ ಎಂದು ಶ್ಲಾಘಿಸಿದರು.

ಇದೇ ವೇಳೆ ಶಾಸಕ ತನ್ವೀರ್ ಸೇಠ್, ಗೋಪಾಲಪುರ ಹಾಲು ಉತ್ಪಾದಕರ ಸಂಘಕ್ಕೆ 2 ಲಕ್ಷ, ರಾಮನಹುಂಡಿ ಶ್ರೀ ಮಲೆಮಾದೇಶ್ವರ ಸೇವಾ ಟ್ರಸ್ಟ್‌ಗೆ 1 ಲಕ್ಷ, ಇಬ್ಬರು ವೃದ್ಧೆಯರಿಗೆ ಮಾಸಿಕ ವೇತನ ವಿತರಿಸಿ ಮಾತನಾಡಿ, ಕೃಷಿ, ಸ್ತ್ರೀಶಕ್ತಿ, ಸ್ವಯಂ ಉದ್ಯೋಗ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕೊಡುಗೆ ಅಪಾರ. ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ರಾಷ್ಟ್ರಪಿತ ಮಹಾತ್ಮಗಾಂಧಿ ಅವರು ಭವ್ಯಭಾರತ ನಿರ್ಮಾಣದ ಕನಸು ಕಂಡಿದ್ದರು. ಸ್ವದೇಶಿ ವಸ್ತುಗಳ ಬಳಕೆಗೆ ಆದ್ಯತೆ ನೀಡಿದರು. ಸಮಸ್ಯೆಗಳು ಪ್ರತಿಯೊಬ್ಬರಿಗೂ ಬರುತ್ತವೆ. ಅವುಗಳನ್ನು ವಿವೇಚನೆಯಿಂದ ಬಗೆಹರಿಸಿಕೊಳ್ಳಬೇಕು. ಆ ಮೂಲಕ ಸುಖ ಜೀವನ ನಡೆಸಬೇಕು. ಉಪಕಾರ ಮಾಡಿದವರನ್ನು ಸದಾ ಸ್ಮರಿಸಬೇಕು ಎಂದು ಸಲಹೆ ನೀಡಿದರು.

ಶೇ.30-50 ಅಪರಾಧಗಳಿಗೆ ಮದ್ಯಪಾನ ಕಾರಣ: ಎಸ್ಪಿ ಆರ್. ಚೇತನ್ ಮಾತನಾಡಿ, ಸದೃಢ ಸಮಾಜ ನಿರ್ಮಾಣ ಗಾಂಧೀಜಿಯವರ ಆಶಯವಾಗಿತ್ತು. ಮದ್ಯಪಾನ ಮುಕ್ತ ಸಮಾಜ ನಿರ್ಮಾಣ ಮಾಡಬೇಕು ಎಂಬುದು ಅವರ ಸಂಕಲ್ಪವಾಗಿತ್ತು. ಶೇ.30 ರಿಂದ 50 ರಷ್ಟು ಅಪರಾಧಗಳಿಗೆ ಮದ್ಯಪಾನವೇ ಕಾರಣವಾಗಿದೆ. ಇದು ಪೊಲೀಸ್ ಇಲಾಖೆಯಲ್ಲಿ ದಾಖಲಾಗುವ ಪ್ರಕರಣಗಳಿಂದ ದೃಢಪಟ್ಟಿದೆ. ಕುಡಿದ ಮತ್ತಿನಲ್ಲಿ ಮನೆಯಲ್ಲಿ ಮಹಿಳೆಯರೊಂದಿಗೆ, ಅಕ್ಕಪಕ್ಕದವರೊಂದಿಗೆ ಜಗಳ, ಹೊರಗಡೆ ಇತರರೊಂದಿಗೆ ಜಗಳವಾಡುವುದರಿಂದ ಅಪರಾಧ ಕೃತ್ಯಗಳು ನಡೆಯುತ್ತವೆ. ಆದ್ದರಿಂದ ಮದ್ಯಪಾನ ತ್ಯಜಿಸಬೇಕು. ಸಮಾಜದಲ್ಲಿ ಹಾಗೂ ಕುಟುಂಬದಲ್ಲಿ ನೆಮ್ಮದಿಯಿಂದ ಜೀವನ ಸಾಗಿಸಬೇಕು ಎಂದರು.

ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ಮದ್ಯಪಾನ ಹಾಗೂ ಧೂಮಪಾನದಿಂದ ಆರೋಗ್ಯದ ಮೇಲೂ ಪರಿಣಾಮ ಆಗುತ್ತದೆ. ಕೊರೊನಾ ಸೋಂಕಿಗೆ ಬಹುಬೇಗನೆ ತುತ್ತಾದವರು ಮತ್ತು ಮೃತಪಟ್ಟವರು ಮದ್ಯವ್ಯಸನಿಗಳೇ ಆಗಿದ್ದಾರೆ. ಮದ್ಯಪಾನದಿಂದ ಹೃದ್ರೋಗ ಸಮಸ್ಯೆಗಳು ಹೆಚ್ಚಾಗುತ್ತಿವೆ. ಈ ಚಟದಿಂದ ಆರೋಗ್ಯದೊಂದಿಗೆ ಮರ್ಯಾದೆಯೂ ಹಾಳಾಗುತ್ತಿದೆ. ಆದ್ದರಿಂದ ಮದ್ಯಪಾನ ತ್ಯಜಿಸುವ ಸಂಕಲ್ಪ ಮಾಡಬೇಕು ಎಂದರು.

ಜಿಲ್ಲಾ ಜನಜಾಗೃತಿ ವೇದಿಕೆ ಅಧ್ಯಕ್ಷ ಹಂದನಹಳ್ಳಿ ಸೋಮಶೇಖರ್ ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ವ್ಯಸನ ಮುಕ್ತರಾದ ತೊಟ್ಟವಾಡಿಯ ಮಾದಯ್ಯ, ಸಿದ್ದರಾಮನಹುಂಡಿಯ ಜಯರಾಮ್, ಕಡಕೊಳ ರಾಜು, ನಂಜನಗೂಡು ನೀಲಕಂಠ ನಗರದ ಲಕ್ಷ್ಮಣ್, ಹಾಲನಹಳ್ಳಿಯ ಚಂದ್ರಶೇಖರ್, ಸಣ್ಣೇನಹಳ್ಳಿಯ ರುದ್ರೇಗೌಡ, ನಲ್ಲೂರುಪಾಲದ ದಾಸಪ್ಪ, ಮದ್ಯವರ್ಜನ ಶಿಬಿರವನ್ನು ಯಶಸ್ವಿಯಾಗಿ ಸಂಘಟಿಸಿದ್ದ ಸಿದ್ಧಾರ್ಥನಗರದ ಕೇಬಲ್ ಕೃಷ್ಣ, ಕಡಕೊಳ ರವಿ, ಬನ್ನೂರು ರಾಮಸ್ವಾಮಿ, ಹ್ಯಾಂಡ್‌ಪೋಸ್ಟ್‌ನ ಪ್ರೇಮಸಾಗರ್, ಮಾದರಿ ಪೋಷಕರಾದ ಹನುಮನಾಳು ಕಾರ್ಯಕ್ಷೇತ್ರದ ರಾಮಸ್ವಾಮಿ, ಮೂಗೂರಿನ ಚಿತ್ರಾ, ಸಿದ್ದರಾಮನಹುಂಡಿಯ ಮಂಗಳಗೌರಿ, ಶಂಕರಪುರದ ಸುಶೀಲಾ, ಹೆಚ್.ಡಿ. ಕೋಟೆಯ ಭಾಗ್ಯಮ್ಮ, ಗಾವಡಗೆರೆಯ ಶಶಿಕಲಾ, ಕೊಮ್ಮೇಗೌಡನಕೊಪ್ಪಲು ಪದ್ಮಾ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಟ್ರಸ್ಟ್‌ನ ಜಿಲ್ಲಾ ನಿರ್ದೇಶಕ ಎಂ. ಲಕ್ಷ್ಮಣ್ ಸ್ವಾಗತಿಸಿದರು. ಜಿಲ್ಲಾ ನಿರ್ದೇಶಕ ಹೆಚ್.ಎಲ್. ಮುರಳೀಧರ್ ವಂದಿಸಿದರು. ಶಶಿಕಲಾ ಮತ್ತು ಚೈತ್ರಾ ಪ್ರಾರ್ಥಿಸಿದರು. ಚಾ.ನಂಜುಂಡಮೂರ್ತಿ, ಬನ್ನೂರು ನಾರಾಯಣ್, ಕಿರಗಸೂರು ಶಂಕರ್ , ರತ್ನಮ್ಮ ಸೇರಿದಂತೆ ವೇದಿಕೆಯ ಎಲ್ಲಾ ಪದಾಧಿಕಾರಿಗಳು, ಕಾಂಗ್ರೆಸ್ ಮುಖಂಡ ಮಂಜುನಾಥ್ ಇದ್ದರು.

ಅ.13ರಂದು ಬೆಂಗಳೂರಲ್ಲಿ ಬಿಸಿಯೂಟ ಕಾರ್ಮಿಕರ ಸಮ್ಮೇಳನ

ವಿವಿಧ ಬೇಡಿಕೆ ಸಂಬಂಧ ಹೋರಾಟದ ರೂಪುರೇಷೆ ನಿರ್ಧರಿಸುವ ಉದ್ದೇಶ

ಮೈಸೂರು,ಅ.10(ಪಿಎಂ)- ಅಕ್ಷರ ದಾಸೋಹ ಯೋಜನೆಯ ಬಿಸಿಯೂಟ ಕಾರ್ಮಿಕರ ವಿವಿಧ ಬೇಡಿಕೆಗಳ ಸಂಬಂಧ ಹೋರಾಟದ ರೂಪುರೇಷೆಗಳನ್ನು ನಿರ್ಧರಿಸಲು ಅ.13ರಂದು ಬೆಂಗಳೂರಿನಲ್ಲಿ ಕರ್ನಾಟಕ ರಾಜ್ಯ ಸಂಯುಕ್ತ ಅಕ್ಷರ ದಾಸೋಹ ಕಾರ್ಮಿಕರ ಸಂಘದ (ಎಐಯುಟಿಯುಸಿ) ವತಿಯಿಂದ ಬಿಸಿಯೂಟ ಕಾರ್ಮಿಕರ ಪ್ರಥಮ ರಾಜ್ಯ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ರಾಜ್ಯಾಧ್ಯಕ್ಷ ಕೆ.ವಿ.ಭಟ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಂಗಳೂರಿನ ರೇಸ್‌ಕೋರ್ಸ್ ಸಮೀಪದ ಗುರುರಾಜ ಕಲ್ಯಾಣ ಮಂಟಪದಲ್ಲಿ ಅಂದು ಬೆಳಗ್ಗೆ 10.30ಕ್ಕೆ ಸಮ್ಮೇಳನ ನಡೆಯಲಿದೆ ಎಂದರು.



ರಾಜ್ಯಾದ್ಯಂತ ಸುಮಾರು 1.15 ಲಕ್ಷ ಮಹಿಳೆಯರು ಬಿಸಿಯೂಟ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಆದರೆ ಇವರಿಗೆ ಕನಿಷ್ಠ ವೇತನ, ಆರೋಗ್ಯ ರಕ್ಷಣೆ, ಇಪಿಎಫ್, ಇಎಸ್‌ಐ, ನಿವೃತ್ತಿ ನಂತರ ಪಿಂಚಣಿ, ಹೆರಿಗೆ ರಜೆ, ಸಮವಸ್ತ್ರ ಗುರುತಿನ ಚೀಟಿ ಮೊದಲಾದ ಸೌಲಭ್ಯಗಳನ್ನು ನೀಡಿಲ್ಲ. ಇತ್ತೀಚೆಗೆ ನಿವೃತ್ತಿ ನೆಪದಲ್ಲಿ ಇಡೀ ರಾಜ್ಯದಲ್ಲಿ ಸುಮಾರು 9 ಸಾವಿರ ಮಂದಿಯನ್ನು ಯಾವುದೇ ನಿವೃತ್ತಿ ಸೌಲಭ್ಯ ನೀಡದೇ ಸರ್ಕಾರ ಮನೆಗೆ ಕಳಿಸಿದೆ. ಇವರಿಗೆ ಇಂದಿನ ಬೆಲೆಯೇರಿಕೆಗೆ ತಕ್ಕಂತೆ 5 ಲಕ್ಷ ರೂ. ಇಡುಗಂಟು ನೀಡಬೇಕೆಂದು ಹೋರಾಟಗಳು ನಡೆಯುತ್ತಿವೆ. ಆದರೂ ಸರ್ಕಾರ ನಿರ್ಲಕ್ಷ್ಯ ವಹಿಸಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಇಂತಹ ಕಾರ್ಮಿಕ ವಿರೋಧಿ ನೀತಿಗಳನ್ನು ಹಿಮ್ಮೆಟ್ಟಿಸಲು ಮತ್ತು ಬಿಸಿಯೂಟ ಕಾರ್ಮಿಕರ ನ್ಯಾಯಯುತ ಬೇಡಿಕೆ ಈಡೇರಿಸಿಕೊಳ್ಳುವ ನಿಟ್ಟಿನಲ್ಲಿ ಈ ಸಮ್ಮೇಳನ ನಡೆಯುತ್ತಿದ್ದು, ಮೈಸೂರಿನಿಂದ 250ರಿಂದ 300 ಮಂದಿ ಸೇರಿದಂತೆ ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಸುಮಾರು 7 ಸಾವಿರ ಮಂದಿ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು. ಎಐಯುಟಿಯುಸಿ ಜಿಲ್ಲಾ ಮುಖಂಡರಾದ ಪಿ.ಎಸ್.ಸಂಧ್ಯಾ, ಸಂಘದ ಜಿಲ್ಲಾ ಸಂಚಾಲಕ ಎಸ್.ಹೆಚ್.ಹರೀಶ್, ಸಂಘದ ಪದಾಧಿಕಾರಿಗಳಾದ ದೇವಮಣಿ, ರೂಪಾ ಮತ್ತಿತರರು ಗೋಷ್ಠಿಯಲ್ಲಿದ್ದರು.

ಅ.13 ರಿಂದ 27ರವರೆಗೆ ಹಾಸನಾಂಬ ಜಾತ್ರೆ

ದೇವಿಯ ಆಭರಣ, ಖಜಾನೆಯಿಂದ ದೇಗುಲಕ್ಕೆ ಆಗಮನ

ಹಾಸನ, ಅ.10- ವರ್ಷಕ್ಕೊಮ್ಮೆ ಮಾತ್ರ ದರ್ಶನ ಕರುಣಿಸಲಿರುವ ಇತಿಹಾಸ ಪ್ರಸಿದ್ಧ ಹಾಸನಾಂಬ ದೇವಿಯ ಜಾತ್ರಾ ಮಹೋತ್ಸವ ಅ.13 ರಿಂದ ಅ.27 ರವರೆಗೆ ನಡೆಯಲಿದ್ದು, ಇಂದು ದೇವಿಯ ಒಡವೆಗಳನ್ನು ದೇವಾಲಯಕ್ಕೆ ಕೊಂಡೊಯ್ಯಲಾಯಿತು.



ಹಾಸನ ತಹಶೀಲ್ದಾರ್ ನಟೇಶ್ ಸಮ್ಮುಖದಲ್ಲಿ ಸಾಲಗಾಮೆ ರಸ್ತೆಯಲ್ಲಿರುವ ಜಿಲ್ಲಾ ಖಜಾನೆಯಿಂದ ಒಡವೆಗಳನ್ನು ಹೊರತಂದು ಪುಷ್ಪಾಲಂಕೃತ ಅಡ್ಡ ಪಲ್ಲಕ್ಕಿಯಲ್ಲಿ ಇರಿಸಲಾಯಿತು. ಸಂಪ್ರದಾಯದಂತೆ ಮಡಿವಾಳರು ಪಂಜು ಹಿಡಿದು ಮತ್ತು ಮುತ್ತೈದೆಯರು ಆರತಿ ಬೆಳಗಿದರು. ಈ ವೇಳೆ ಭಕ್ತರು ಹಾಸನಾಂಬೆ ದೇವಿಗೆ ಜೈಕಾರ ಕೂಗಿದರು. ಬೆಳ್ಳಿ ರಥದಲ್ಲಿ ನಗರದ ಪ್ರಮುಖ ರಸ್ತೆಗಳಲ್ಲಿ ಮಂಗಳ ವಾದ್ಯಗಳೊಂದಿಗೆ ಮೆರವಣಿಗೆ ಮೂಲಕ ಹಾಸನಾಂಬೆ ದೇಗುಲಕ್ಕೆ ತರಲಾಯಿತು.

ಒಡವೆ ಕೊಂಡೊಯ್ಯುವ ರಸ್ತೆಗಳಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು. ಈ ಬಾರಿ ಹದಿನೈದು ದಿನಗಳ ಕಾಲ ದೇವಾಲಯ ಬಾಗಿಲು ತೆರಯಲಿದ್ದು, ಮೊದಲ ದಿನ ಹಾಗೂ ಕೊನೆಯ ದಿನ ಮತ್ತು ಅ. 25 ರಂದು ಗ್ರಹಣ ಹಿನ್ನೆಲೆಯಲ್ಲಿ ಭಕ್ತರಿಗೆ ದರ್ಶನ ಇರುವುದಿಲ್ಲ. ಉಳಿದ ಹನ್ನೆರಡು ದಿನಗಳ ಕಾಲ ಗರ್ಭಗುಡಿಯ ಬಾಗಿಲು ತೆರೆಯಲಿದೆ.

'ಈದ್ ಮಿಲಾದ್-ಉನ್-ನಬಿ' ಆಚರಣೆ

ಮೈಸೂರು, ಅ.10(ಎಂಕೆ)- ನಗರದ ಅಶೋಕ ರಸ್ತೆಯಲ್ಲಿರುವ ಮೀಲಾದ್ ಪಾರ್ಕ್‌ನಲ್ಲಿ ತನ್ ಜೀಮ್ ಅಹ್ಲೆ ಸುನ್ನತ್ ವೋ ಜಮಾತ್ ಟ್ರಸ್ಟ್ ವತಿಯಿಂದ 'ಈದ್ ಮಿಲಾದ್-ಉನ್-ನಬಿ' ಆಚರಿಸಲಾಯಿತು.



ಪ್ರಾರ್ಥನೆ, ಕವಿತೆಗಳ ವಾಚನದೊಂದಿಗೆ ಆರಂಭವಾದ 'ಈದ್ ಮಿಲಾದ್-ಉನ್-ನಬಿ' ಆಚರಣೆಯಲ್ಲಿ ಉತ್ತರ ಪ್ರದೇಶದ ಮುಸ್ಲಿಂ ಧರ್ಮಗುರು ಸೈಯದ್ ಮಹಮ್ಮದ್ ಜಾಮಿಯಾ ಅಶ್ರಫ್, ಪ್ರವಾದಿ ಮಹಮ್ಮದ್‌ರ ಕುರಿತು ತಿಳಿಸಿಕೊಟ್ಟರು. ಮೈಸೂರು ಸರ್ ಖಾಜೀ ಮೊಹಮ್ಮದ್ ಉಸ್ಮಾನ್ ಷರೀಫ್, ಧರ್ಮಗುರುಗಳಾದ ಜಮೀಲ್ ಅಹಮದ್ ಆಶ್ರಫಿ, ಮಕ್ಬೂಲ್ ಅಹಮದ್ ನಿಜಾಮಿ, ಅಬ್ದುಲ್ ಸಲಾಮ್ ರಜ್ವೀರ್, ಮಹಮ್ಮದ್ ಇನಾಯತ್ ಉರ್ ರೆಹಮಾನ್, ಅಬ್ದುಲ್ ಸಲಾಂ, ಶಂಸುಲ್ ಹುದಾ ಮತ್ತಿತರರಿದ್ದರು.

ಕವಿತೆಗಳ ಸ್ವಾದ ಸವಿದ ಭಕ್ತರು: ದೀಪಾಲಂಕಾರದಿಂದ ಕಂಗೊಳಿಸುತ್ತಿದ್ದ ಮೀಲಾದ್ ಪಾರ್ಕ್‌ನಲ್ಲಿ ಮುಸ್ಲಿಂ ಧರ್ಮಗುರು ವಾಚಿಸಿದ ಕವಿತೆಗಳನ್ನು ಅಪಾರ ಭಕ್ತರು ಕೇಳಿ ಆನಂದಿಸಿದರಲ್ಲದೆ ಮೆಚ್ಚುಗೆ ವ್ಯಕ್ತಪಡಿಸಿದರು. ಶ್ರದ್ಧಾ-ಭಕ್ತಿಯಿಂದ ನಡೆದ 'ಈದ್ ಮಿಲಾದ್-ಉನ್-ನಬಿ' ಆಚರಣೆಗೆ ಯಾವುದೇ ತೊಂದರೆ ಉಂಟಾಗದಂತೆ ಸೂಕ್ತ ಪೊಲೀಸ್ ಭದ್ರತೆ ಒದಗಿಸಲಾಗಿತ್ತು.

ಅಪರಿಚಿತ ವ್ಯಕ್ತಿ ಶವ ಪತ್ತೆಗಾಗಿ ಮನವಿ

ಮೈಸೂರು, ಅ.10- ನಂಜನಗೂಡು ಪಟ್ಟಣದ ಶ್ರೀಕಂಠೇಶ್ವರ ದೇವಸ್ಥಾನದ ಹತ್ತಿರ ಸುಮಾರು 60 ರಿಂದ 65 ವರ್ಷ ಮುಖಸ್ಥ ವ್ಯಕ್ತಿಯು ಮೃತಪಟ್ಟಿದ್ದು, ನಂಜನಗೂಡು ಪೊಲೀಸ್ ಠಾಣೆಯಲ್ಲಿ ಕಲಂ 174 ಸಿಆರ್‌ಪಿ.ಸಿ ಅಡಿಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

ಮೃತ ವ್ಯಕ್ತಿಯ ಚಹರೆ ಇಂತಿದೆ: 60 ರಿಂದ 65 ವರ್ಷ ವಯೋಮಿತಿ ಹೊಂದಿದ್ದು, ಎತ್ತರ 5.5 ಅಡಿ ಹೊಂದಿರುತ್ತಾರೆ, ಸಾಧಾರಣ ಶರೀರ, ಎಣ್ಣೆ ಕೆಂಪು ಮೈಬಣ್ಣ ಹೊಂದಿರುತ್ತಾರೆ ಹಾಗೂ ಕೇಸರಿ ಬಣ್ಣದ ಅರ್ಧ ತೋಳಿನ ಶರ್ಟ್ ಮತ್ತು ಕಪ್ಪು ಬಣ್ಣದ ಪ್ಯಾಂಟ್ ಧರಿಸಿರುತ್ತಾರೆ.


ಮೃತ ವ್ಯಕ್ತಿಯ ವಾರಸುದಾರರು ಇದ್ದಲ್ಲಿ ಮೈಸೂರು ಎಸ್.ಪಿ. ದೂಸಂ:0821-2520040, ಅಥವಾ 0821-2444800, ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

67ನೇ ಫಿಲ್ಮ್‌ಫೇರ್ ಪ್ರಶಸ್ತಿ ಡಾಲಿ ಧನಂಜಯ್ ಅತ್ಯುತ್ತಮ ನಟ



ಜೀವಮಾನ ಸಾಧನೆಗಾಗಿ ಪುನೀತ್‌ಗೆ ಮರಣೋತ್ತರ ಪ್ರಶಸ್ತಿಯ ಕಿರೀಟ





ನವದೆಹಲಿ, ಅ.10- ದಕ್ಷಿಣ ಭಾರತದ ಫಿಲ್ಮ್ ಫೇರ್ ಪ್ರಶಸ್ತಿ ಪ್ರದಾನ ಸಮಾರಂಭವು ಭಾನುವಾರ ಬೆಂಗಳೂರಿನಲ್ಲಿ ನಡೆದಿದ್ದು, 2020 ಹಾಗೂ 2021ನೇ ಸಾಲಿನಲ್ಲಿ ಬಿಡುಗಡೆಯಾದ ಸಿನಿಮಾಗಳಿಗೆ 67ನೇ ಫಿಲ್ಮ್‌ಫೇರ್ ಪ್ರಶಸ್ತಿಗಳನ್ನು ನೀಡಲಾಗಿದೆ.

ಕನ್ನಡ, ತಮಿಳು, ತೆಲುಗು ಹಾಗೂ ಮಲಯಾಳಂ ಸಿನಿಮಾಗಳಿಗೆ ಪ್ರತ್ಯೇಕವಾಗಿ ಈ ಪ್ರಶಸ್ತಿಗಳನ್ನು ನೀಡಲಾಗಿದ್ದು, ನಾಲ್ಕು ಸಿನಿಮಾ ರಂಗದ ಅನೇಕ ಕಲಾವಿದರು ಮತ್ತು ತಂತ್ರಜ್ಞರು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

ಅತ್ಯುತ್ತಮ ನಟ ಪ್ರಶಸ್ತಿಯು ಡಾಲಿ ಧನಂಜಯ್ ಬಡವ ರಾಸ್ಕಲ್ ಸಿನಿಮಾದ ನಟನೆಗಾಗಿ ಪಡೆದುಕೊಂಡಿದ್ದಾರೆ. ಈ ಬಾರಿ ಜೀವಮಾನ ಸಾಧನೆಗಾಗಿ ಪುನೀತ್ ಅವರಿಗೆ ಮರಣೋತ್ತರ ಪ್ರಶಸ್ತಿಯನ್ನು ಘೋಷಿಸಿದ್ದು, ಈ ಪ್ರಶಸ್ತಿಯನ್ನು ಪುನೀತ್ ಪತ್ನಿ ಅಶ್ವಿನಿ ಪುನೀತ್ ರಾಜ್‌ಕುಮಾರ್ ಪಡೆದುಕೊಂಡಿದ್ದಾರೆ.

ಮಿಂಚಿದ ಅಲ್ಲು ಅರ್ಜುನ್, ಸೂರ್ಯ: ಟಾಲಿವುಡ್‌ನ ಪ್ರಸಿದ್ಧ ನಟ ಅಲ್ಲು ಅರ್ಜುನ್ ಮತ್ತು ತಮಿಳಿನ ಸೂರ್ಯ ಖುಷಿಗೆ ಒಂದಲ್ಲ - ಎರಡಲ್ಲ ಹಲವು ಕಾರಣಗಳಿವೆ. ಭಾನುವಾರ ನಡೆದ 67ನೇ ಫಿಲ್ಮ್‌ಫೇರ್ ಅವಾರ್ಡ್ಸ್ ಸೌತ್ 2022 ರಲ್ಲಿ ಅವರ ಅಭಿನಯದ ಚಲನಚಿತ್ರಗಳಾದ ಪುಷ್ಪ: ದಿ ರೈಸ್ ಮತ್ತು ಸೂರರೈ ಪೊಟ್ರು ಅತ್ಯುನ್ನತ ಪ್ರಶಸ್ತಿಗಳನ್ನು ಪಡೆದುಕೊಂಡಿವೆ.

ತಮಿಳು, ತೆಲುಗು, ಕನ್ನಡ ಮತ್ತು ಮಲಯಾಳಂ ಹಾಗೂ ತೆಲುಗು ವಿಭಾಗದ ಅಡಿಯಲ್ಲಿ, ಪುಷ್ಪ: ದಿ ರೈಸ್‌ನಲ್ಲಿನ ಅಭಿನಯಕ್ಕಾಗಿ ಅತ್ಯುತ್ತಮ ನಟ ಪ್ರಶಸ್ತಿ ಅಲ್ಲು ಅರ್ಜುನ್ ಮುಡಿಗೇರಿದೆ. ಇನ್ನು ತಮಿಳು ವಿಭಾಗದಲ್ಲಿ ಸೂರ್ಯ ಅವರ ಸೂರರೈ ಪೊಟ್ರು ಚಿತ್ರಕ್ಕಾಗಿ ಅವರಿಗೆ ಅತ್ಯುತ್ತಮ ನಟ ಪ್ರಶಸ್ತಿ ಕಿರೀಟ ಒಲಿದು ಬಂದಿದೆ.

ತೆಲುಗು ಚಿತ್ರ ಲವ್ ಸ್ಟೋರಿಗಾಗಿ ಸಾಯಿ ಪಲ್ಲವಿ ಅತ್ಯುತ್ತಮ ನಟಿ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರೆ, ತಮಿಳು ಚಿತ್ರರಂಗದಲ್ಲಿ ಸೂರ್ಯ ಜೊತೆ ನಟಿಸಿದ ಜೈ ಭೀಮ್ ಚಿತ್ರದಲ್ಲಿನ ಪಾತ್ರಕ್ಕಾಗಿ ಲಿಜೋ ಮೋಲ್ ಜೋಸ್ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ಕನ್ನಡದ ತಾರೆಯರ ಪೈಕಿ ಬಡವ ರಾಸ್ಕಲ್ ಚಿತ್ರಕ್ಕಾಗಿ ಧನಂಜಯ್ ಅತ್ಯುತ್ತಮ ನಟ ಪ್ರಶಸ್ತಿ ಪಡೆದುಕೊಂಡಿದ್ದಾರೆ. 2020ರ ಮಲಯಾಳಂ ಚಿತ್ರ ಅಯ್ಯಪ್ಪನುಂ ಕೊಶಿಯುಮ್‌ಗಾಗಿ ಬಿಜು ಮೆನನ್ ಅವರಿಗೆ ಅತ್ಯುತ್ತಮ ನಟ ಫಿಲ್ಮ್‌ಫೇರ್ ನೀಡಲಾಗಿದೆ.

ಪ್ರಶಸ್ತಿ ಪಡೆದ ಕನ್ನಡ ಸಿನಿಮಾ ಹಾಗೂ ನಟರು: ಜಗಮಗಿಸುವ ವೇದಿಕೆಯಲ್ಲಿ ಫಿಲ್ಮ್‌ಫೇರ್ ಸಮಾರಂಭ ಜರುಗಿದ್ದು ನಟರಾಕ್ಷಸ ಧನಂಜಯ್, ರಾಜ್ ಬಿ. ಶೆಟ್ಟಿ ಪುನೀತ್ ಪತ್ನಿ ಅಶ್ವಿನಿ ಪುನೀತ್ ರಾಜ್ ಕುಮಾರ್ ಸೇರಿದಂತೆ ಮುಂತಾದವರು ಪ್ರಶಸ್ತಿಯನ್ನು ಪಡೆದುಕೊಂಡರು.

ಅತ್ಯುತ್ತಮ ನಟ (ಪುರುಷ) - ಧನಂಜಯ್ (ಬಡವ ರಾಸ್ಕಲ್), ಅತ್ಯುತ್ತಮ ನಟಿ (ಮಹಿಳೆ) - ಯಜ್ಞಾ ಶೆಟ್ಟಿ (ಆ್ಯಕ್ಟ್ 1978), ಅತ್ಯುತ್ತಮ ಚಲನಚಿತ್ರ - ಆ್ಯಕ್ಟ್ 1978, ಅತ್ಯುತ್ತಮ ನಿರ್ದೇಶಕ - ರಾಜ್ ಬಿ ಶೆಟ್ಟಿ (ಗರುಡ ಗಮನ ವೃಷಭ ವಾಹನ), ಅತ್ಯುತ್ತಮ ಪೋಷಕ ನಟ (ಪುರುಷ) - ಬಿ. ಸುರೇಶ (ಆ್ಯಕ್ಟ್ 1978), ಅತ್ಯುತ್ತಮ ಪೋಷಕ ನಟಿ (ಮಹಿಳೆ) - ಉಮಾಶ್ರೀ (ರತ್ನನ್ ಪ್ರಪಂಚ), ಅತ್ಯುತ್ತಮ ಸಂಗೀತ ನಿರ್ದೇಶಕ ವಾಸುಕಿ ವೈಭವ್ (ಬಡವ ರಾಸ್ಕಲ್), ಅತ್ಯುತ್ತಮ ಸಾಹಿತ್ಯ - ಜಯಂತ್ ಕಾಯ್ಕಿಣಿ- ತೇಲಾಡು ಮುಗಿಲೆ (ಆ್ಯಕ್ಟ್ 1978), ಅತ್ಯುತ್ತಮ ಹಿನ್ನೆಲೆ ಗಾಯಕ (ಪುರುಷ) - ರಘು ದೀಕ್ಷಿತ್- ಮಳೆ ಮಳೆ ಮಳೆ (ನಿನ್ನ ಸನಿಹಕೆ), ಅತ್ಯುತ್ತಮ ಹಿನ್ನೆಲೆ ಗಾಯಕಿ (ಮಹಿಳೆ) - ಅನುರಾಧ ಭಟ್- ಧೀರ ಸಮ್ಮೋಹಗಾರ (ಬಿಚ್ಚುಗತ್ತಿ), ಅತ್ಯುತ್ತಮ ಛಾಯಾಗ್ರಹಣ - ಶ್ರೀಶ ಕುದುವಳ್ಳಿ (ರತ್ನನ್ ಪ್ರಪಂಚ), ಅತ್ಯುತ್ತಮ ನೃತ್ಯ ಸಂಯೋಜನೆ - ಜಾನಿ ಮಾಸ್ಟರ್ - ಫೀಲ್ ದಿ ಪವರ್ (ಯುವರತ್ನ), ಅತ್ಯುತ್ತಮ ನಟಿ (ಕ್ರಿಟಿಕ್ಸ್) ಮಿಲನ ನಾಗರಾಜ್ (ಲವ್ ಮಾಕ್ಟೇಲ್), ಅತ್ಯುತ್ತಮ ನಟ (ಕ್ರಿಟಿಕ್ಸ್) ಡಾರ್ಲಿಂಗ್ ಕೃಷ್ಣ (ಲವ್ ಮಾಕ್ಟೇಲ್), ಜೀವಮಾನ ಸಾಧನೆ ಪ್ರಶಸ್ತಿ - ಪುನೀತ್ ರಾಜ್‌ಕುಮಾರ್.

ಸೋನಿಯಾ, ರಾಹುಲ್ ಐತಿಹಾಸಿಕ ಯಾತ್ರೆಯಿಂದ ಮಂಡ್ಯದಲ್ಲಿ ಕಾಂಗ್ರೆಸ್‌ಗೆ ಸಿಗಲಿದೆಯೇ ಪುನರ್ಜನ್ಮ..?

ಎಂ.ಕೆ.ಮೋಹನ್‌ರಾಜ್

ಮಂಡ್ಯ,ಅ.10– ಕಳೆದ 2018ರ ಸಾರ್ವತ್ರಿಕ ವಿಧಾನಸಭಾ ಚುನಾವಣೆಯಲ್ಲಿ ಏಳಕ್ಕೆ ಏಳು ಕ್ಷೇತ್ರದಲ್ಲೂ ದಯನೀಯ ಸೋಲು ಕಾಣುವ ಮೂಲಕ ಮಂಡ್ಯ ಜಿಲ್ಲೆಯ ರಾಜಕೀಯ ಇತಿಹಾಸದಲ್ಲಿ ಮೊದಲ ಬಾರಿಗೆ ಕಾಂಗ್ರೆಸ್ ಪಕ್ಷ ಒಂದು ಸೀಟೂ ಗೆಲ್ಲದೇ ಕಳಪೆ ಸಾಧನೆ ಮಾಡಿತ್ತು. ಇದೀಗ 2023ರ ವಿಧಾನಸಭಾ ಚುನಾವಣೆ ಹೊಸ್ತಿಲಿನಲ್ಲಿರುವಾಗ ಸಕ್ಕರೆ ನಾಡು ಮಂಡ್ಯದಲ್ಲಿ ಕಾಂಗ್ರೆಸ್‌ನ ಭಾರತ್ ಜೋಡೋ ಯಾತ್ರೆ ಹೆಸರಲ್ಲಿ ಕಾಂಗ್ರೆಸ್ ಅಧಿನಾಯಕರಾದ ಸೋನಿಯಾಗಾಂಧಿ ಹಾಗೂ ರಾಹುಲ್‌ಗಾಂಧಿ ಐತಿಹಾಸಿಕ ಪಾದಯಾತ್ರೆ ಕೈಗೊಂಡಿದ್ದು ಇದು ಮಂಡ್ಯ ಜಿಲ್ಲೆಯಲ್ಲಿ ಕಾಂಗ್ರೆಸ್‌ಗೆ ಪುನರ್ಜನ್ಮ ಸಿಗಲಿದೆಯೇ ಎಂಬ ಮಾತು ರಾಜಕೀಯ ಪಡಸಾಲೆಯಲ್ಲಿ ಚರ್ಚೆಯಾಗುತ್ತಿದೆ.

ಕಳೆದ ಸೋಮವಾರ ಮಂಡ್ಯ ಜಿಲ್ಲೆಗೆ ಪ್ರವೇಶಿಸಿದ ಯಾತ್ರೆಗೆ ಮೊದಲ ದಿನ ಅಭೂತಪೂರ್ವ ಯಶಸ್ಸು ಸಿಕ್ಕಿ ಎರಡು ದಿನದ ರಜೆಯ ಬಳಿಕ ಗುರುವಾದ ಪಾದಯಾತ್ರೆಗೆ ಕಾಂಗ್ರೆಸ್ ಅಧಿನಾಯಕಿ ಸೋನಿಯಾಗಾಂಧಿ ಭಾಗವಹಿಸಿದ್ದರಿಂದ ಕಾರ್ಯಕರ್ತರಲ್ಲಿ ಹುರುಪು ಮೂಡಿತ್ತು. ದೇಶಾದ್ಯಂತ ನಡೆಯುವ ಈ ಯಾತ್ರೆ ಈಗಾಗಲೇ ಎರಡು ರಾಜ್ಯ ಮುಗಿಸಿ ಮೂರನೇ ರಾಜ್ಯವಾಗಿ ಕರ್ನಾಟಕಕ್ಕೆ ಕಾಲಿಟ್ಟಿದೆ. ಎರಡು ರಾಜ್ಯದಲ್ಲಿ ಯಾತ್ರೆಗೆ ಭಾಗವಹಿಸದ ಸೋನಿಯಾ ಕರ್ನಾಟಕದಲ್ಲಿ ಭಾಗವಹಿಸಿದ್ದರು. ಅದರಲ್ಲೂ ಮಂಡ್ಯ ಜಿಲ್ಲೆಯಲ್ಲಿ ಪಾದಯಾತ್ರೆ ನಡೆಸುವ ಮೂಲಕ ಜೆಡಿಎಸ್ ಭದ್ರಕೋಟೆಯಲ್ಲಿ ಸೋನಿಯಾ ನಡಿಗೆ ಇತಿಹಾಸ ಸೃಷ್ಟಿಸಿದೆ.

ಒಂದು ಕಾಲದಲ್ಲಿ ಮಂಡ್ಯ ಜಿಲ್ಲೆ ಕಾಂಗ್ರೆಸ್‌ನ ಭದ್ರಕೋಟೆಯಾಗಿತ್ತು. ಇಲ್ಲಿ ಬಿಜೆಪಿಗೆ ಅಸ್ತಿತ್ವವಿಲ್ಲದ ಕಾರಣ ಕಾಂಗ್ರೆಸ್ ಹಾಗೂ ಜನತಾ ದಳದ ನಡುವೆ ಪೈಪೋಟಿ ನಡೆಯುತ್ತಿತ್ತು. ಕ್ರಮೇಣ ಜಿಲ್ಲೆ ಜನತಾದಳದ ಭದ್ರಕೋಟೆಯಾಗಿ ಮಾರ್ಪಟ್ಟಿತು. ಇದೀಗ ಮತ್ತೆ ಮಂಡ್ಯ ಜಿಲ್ಲೆಯಲ್ಲಿ ಕಾಂಗ್ರೆಸ್ ತನ್ನ ಹಳೆಯ ಗತವೈಭವ ಪ್ರದರ್ಶಿಸಲು ಸೋನಿಯಾರನ್ನೇ ಮಂಡ್ಯಕ್ಕೆ ಕರೆಸಿದೆ. ಆದರೆ ಇದು 2023ರ ವಿಧಾನಸಭಾ ಚುನಾವಣೆಯಲ್ಲಿ ಕೈ ಪಕ್ಷಕ್ಕೆ ಯಾವ ಮಟ್ಟಕ್ಕೆ ಲಾಭವಾಗುತ್ತದೆ ಎಂಬುದನ್ನು ಕಾದು ನೋಡಬೇಕು.

1999ರಲ್ಲಿ ಕಮಾಲ್ ಮಾಡಿದ್ದ ಕಾಂಗ್ರೆಸ್: 1999ರ ವಿಧಾನಸಭಾ ಚುನಾವಣೆಯಲ್ಲಿ ಮಂಡ್ಯದವರೇ ಆದ ಎಸ್.ಎಂ.ಕೃಷ್ಣ ಮುಖ್ಯಮಂತ್ರಿ ಅಭ್ಯರ್ಥಿಯಾಗಿದ್ದಾಗ ಮಂಡ್ಯದಲ್ಲಿ ಕಾಂಗ್ರೆಸ್ ಕಮಾಲ್ ಮಾಡಿತ್ತು. ಮಂಡ್ಯದಿಂದ ಕೃಷ್ಣ ಪಾಂಚಜನ್ಯ ಯಾತ್ರೆ ಶುರು ಮಾಡಿ, ರಾಜ್ಯಾದ್ಯಂತ ಪ್ರವಾಸ ಮಾಡಿದ್ದರು. ಆ ಚುನಾವಣೆಯಲ್ಲಿ 9 ವಿಧಾನಸಭಾ ಕ್ಷೇತ್ರ ಹೊಂದಿದ್ದ ಮಂಡ್ಯ ಜಿಲ್ಲೆಯಲ್ಲಿ ಬರೋಬ್ಬರಿ 6 ಕ್ಷೇತ್ರದಲ್ಲಿ ಕಾಂಗ್ರೆಸ್ ಗೆದ್ದು ಬೀಗಿತ್ತು. ಮದ್ದೂರಿನ ಕಾಂಗ್ರೆಸ್ ಅಭ್ಯರ್ಥಿ ಎಸ್.ಎಂ.ಕೃಷ್ಣ ಸೇರಿದಂತೆ ಜಿಲ್ಲೆಯ ಶ್ರೀರಂಗಪಟ್ಟಣ, ಕೆ.ಆರ್.ಪೇಟೆ, ಪಾಂಡವಪುರ, ಮಂಡ್ಯ, ಕಿರುಗಾವಲು ಕ್ಷೇತ್ರಗಳಲ್ಲಿ ಗೆದ್ದು ಬೀಗಿತ್ತು. ಆದರೆ ನಂತರದ ಚುನಾವಣೆಯಲ್ಲಿ ಕಾಂಗ್ರೆಸ್ ತನ್ನ ನೆಲೆ ಕಳೆದುಕೊಳ್ಳುತ್ತಾ ಬಂದಿತು.

2004ರಿಂದ ಎರಡು ಕ್ಷೇತ್ರಕ್ಕೆ ಸೀಮಿತವಾದ ಕಾಂಗ್ರೆಸ್: ಬಳಿಕ 2004ರ ಚುನಾವಣೆಯಲ್ಲಿ 9 ಕ್ಷೇತ್ರಗಳ ಪೈಕಿ ಕೇವಲ ಮದ್ದೂರು ಹಾಗೂ ಕೆರಗೋಡಿನಲ್ಲಿ ಮಾತ್ರ ಗೆಲ್ಲಲು ಸೀಮಿತವಾದ ಕಾಂಗ್ರೆಸ್, ಆ ಚುನಾವಣೆಯಲ್ಲಿ ಕಾಂಗ್ರೆಸ್ ವಿರುದ್ಧ ಜೆಡಿಎಸ್ ಆರು ಕ್ಷೇತ್ರದಲ್ಲಿ ಗೆಲುವು ಸಾಧಿಸಿ, ಕ್ರಮೇಣ ಕಾಂಗ್ರೆಸ್ ಭದ್ರಕೋಟೆಯನ್ನು ಛಿದ್ರಗೊಳಿಸಿ, ತನ್ನ ಬೇರನ್ನು ಗಟ್ಟಿ ಮಾಡಿಕೊಳ್ಳತೊಡಗಿತು.

2008ರ ಸಾರ್ವತ್ರಿಕ ಚುನಾವಣೆಯಲ್ಲಿ ಕ್ಷೇತ್ರ ಪುನರ್‌ವಿಂಗಡಣೆಯಿಂದ 7 ಕ್ಷೇತ್ರಕ್ಕೆ ಮಂಡ್ಯ ಜಿಲ್ಲೆ ಸೀಮಿತವಾದಾಗ ನಾಗಮಂಗಲ, ಕೆ.ಆರ್.ಪೇಟೆಯಲ್ಲಿ ಮಾತ್ರ ಕಾಂಗ್ರೆಸ್ ಗೆದ್ದರೆ, ಉಳಿದ ಐದು ಕ್ಷೇತ್ರಗಳ ಪೈಕಿ ನಾಲ್ಕು ಜೆಡಿಎಸ್ ವಶವಾಗಿತ್ತು. ನಂತರ 2013ರಲ್ಲೂ ಮಂಡ್ಯ, ಮಳವಳ್ಳಿ ಕಾಂಗ್ರೆಸ್ ಪಾಲಾದರೆ, ಮೇಲುಕೋಟೆ ಪಕ್ಷೇತರರ ಪಾಲಾಗಿ ಉಳಿದ ನಾಲ್ಕು ಕ್ಷೇತ್ರ ಜೆಡಿಎಸ್ ವಶವಾಗಿತ್ತು. ಇನ್ನು 2018ರ ವಿಧಾನಸಭಾ ಚುನಾವಣೆಯಲ್ಲಿ ಏಳಕ್ಕೆ ಏಳು ಕ್ಷೇತ್ರದಲ್ಲೂ ಕಾಂಗ್ರೆಸ್ ದಯನೀಯ ಸೋಲುಂಡಿತ್ತು. ಪ್ರತಿ ಕ್ಷೇತ್ರದಲ್ಲೂ ಕಾಂಗ್ರೆಸ್ ಮತ್ತು ಜೆಡಿಎಸ್ ಅಭ್ಯರ್ಥಿಗಳ ಅಂತರ ಬರೋಬ್ಬರಿ 40ರಿಂದ 55ಸಾವಿರದ ವರೆಗಿತ್ತು.

ಈ ಬಾರಿ ಶತಾಯಗತಾಯ ಏಳು ಕ್ಷೇತ್ರಗಳ ಪೈಕಿ ಕನಿಷ್ಠ ನಾಲ್ಕು ಕ್ಷೇತ್ರ ಗೆಲ್ಲಲೇಬೇಕೆಂದು ಪಣತೊಟ್ಟಿರುವ ಜಿಲ್ಲಾ ಕಾಂಗ್ರೆಸ್ ಮುಖಂಡರಾದ ಎನ್.ಚಲುವರಾಯಸ್ವಾಮಿ ಹಾಗೂ ಪಿ.ಎಂ.ನರೇಂದ್ರಸ್ವಾಮಿ, ಭಾರತ್ ಜೋಡೋ ಯಾತ್ರೆ ಮೂಲಕ ಕಾಂಗ್ರೆಸ್ ವರಿಷ್ಠರ ಮುಂದೆ ಭಾರೀ ಜನಸ್ತೋಮ ಸೇರಿಸಿ, ಶಕ್ತಿ ಪ್ರದರ್ಶನ ಮಾಡಿದ್ದಾರೆ. ಆದರೆ ಇದು ಮುಂದಿನ ಚುನಾವಣೆಯಲ್ಲಿ ಮತವಾಗಿ ಪರಿವರ್ತನೆಯಾಗಿ ಜೆಡಿಎಸ್ ಭದ್ರಕೋಟೆಯನ್ನು ಮತ್ತೆ ತನ್ನ ವಶಕ್ಕೆ ತೆಗೆದುಕೊಳ್ಳಲಿದೆಯೇ ಎಂಬುದನ್ನು ಕಾದು ನೋಡಬೇಕು.



ಶ್ರೀರಂಗಪಟ್ಟಣದ ಚಂದ್ರವನ ಆಶ್ರಮದಲ್ಲಿ ಮೈಸೂರಿನ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಅವಧೂತ ದತ್ತಪೀಠದ ಪೀಠಾಧಿಪತಿಗಳಾದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರಿಗೆ ಅಂತರರಾಷ್ಟ್ರೀಯ ಮಟ್ಟದ ಶ್ರೇಷ್ಠ ಕಾವೇರಿ ಪ್ರಶಸ್ತಿ ಪ್ರದಾನ ಮಾಡಲಾಯಿತು ಹಾಗೂ ಕಾವೇರಿ ಮಾತೆಗೆ ದೀಪಾರತಿ ಕಾರ್ಯಕ್ರಮ ನಡೆಯಿತು. ಚಂದ್ರವನ ಆಶ್ರಮದ ಪೀಠಾಧಿಪತಿಗಳಾದ ಶ್ರೀ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮಿಗಳ ನೇತೃತ್ವದ ಕಾರ್ಯಕ್ರಮದಲ್ಲಿ ಡಾ.ಭಾನುಪ್ರಕಾಶ್ ಶರ್ಮಾ, ಶ್ರೀರಂಗನಾಥ ಸ್ವಾಮಿ ದೇವಾಲಯದ ಪ್ರಧಾನ ಅರ್ಚಕ ವಿಜಯಸಾರಥಿ ಮತ್ತಿತರ ವೈದಿಕರ ತಂಡ ಭಾಗವಹಿಸಿತ್ತು.

ಯೋಗ ಸ್ಪರ್ಧೆಯಲ್ಲಿ ಕೆ.ಆರ್.ಪೇಟೆ ಹುಡುಗನಿಗೆ ಚಿನ್ನದ ಪದಕ

ಕೆ.ಆರ್.ಪೇಟೆ,ಅ.10– ತಮಿಳುನಾಡಿನ ಸ್ಕೂಲ್ ಗೇಮ್ಸ್ ಸ್ಪೋರ್ಟ್ಸ್ ಡೆವೆಲಪ್‌ಮೆಂಟ್ ಫೌಂಡೇಶನ್ ಸಂಸ್ಥೆಯ ಸಂಸ್ಥಾಪಕ ಅಜಿತ್ ಕುಮಾರ್ ಅವರು ಗೋವಾ ರಾಜ್ಯದ ಕೊಲಂಗುಟೆ ಪಟ್ಟಣದ ಸೆಂಟ್ ಜೋಸೆಫ್ ಕಾಲೇಜಿನಲ್ಲಿ ನಡೆಸಿದ ರಾಷ್ಟ್ರಮಟ್ಟದ ಯೋಗ ಸ್ಪರ್ಧೆಯಲ್ಲಿ ತಾಲೂಕಿನ ಯೋಗಪಟು ಎಸ್.ಎಂ. ಅಲ್ಲಮಪ್ರಭು ಪ್ರಥಮ ಸ್ಥಾನದೊಂದಿಗೆ ಚಿನ್ನದ ಪದಕ ಪಡೆದು ತಾಲೂಕಿಗೆ ಕೀರ್ತಿ ತಂದಿದ್ದಾರೆ.

19 ವರ್ಷ ಮೇಲ್ಪಟ್ಟವರ ಯೋಗ ಸ್ಪರ್ಧೆಯಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿದ್ದ ಎಸ್.ಎಂ. ಅಲ್ಲಮಪ್ರಭು ಅವರು ಉತ್ತಮ ಯೋಗ ಪ್ರದರ್ಶನ ಮಾಡಿ ಚಿನ್ನದ ಪದಕ ಪಡೆದಿದ್ದಾರೆ. ಅಲ್ಲದೆ ಥೈಲ್ಯಾಂಡ್‌ನಲ್ಲಿ ಮಾರ್ಚ್ 2023ರಲ್ಲಿ ನಡೆಯುವ ಅಂತಾರಾಷ್ಟ್ರೀಯ ಯೋಗ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ.



ಗೋವಾದಲ್ಲಿ ಅ.8, 9, 10 ರಂದು ನಡೆದ ಯೋಗ ಸ್ಪರ್ಧೆಯಲ್ಲಿ ದೇಶದ ಹಲವು ಭಾಗಗಳಿಂದ ನೂರಾರು ಸ್ಪರ್ಧಿಗಳು ಆಗಮಿಸಿದ್ದರು. ಉತ್ತಮ ಯೋಗ ಪ್ರದರ್ಶನ ಮಾಡಿ ತೀರ್ಪುಗಾರರಿಂದ ಉತ್ತಮ ಅಂಕಗಳನ್ನು ಪಡೆದುಕೊಂಡ ಅಲ್ಲಮಪ್ರಭು, ರಾಷ್ಟ್ರ ಮಟ್ಟದ ಯೋಗ ಸ್ಪರ್ಧೆಯಲ್ಲಿ ಇಡೀ ದೇಶದ ಗಮನ ಸೆಳೆದು ಚಿನ್ನದ ಪದಕ ಗೆಲ್ಲುವ ಮೂಲಕ ಅತ್ಯುತ್ತಮ ಸಾಧನೆ ಮಾಡಿ ರಾಜ್ಯಕ್ಕೆ, ಮಂಡ್ಯ ಜಿಲ್ಲೆಗೆ ಹಾಗೂ ಕೆ.ಆರ್.ಪೇಟೆ ತಾಲೂಕಿಗೆ ಕೀರ್ತಿ ತಂದಿದ್ದಾರೆ.

ರಾಷ್ಟ್ರ ಮಟ್ಟದ ಅತ್ಯುತ್ತಮ ಸಾಧನೆ ಮಾಡಿರುವ ಎಸ್.ಎಂ.ಅಲ್ಲಮಪ್ರಭು ಅವರನ್ನು ಗೋವಾ ವಿಧಾನಸಭೆಯ ಶಾಸಕ ಮೈಕೆಲ್ ಲೋಬೋ, ಕ್ರೀಡಾ ಸಚಿವ ನಾರಾಯಣಗೌಡ ಹಾಗೂ ಮಾಜಿ ಶಾಸಕ ಕೆ.ಬಿ. ಚಂದ್ರಶೇಖರ್, ಸಮಾಜ ಸೇವಕ ವಿಜಯ್ ರಾಮೇಗೌಡ, ಮನ್ಮುಲ್ ನಿರ್ದೇಶಕರಾದ ಹೆಚ್.ಟಿ.ಮಂಜು, ಡಾಲುರವಿ, ಜೆಡಿಎಸ್ ಮುಖಂಡರಾದ ಬಿ.ಎಲ್. ದೇವರಾಜ್, ಬಸ್ ಕೃಷ್ಣೇಗೌಡ, ಪುರಸಭಾ ಸದಸ್ಯರಾದ ಬಸ್ ಸಂತೋಷ್‌ಕುಮಾರ್, ನಟರಾಜ್, ಕೆ.ಕೆ.ರಮೇಶ್ ಇತರರು ಅಭಿನಂದಿದ್ದಾರೆ.

ಅಪ್ರಾಪ್ತೆ ಮೇಲೆ ಅತ್ಯಾಚಾರ: ಆರೋಪಿ ವೃದ್ಧ ಬಂಧನ

ಹಲಗೂರು, ಅ.10– ಅಪ್ರಾಪ್ತ ಬಾಲಕಿ ಮೇಲೆ 63 ವರ್ಷದ ವಯೋವೃದ್ಧನೋರ್ವ ಅತ್ಯಾಚಾರವೆಸಗಿದ್ದು, ಆತನ ವಿರುದ್ಧ ಫೋಕ್ಸೋ ಕಾಯ್ದೆಯಡಿ ಪ್ರಕರಣ ದಾಖಲಿಸಿ, ಆರೋಪಿಯನ್ನು ಹಲಗೂರು ಪೊಲೀಸರು ಬಂಧಿಸಿದ್ದಾರೆ.

ಹಲಗೂರು ಹೋಬಳಿ ಬ್ಯಾಡರಹಳ್ಳಿ ಗ್ರಾಪಂ ವ್ಯಾಪ್ತಿಯ ಗ್ರಾಮವೊಂದರ 63 ವರ್ಷದ ವೃದ್ಧನೋರ್ವ ಅದೇ ಗ್ರಾಮದ ಅಪ್ರಾಪ್ತ ಬಾಲಕಿಯನ್ನು ಪುಸಲಾಯಿಸಿ, ಹಲಗೂರು ಪಟ್ಟಣಕ್ಕೆ ಕರೆತಂದು ತಿಂಡಿ ಕೊಡಿಸಿ, ನಂತರ ಅತ್ಯಾಚಾರವೆಸಗಿದ್ದಾನೆನ್ನಲಾಗಿದೆ. ಈ ಬಗ್ಗೆ ಬಾಲಕಿಯಿಂದ ವಿಷಯ ತಿಳಿದ ಪೋಷಕರು ಹಲಗೂರು ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ದೂರು ದಾಖಲಿಸಿಕೊಂಡ ಹಲಗೂರು ಠಾಣೆ ವೃತ್ತ ನಿರೀಕ್ಷಕರು ಶ್ರೀಧರ್ ಹಾಗೂ ಪಿಎಸ್‌ಐ ರವಿಕುಮಾರ್ ಆರೋಪಿಯನ್ನು ಬಂಧಿಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಒಡೆಯರ್ ಎಕ್ಸ್‌ಪ್ರೆಸ್ ಮರುನಾಮಕರಣ: ಸಿಹಿ ಹಂಚಿ ಬಿಜೆಪಿ ಸಂಭ್ರಮ

ಮಂಡ್ಯ,ಅ.10– ಮೈಸೂರು– ಬೆಂಗಳೂರು ನಡುವೆ ಸಂಚರಿಸುವ ಟಿಪ್ಪು ಸೂಪರ್ ಫಾಸ್ಟ್ ರೈಲಿನ ಹೆಸರನ್ನು ಒಡೆಯರ್ ಸೂಪರ್ ಫಾಸ್ಟ್ ಎಂದು ಬದಲಾವಣೆ ಮಾಡಿದ ಹಿನ್ನೆಲೆಯಲ್ಲಿ ನಗರದ ರೈಲ್ವೆ ನಿಲ್ದಾಣದಲ್ಲಿ ಒಡೆಯರ್ ರೈಲು ಎಕ್ಸ್‌ಪ್ರೆಸ್‌ಗೆ ಪೂಜೆ ಸಲ್ಲಿಸಿ, ಕುಂಬಳಕಾಯಿ ಒಡೆದು, ಸಿಹಿ ಹಂಚಿ ಬಿಜೆಪಿ ಮುಖಂಡರು ಸಂಭ್ರಮಾಚರಣೆ ಮಾಡಿದರು.

ಬೆಂಗಳೂರಿನಿಂದ ರೈಲಿನಲ್ಲೇ ಮಂಡ್ಯಕ್ಕೆ ಆಗಮಿಸಿದ ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಪಿ. ಉಮೇಶ್ ಬಳಿಕ ಮಂಡ್ಯ ರೈಲ್ವೆ ನಿಲ್ದಾಣದಲ್ಲಿ ಒಡೆಯರ್ ಎಕ್ಸ್‌ಪ್ರೆಸ್‌ಗೆ ಪುಷ್ಪ ನಮನ ಸಲ್ಲಿಸಿ, ನೂರಾರು ಪ್ರಯಾಣಿಕರಿಗೆ ಸಿಹಿ ಹಂಚಿ ಖುಷಿ ಪಟ್ಟರು.

ಈ ಸಂದರ್ಭದಲ್ಲಿ ಮಾತನಾಡಿದ ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಪಿ.ಉಮೇಶ್, ಮಂಡ್ಯ ಜಿಲ್ಲೆಯ ಅಭಿವೃದ್ಧಿ, ಜಿಲ್ಲೆಯನ್ನು ಕಟ್ಟಲು ಒಡೆಯರ್ ಕುಟುಂಬದ ಕೊಡುಗೆ ಬಹಳಷ್ಟಿದೆ. ನಾಲ್ವಡಿ ಕೃಷ್ಣರಾಜ ಒಡೆಯರ್ ರನ್ನು ಮಂಡ್ಯ ಜಿಲ್ಲೆ ಮರೆಯಲು ಸಾಧ್ಯವಿಲ್ಲ. ಅಂತಹ ಮಹನೀಯರ ಹೆಸರನ್ನು ರೈಲಿಗೆ ಇಟ್ಟಿದ್ದು ಬಹಳ ಖುಷಿ ತಂದಿದೆ ಎಂದರು.



ಈ ಸಂದರ್ಭದಲ್ಲಿ ಬಿಜೆಪಿ ಉಪಾಧ್ಯಕ್ಷ ಡಾ.ಸದಾನಂದ, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಅಶೋಕ್‌ಜಯರಾಂ, ನಗರ ಮೋರ್ಚಾ ಅಧ್ಯಕ್ಷ ವಿವೇಕ್, ಮುಖಂಡರಾದ ಎಚ್.ಆರ್.ಅರವಿಂದ್, ಶಿವಕುಮಾರ್ ಕೆಂಪಯ್ಯ, ಹೊಸಹಳ್ಳಿಶಿವು, ಸಿ.ಟಿ.ಮಂಜುನಾಥ್ ಮತ್ತಿತರರಿದ್ದರು.

ಕಾಂಗ್ರೆಸ್‌ಗೆ ಸೇರ್ಪಡೆಗೊಂಡಿಲ್ಲ: ಸ್ಪಷ್ಟನೆ

ಪಾಂಡವಪುರ, ಅ.10– ನಾನು ಕಾಂಗ್ರೆಸ್ ಪಕ್ಷ ಸೇರ್ಪಡೆಗೊಂಡಿಲ್ಲ. ಕಾಂಗ್ರೆಸ್‌ನಲ್ಲಿನ ಗೊಂದಲಗಳ ಬಗ್ಗೆ ಚರ್ಚಿಸಿ ಬಳಿಕ ಪಕ್ಷ ಸೇರ್ಪಡೆ ಬಗ್ಗೆ ತೀರ್ಮಾನಿಸುವೆ ಎಂದು ಮಾಜಿ ಶಾಸಕ ಡಿ.ಹಲಗೇಗೌಡರ ಪುತ್ರ ಜಿಪಂ ಮಾಜಿ ಸದಸ್ಯ ಎಚ್.ಮಂಜುನಾಥ್ ಸ್ಪಷ್ಟನೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಭಾರತ್ ಜೋಡೋ ಯಾತ್ರೆ ಹಿನ್ನೆಲೆಯಲ್ಲಿ ತಾಲೂಕಿಗೆ ರಾಷ್ಟ್ರೀಯ ನಾಯಕ ರಾಹುಲ್‌ಗಾಂಧಿ ಆಗಮಿಸಿದ್ದ ವೇಳೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಎಲ್ಲರನ್ನು ಪಕ್ಷಾತೀತವಾಗಿ ಕಾರ್ಯಕ್ರಮಕ್ಕೆ ಆಹ್ವಾನಿಸುವ ಸಂದರ್ಭದಲ್ಲಿ ಡಿಕೆಶಿ ಅವರು ಕಾಂಗ್ರೆಸ್ ಪಕ್ಷದ ಶಾಲು ತೆಗೆದು ನನಗೆ ಹಾಕಿದರು ಅಷ್ಟೆ. ಕೆಲವರು ಅದನ್ನು ಫೋಟೋ ತೆಗೆದು ಮಾಧ್ಯಮಗಳಲ್ಲಿ ಎಚ್.ಮಂಜುನಾಥ್ ಕಾಂಗ್ರೆಸ್ ಸೇರ್ಪಡೆಗೊಂಡಿದ್ದಾರೆ ಎಂದು ಸುಳ್ಳು ಸುದ್ದಿ ಹಬ್ಬಿಸಿದ್ದಾರೆ ಎಂದರು. 2018ರ ಚುನಾವಣೆಯಲ್ಲಿ ಮೇಲುಕೋಟೆ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿಯೂ ಸಹ ಟಿಕೆಟ್ ನೀಡಿದ್ದರು. ಆದರೆ, ನನ್ನ ವೈಯಕ್ತಿಕ ಕಾರಣದಿಂದ ಬಿಜೆಪಿಯ ಟಿಕೆಟ್ ತಿರಸ್ಕರಿಸಿದೆ, ನಾನು ಅಧಿಕೃತವಾಗಿ ಬಿಜೆಪಿಯನ್ನೂ ಸಹ ಸೇರ್ಪಡೆಗೊಂಡಿಲ್ಲ ಎಂದು ತಿಳಿಸಿದರು.

ಕಾರು ಡಿಕ್ಕಿ: ಬೈಕ್ ಸವಾರ ಸಾವು

ಮಂಡ್ಯ,ಅ.10– ಕಾರು, ಬೈಕ್ ನಡುವೆ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಸ್ಥಳದಲ್ಲೇ ಬೈಕ್ ಸವಾರ ಸಾವನ್ನಪ್ಪಿರುವ ಘಟನೆ ನಗರದ ಬೆಂಗಳೂರು– ಮೈಸೂರು ಹೆದ್ದಾರಿಯ ಬಿಸಿಲುಮಾರಮ್ಮನ ದೇಗುಲದ ಬಳಿ ನಡೆದಿದೆ.

ಘಟನೆಯಲ್ಲಿ ಬೈಕ್ ಸವಾರ ಸಿದ್ದಯ್ಯನಕೊಪ್ಪಲು ಗ್ರಾಮದ ಸತೀಶ್(40) ಮೃತಪಟ್ಟಿದ್ದು, ತೆಂಗಿನಕಾಯಿ ವ್ಯಾಪಾರ ಮುಗಿಸಿಕೊಂಡು ತೆರಳುತ್ತಿದ್ದಾಗ ಬೈಕ್‌ಗೆ ಕಾರು ಡಿಕ್ಕಿ ಹೊಡೆದು ಬಳಿಕ ವೇಗದಲ್ಲಿದ್ದ ಕಾರು ಬಿಸಿಲು ಮಾರಮ್ಮನ ದೇಗುಲದ ಕಾಂಪೌಂಡ್‌ಗೆ ನುಗ್ಗಿದೆ. ಸದ್ಯ ಕಾರಿನಲ್ಲಿದ್ದವರು ಹಾಗೂ ದೇವಸ್ಥಾನದ ಬಳಿ ಇದ್ದ ಭಕ್ತರು ಕೂದಲೆಳೆ ಅಂತರದಲ್ಲಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಕಾರಿನಲ್ಲಿದ್ದ ಇಬ್ಬರಿಗೆ ಗಂಭೀರ ಗಾಯಗಳಾಗಿದ್ದು, ಕೂಡಲೇ ಅವರನ್ನು ಮಂಡ್ಯ ಮಿಮ್ಸ್ ಆಸ್ಪತ್ರೆಗೆ ಸ್ಥಳೀಯರು ದಾಖಲಿಸಿದ್ದಾರೆ. ಸದ್ಯ ಘಟನೆ ಸ್ಥಳಕ್ಕೆ ಮಂಡ್ಯ ಪಶ್ಚಿಮ ಠಾಣಾ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿ, ಪ್ರಕರಣ ದಾಖಲಿಸಿಕೊಂಡಿದ್ದಾರೆ.

ತಿದ್ದುಪಡಿ ಹಿಂಪಡೆದು ಗ್ರಾಪಂ ಜನಪ್ರತಿನಿಧಿಗಳ ಅಧಿಕಾರ ಮುಂದುವರೆಸಿ

ಸಿಎಂ ಬೊಮ್ಮಾಯಿ ಅವರಲ್ಲಿ ಎಂಎಲ್‌ಸಿ ದಿನೇಶ್‌ಗೂಳಿಗೌಡ ಮನವಿ

ಮೈಸೂರು,ಅ.10(ಪಿಎಂ)– ಗ್ರಾಮ ಪಂಚಾಯಿತಿ ಜನಪ್ರತಿನಿಧಿಗಳ ಅಧಿಕಾರ ಮೊಟಕುಗೊಳಿಸುವಂತಹ 'ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣಗಳು' ಹಾಗೂ 'ಗ್ರಾಮ ಪಂಚಾಯಿತಿ ನೌಕರರ ಸೇವಾ ನಿಯಮಗಳ ತಿದ್ದುಪಡಿ' ಕೈಬಿಟ್ಟು ಈ ಹಿಂದೆ ಇದ್ದಂತಹ ವ್ಯವಸ್ಥೆಯನ್ನೇ ಮುಂದುವರಿಸ ಬೇಕೆಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಲ್ಲಿ ಮಂಡ್ಯ ಜಿಲ್ಲೆ ಸ್ಥಳೀಯ ಸಂಸ್ಥೆಗಳ ಕ್ಷೇತ್ರದ ವಿಧಾನಪರಿಷತ್ ಸದಸ್ಯ ದಿನೇಶ್‌ಗೂಳಿಗೌಡ ಕೋರಿದ್ದಾರೆ.



ಇಂತಹ ತಿದ್ದುಪಡಿ ಗ್ರಾಮ ಪಂಚಾಯಿತಿಗಳ(ಗ್ರಾಪಂ) ಅಸ್ತಿತ್ವಕ್ಕೆ ಧಕ್ಕೆ ತರಲಿದೆ. ಸದರಿ ತಿದ್ದುಪಡಿ ಕುರಿತು ಗ್ರಾಮೀಣಾಭಿವೃದ್ಧಿ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ಕಳೆದ ಆಗಸ್ಟ್‌ನಲ್ಲಿ ನಡೆದ ಸಭೆಯಲ್ಲಿ ನಡಾವಳಿಗಳನ್ನು ರೂಪಿಸಲಾಗಿದೆ. ಇವು ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಆಶಯ ಹಾಗೂ ಗ್ರಾಮ ಪಂಚಾಯಿತಿ ವ್ಯವಸ್ಥೆಯ ಅಸ್ತಿತ್ವಕ್ಕೆ ಧಕ್ಕೆ ತರುವಂತಹ ನಡಾವಳಿಗಳಾಗಿವೆ.

ಪ್ರಧಾನ ಮಂತ್ರಿಗಳಾಗಿದ್ದ ರಾಜೀವ್ ಗಾಂಧಿ, ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾಗಿದ್ದ ಅಬ್ದುಲ್ ನಜೀರ್ ಸಾಬ್ ಅವರ ಕನಸಿನ ಕೂಸು ಪಂಚಾಯಿತಿ ವ್ಯವಸ್ಥೆ. ಅಂದು ಜನಸಾಮಾನ್ಯರ ಮತ್ತು ಎಲ್ಲಾ ಸಮುದಾಯದ ಜನತೆಗೆ ಅಧಿಕಾರ ವಿಕೇಂದ್ರಿಕರಣ ವ್ಯವಸ್ಥೆಯಡಿ ಅಧಿಕಾರ ನೀಡಬೇಕೆಂಬ ಆಶಯದೊಂದಿಗೆ ಇಡೀ ರಾಷ್ಟ್ರದಲ್ಲಿಯೇ ಪ್ರಥಮ ಬಾರಿಗೆ ಕರ್ನಾಟಕದಲ್ಲಿ ಜಾರಿಗೆ ತಂದಂತಹ ಸ್ಥಳೀಯ ಪ್ರಜಾಪ್ರಭುತ್ವ ವ್ಯವಸ್ಥೆಗಳೇ 'ಗ್ರಾಮ ಪಂಚಾಯಿತಿ', 'ಜಿಲ್ಲಾ ಪಂಚಾಯಿತಿ' ಹಾಗೂ 'ತಾಲೂಕು ಪಂಚಾಯಿತಿ'. ಇಂತಹ ಪಂಚಾಯಿತಿ ವ್ಯವಸ್ಥೆಯ ಅಸ್ತಿತ್ವಕ್ಕೆ ಇಂದಿನ ಸರ್ಕಾರ ಧಕ್ಕೆ ಉಂಟು ಮಾಡಲು ಹೊರಟಿದ್ದು, ಇದು ವಿಷಾದನೀಯ ಎಂದರು.

ಉಕ್ರೇನ್ ವಿರುದ್ಧ ಡೆಡ್ಲಿ ರಾಕೆಟ್ ದಾಳಿ: ಪುಟಿನ್ ಕನಸಿನ ಸೇತುವೆ ಧ್ವಂಸಕ್ಕೆ ಸೇಡು ತೀರಿಸಿಕೊಂಡ ರಷ್ಯಾ

ಕೀವ್, ಅ.10–ಎರಡು ದಿನಗಳ ಹಿಂದೆಯಷ್ಟೇ ರಷ್ಯಾಕ್ಕೆ ತಿರುಗೇಟು ನೀಡಿದ್ದ ಉಕ್ರೇನ್ ವಿರುದ್ಧ ಡೆಡ್ಲಿ ರಾಕೆಟ್ ದಾಳಿ ಮಾಡುವ ಮೂಲಕ ರಷ್ಯಾ ಸೇಡು ತೀರಿಸಿಕೊಂಡಿದೆ.



ರಷ್ಯಾ ಸೇನೆ ಸೋಮವಾರ ಬೆಳ್ಳಂಬೆಳಗ್ಗೆ (ಸ್ಥಳೀಯ ಸಮಯ ಬೆಳಗ್ಗೆ 8:15) ಅಬ್ಬರಿಸಿದೆ. ಉಕ್ರೇನ್ ರಾಜಧಾನಿ ಕೀವ್ ಮೇಲೆ ಹಲವು ಡೆಡ್ಲಿ ರಾಕೆಟ್‌ಗಳು ಏಕಕಾಲಕ್ಕೆ ದಾಳಿ ನಡೆಸಿದ್ದು, ಹಲವು ಕಟ್ಟಡಗಳನ್ನು ಧ್ವಂಸ ಮಾಡಿದೆ. ಕೀವ್ ನಗರದ ಹಲವೆಡೆ ಹೊಗೆ, ಧೂಳಿನ ಅಬ್ಬರ ಹೆಚ್ಚಾಗಿದ್ದು, ಹಲವು ಕಟ್ಟಡಗಳು ನೆಲಸಮವಾಗಿವೆ. ಉಕ್ರೇನ್ ರಾಜಧಾನಿ ಕೀವ್ ಮಾತ್ರವಲ್ಲ, ಲಿವ್, ತೆರ್ನೋಪಿಲ್ ಸೇರಿದಂತೆ ಹಲವು ನಗರಗಳ ಮೇಲೆ ರಷ್ಯಾ ರಾಕೆಟ್ ದಾಳಿ ನಡೆದಿದೆ. ಕೀವ್ ನಗರದಲ್ಲಿ ಭಾರೀ ಪ್ರಮಾಣದ ಸ್ಫೋಟದ ಸದ್ದು, ಹೊಗೆ, ಧೂಳು ಹಾಗೂ ಬೆಂಕಿ ತುಂಬಿಕೊಂಡಿದೆ. ಇದರಿಂದಾಗಿ ಕಿವ್ ನಗರದಾದ್ಯಂತ ವಿದ್ಯುತ್ ಸಂಪರ್ಕ ಕಡಿತಗೊಂಡಿದೆ. ಸದ್ಯ ಉಕ್ರೇನ್ ವಿರುದ್ಧ ರಷ್ಯಾ ನಡೆಸಿದ ದಾಳಿಯ ಭಯಾನಕ ವೀಡಿಯೋಗಳು ಜಾಲತಾಣದಲ್ಲಿ ಹರಿದಾಡುತ್ತಿವೆ. ಕಿ.ಮೀ. ದೂರದಲ್ಲಿ ನಿಂತವರಿಗೂ ಸ್ಫೋಟದ ದೃಶ್ಯ ಕಂಡುಬರುತ್ತಿದೆ. ಆದರೆ ಸ್ಫೋಟದಿಂದ ಜೀವ ಹಾನಿ ಆಗಿರುವ ಬಗ್ಗೆ ಈವರೆಗೆ ಮಾಹಿತಿ ಲಭ್ಯವಾಗಿಲ್ಲವಾದರೂ ರಕ್ಷಣಾ ಕಾರ್ಯಾಚರಣೆ ಬಳಿಕವೇ ಸ್ಪಷ್ಟ ಚಿತ್ರಣ ಲಭ್ಯವಾಗಲಿದೆ.

ಸೇತುವೆ ಧ್ವಂಸ ಮಾಡಿದ್ದ ಉಕ್ರೇನ್: ಕಳೆದ ಎರಡು ದಿನಗಳ ಹಿಂದೆಯಷ್ಟೇ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಕನಸಿನ ಕ್ರಿಮಿಯಾ–ರಷ್ಯಾ ಸಂಪರ್ಕಿಸುವ ಕ್ರಿಮಿಯಾ ಸೇತುವೆಯನ್ನು ಉಕ್ರೇನ್ ಧ್ವಂಸ ಮಾಡಿತ್ತು. ರಷ್ಯಾ ಆಕ್ರಮಿತ ಕ್ರಿಮಿಯಾ ಭಾಗದ ಮೂಲಕ ಉಕ್ರೇನ್‌ನ ಖೇರ್ಸನ್, ಝುಫ್ರಿಯಾದಲ್ಲಿರುವ ಸೇನೆಗೆ ಇಂಧನ ಸರಬರಾಜು ಮಾಡುವ ರಷ್ಯಾದ ರೈಲನ್ನು ಉಕ್ರೇನ್ ಉಡಾಯಿಸಿತ್ತು. ಸ್ಫೋಟದಲ್ಲಿ ಮೂವರು ಸಾವನ್ನಪ್ಪಿದ್ದರು. ದಕ್ಷಿಣ ಉಕ್ರೇನ್‌ನಲ್ಲಿ ಯುದ್ಧದಲ್ಲಿ ತೊಡಗಿಸಿಕೊಂಡಿರುವ ರಷ್ಯಾದ ಯೋಧರಿಗೆ ಸಾಮಗ್ರಿಗಳನ್ನು ತಲುಪಿಸುವ ಪ್ರಮುಖ ಮಾರ್ಗ ಇದಾಗಿತ್ತು. ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು 70ನೇ ವರ್ಷಕ್ಕೆ ಕಾಲಿಟ್ಟ ಮರುದಿನವೇ ಈ ಸ್ಫೋಟ ನಡೆದಿತ್ತು. ಕಪ್ಪು ಸಮುದ್ರ ಮತ್ತು ಅಜೋವ್ ಸಮುದ್ರವನ್ನು ಸಂಪರ್ಕಿಸುವ ಕ್ರೆಚ್ ಜಲಸಂಧಿಗೆ ಅಡ್ಡಲಾಗಿ ನಿರ್ಮಿಸಿರುವ 19 ಕಿ.ಮೀ. ಉದ್ದದ ಈ ಸೇತುವೆಯನ್ನು 2018ರಲ್ಲಿ ಬಳಕೆಗೆ ಮುಕ್ತಗೊಳಿಸಲಾಗಿತ್ತು. ಇದು ಯೂರೋಪ್‌ನಲ್ಲಿಯೇ ಅತಿ ಉದ್ದದ ಸೇತುವೆಯಾಗಿದೆ.

ಭಾರತೀಯ ಕಲೆ, ಸಂಸ್ಕೃತಿ ಬೆಳವಣಿಗೆಗೆ ವಿಶ್ವಕರ್ಮ ಸಮುದಾಯ ಕೊಡುಗೆ ಅಪಾರ

ಮೈಸೂರು, ಅ.10(ಎಸ್‌ಪಿಎನ್)– ವಿಶ್ವಕರ್ಮ ಸಮುದಾಯ ಭಾರತೀಯ ಕಲೆ ಮತ್ತು ಸಂಸ್ಕೃತಿ ಬೆಳವಣಿಗೆ ಸಾಕಷ್ಟು ಕೊಡುಗೆ ನೀಡಿದೆ ಎಂದು ಹಾಸನ ಜಿಲ್ಲೆ ಅರಕಲಗೂಡು ತಾಲೂಕಿನ ಅರೇಮಾದನ ಹಳ್ಳಿಯ ವಿಶ್ವಕರ್ಮ ಮಠದ ಶ್ರೀ ಶಿವಸುಜ್ಞಾನ ತೀರ್ಥ ಸ್ವಾಮೀಜಿ ಅಭಿಪ್ರಾಯಪಟ್ಟರು.

ಮೈಸೂರು ವಿಶ್ವವಿದ್ಯಾನಿಲಯದ ವಿಜ್ಞಾನ ಭವನದಲ್ಲಿ ಸೋಮವಾರ ನಡೆದ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ರಜತ ಮಹೋತ್ಸವ ಹಾಗೂ ಹಿರಿಯ ಶಿಲ್ಪಿಗಳಾದ ದೇವಲಕುಂದ ವಾದಿರಾಜ್ ಮತ್ತು ಬಿ.ಬಸವಣ್ಣ ಅವರ ಜನ್ಮಶತಮಾನೋತ್ಸವ ಕಾರ್ಯಕ್ರಮದಲ್ಲಿ 10 ಮಂದಿ ಸಾಧಕರಿಗೆ 'ಶಿಲ್ಪ ಶ್ರೀ' ಪ್ರಶಸ್ತಿ ಪ್ರಧಾನ ಮಾಡಿ, ಅವರು ಮಾತನಾಡಿದರು.

ಅಮರಶಿಲ್ಪಿ ಜಕಣಾಚಾರಿ ಕಾಲದಿಂದ ಈಗಿನ ಅರುಣ್ ಯೋಗಿರಾಜ್ ಶಿಲ್ಪಿವರೆಗೂ ಅನೇಕರು ಶಿಲ್ಪ ಕಲಾವಿದರು ಭಾರತೀಯ ಶಿಲ್ಪಕಲೆಗೆ ಜಗತ್ತಿನಲ್ಲಿ ಉನ್ನತ ಸ್ಥಾನ ದೊರಕಿಸಿಕೊಡುವಲ್ಲಿ ಕೊಡುಗೆ ನೀಡಿದ್ದಾರೆ. ಶಿಲ್ಪಿ ಜಕಣಾಚಾರಿ ಅವರು ಅನಾಮಧೇಯರಾಗಿ ಅನೇಕ ದೇವಾಲಯಗಳಿಗೆ ಶಿಲ್ಪಗಳನ್ನು ಕೆತ್ತಿದ್ದಾರೆ. ಬಿಟ್ಟಿದೇವನ ಬಳಿ ಬಂದಾಗ ಶಿಲ್ಪಕಲೆ ಕೈಚಳಕ ಬೆಳಕಿಗೆ ಬಂತು ಎಂದರು.



ಅಮರಶಿಲ್ಪಿ ಜಕಣಾಚಾರಿ ಅವರು, ಬಿಟ್ಟಿದೇವನ ಬಳಿ ಮೊದಲು ಜೈನ ಬಸದಿಗಳ ನಿರ್ಮಾಣ ಕೆಲಸ ಮಾಡಿದರು. ನಂತರ ಶೈವ ಶೈಲಿಯ ದೇವಸ್ಥಾನ ನಿರ್ಮಾಣ ಕೆಲಸ ಮಾಡಿದರು. ನಂತರ ಬಿಟ್ಟಿದೇವ ವೈಷ್ಣವ ಮತಕ್ಕೆ ಮತಾಂತರಗೊಂಡಾಗ ವೈಷ್ಣವ ಶೈಲಿಯ ಶಿಲ್ಪ ಕೆತ್ತನೆ ಕೆಲಸ ಮಾಡಿದ್ದಾರೆ. ಮೂರು ಶೈಲಿಯಲ್ಲೂ ಒಟ್ಟಿಗೆ ಕೆಲಸ ಮಾಡಿದ ಕೀರ್ತಿ ಅಮರಶಿಲ್ಪ ಜಕಣಾಚಾರಿ ಮತ್ತು ಆತನ ಮಗನಿಗೆ ಸಲ್ಲುತ್ತದೆ ಎಂದರು.

ವಿಜಯನಗರ ಸಾಮ್ರಾಜ್ಯದ ಶ್ರೀ ಕೃಷ್ಣದೇವರಾಯನ 19ನೇ ವಂಶಸ್ಥ ಶ್ರೀ ಕೃಷ್ಣದೇವರಾಯ ಮಾತನಾಡಿ, ನಮ್ಮ ಕೌಟುಂಬಿಕ ಮತ್ತು ಸಾಂಸ್ಕೃತಿಕ ಜೀವನ ಶೈಲಿ ಎರಡೆರಡು ಒಟ್ಟೊಟ್ಟಿಗೆ ಮೇಳೈಸಿರುವುದು ಭಾರತದಲ್ಲಿ ಮಾತ್ರ. ನಾನು ಏಳೆಂಟು ವರ್ಷ ವಿದ್ಯಾಭ್ಯಾಸಕ್ಕಾಗಿ ಅಮೇರಿಕಾದಲ್ಲಿದ್ದೆ. ಆಗ ನಾನು ಗಮನಿಸಿದಾಗ ನಮ್ಮ ಸಂಸ್ಕೃತಿ, ಪರಂಪರೆಯನ್ನು ಬೇರೆ ರಾಷ್ಟ್ರಗಳಿಗೆ ಹೋಲಿಸಲು ಸಾಧ್ಯವೇ ಇಲ್ಲ. ನಮ್ಮ ಸಮಾಜದ ಕೌಟುಂಬಿಕ ಮತ್ತು ಜೀವನ ಪದ್ಧತಿ ಬೇರೆ ದೇಶದಲ್ಲಿ ಕಾಣಲು ಸಾಧ್ಯವಿಲ್ಲ ಎಂದರು.

ಕಲಾವಿದ ಸುಚೇಂದ್ರಪ್ರಸಾದ್ ಮಾತನಾಡಿ, ನಮ್ಮ ಪರಂಪರೆಯಲ್ಲಿರುವ ಧರ್ಮ, ಅರ್ಥ, ಕಾಮ, ಮೋಕ್ಷದ ಗುಟ್ಟನ್ನು ಶಿಲ್ಪ ಕಲೆ ಮೂಲಕ ಜಗತ್ತಿಗೆ ತಿಳಿಸಿದವರು ವಿಶ್ವಕರ್ಮ ಸಮುದಾಯ. ನಮ್ಮ ಹಿಂದಿನ ಶಿಲ್ಪಕಲೆಗಳು, ನಮ್ಮ ಸಂಸ್ಕೃತಿ ಮತ್ತು ಪರಂಪರೆಯನ್ನು ಬಿಂಬಿಸುತ್ತದೆ ಎಂದರು.

10 ಮಂದಿ ಸಾಧಕರಿಗೆ ಶಿಲ್ಪ ಶ್ರೀ' ಪ್ರಶಸ್ತಿ ಪ್ರಧಾನ: ಈ ವೇಳೆ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯಿಂದ ಕೊಡಮಾಡುವ 2022ನೇ ಸಾಲಿನ 'ಶಿಲ್ಪ ಶ್ರೀ' ಪ್ರಶಸ್ತಿಗೆ ಗದಗ ಜಿಲ್ಲೆಯ ಎನ್.ರಾಘವೇಂದ್ರ, ಉಡುಪಿ ಜಿಲ್ಲೆಯ ಕೆ.ಸತೀಶ್ ಆಚಾರ್ಯ, ವಿಜಯನಗರ ಜಿಲ್ಲೆಯ ಕೆ.ಸುರೇಶ್ ಆಚಾರ್ಯ, ಧಾರವಾಡ ಜಿಲ್ಲೆಯ ನಾಗೇಂದ್ರ ಕಮ್ಮಾರ, ಬೆಳಗಾವಿ ಜಿಲ್ಲೆಯ ಅಶೋಕ ಆರ್.ಬಡಿಗೇರ, ಬೆಂಗಳೂರಿನ ಜಿ.ವಿ.ಶಿವಕುಮಾರ್, ಯಾದಗಿರಿ ಜಿಲ್ಲೆಯ ನಾಗರಾಜ ಬಿ.ಕಂಬಾರ, ಬಾಗಲಕೋಟೆ ಜಿಲ್ಲೆಯ ವೀರೇಶ್ ಜಿ.ಮಾಯಾಚಾರ್ಯ, ಕಲಬುರಗಿ ಜಿಲ್ಲೆಯ ನಿಂಗಪ್ಪಾ ಡಿ.ಕೇರಿ, ಶಿವಮೊಗ್ಗ ಜಿಲ್ಲೆಯ ಡಿ.ಎನ್.ಚಂದ್ರಶೇಖರ್ ಅವರಿಗೆ ಶಿಲ್ಪಿಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು.

ನಂತರ ವಿದ್ವಾನ್ ಎಂ.ನಾಗರಾಜ್ ಮತ್ತು ವಿದ್ವಾನ್ ಎಂ.ಮಂಜುನಾಥ್ ಅವರ 'ವಯೋಲಿನ್ ಜುಗುಲ್ ಬಂದಿ' ನಡೆಸಿಕೊಟ್ಟರು. ಈ ವೇಳೆ ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಅಧ್ಯಕ್ಷ ವೀರಣ್ಣಾ ಮಾ. ಅರ್ಕಸಾಲಿ, ರಿಜಿಸ್ಟ್ರಾರ್ ಆರ್.ಚಂದ್ರಶೇಖರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೈಸೂರು ವಿಭಾಗದ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ರಂಗಾಯಣ ಉಪನಿರ್ದೇಶಕಿ ನಿರ್ಮಲ ಮಠಪತಿ ಉಪಸ್ಥಿತರಿದ್ದರು.

ಚಿತ್ರದುರ್ಗ ತಲುಪಿದ ಭಾರತ್ ಜೋಡೋ ಪಾದಯಾತ್ರೆ



ಚಿತ್ರದುರ್ಗ,ಅ.10–ರಾಹುಲ್ ಗಾಂಧಿ ನೇತೃತ್ವದ ಭಾರತ್ ಜೋಡೋ ಪಾದಯಾತ್ರೆ ತುಮಕೂರು ಜಿಲ್ಲೆಯಿಂದ ಹಿರಿಯೂರು ನಗರದ ಪ್ರವೇಶಿಸಿದೆ. ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಭಾರತ್ ಜೋಡೋ ಯಾತ್ರೆ ನಡೆಯುತ್ತಿದ್ದು, ಸೆಪ್ಟೆಂಬರ್ 30ರಿಂದ ಕರ್ನಾಟಕದಲ್ಲಿ ಆರಂಭವಾಗಿದೆ.

ರಾಜ್ಯದಲ್ಲಿ ಸೋಮವಾರ 9ನೇ ದಿನದ ಭಾರತ್ ಜೋಡೊ ಪಾದಯಾತ್ರೆ ಮುಂದುವರೆದಿದೆ, ತುಮಕೂರಿನ ಹುಳಿಯಾರು ಮೂಲಕ ಹೊಸದುರ್ಗ ಗಡಿ ಭಾಗದ ಹಿರಿಯೂರು ಪ್ರವೇಶಿಸಿದೆ. ಪೂರ್ವನಿಗದಿಯಂತೆ ಯಾತ್ರೆ ಅ.12ರಂದು ಜಿಲ್ಲೆಗೆ ಬರಬೇಕಿತ್ತು. 15ರಂದು ಬಳ್ಳಾರಿಯಲ್ಲಿ ಸಮಾವೇಶ ಏರ್ಪಡಿಸಿದ ಕಾರಣಕ್ಕೆ ಯಾತ್ರೆ 2 ದಿನ ಮುನ್ನ ಜಿಲ್ಲೆಯನ್ನು ಪ್ರವೇಶಿಸಿದೆ. ತುಮಕೂರು ಗಡಿಯಿಂದ ಬಳ್ಳಾರಿ ಗಡಿಯವರೆಗೆ 130 ಕಿ.ಮೀ ದೂರದವರೆಗೆ ಚಿತ್ರದುರ್ಗ ಜಿಲ್ಲೆಯಲ್ಲಿ ಯಾತ್ರೆ ಸಾಗಲಿದೆ. ರಾಷ್ಟ್ರೀಯ ಹೆದ್ದಾರಿ 150–ಎ ಮಾರ್ಗದಲ್ಲಿ ಯಾತ್ರೆ ತೆರಳಲಿದೆ.

ಅ.14ರವರೆಗೆ ಚಿತ್ರದುರ್ಗ ಜಿಲ್ಲೆಯಲ್ಲಿ ಯಾತ್ರೆ ನಡೆಯಲಿದೆ. ಹಿರಿಯೂರು ಚಳ್ಳಕೆರೆ, ಮೊಳಕಾಲ್ಮೂರು ಮಾರ್ಗದಲ್ಲಿ ಯಾತ್ರೆ ನಡೆಯಲಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ನೀಡಲಾಗಿದೆ. ರಾಜ್ಯದಲ್ಲಿ ಸೆ.30ರಿಂದ ಅ. 14ರವರೆಗೆ ರಾಹುಲ್ ಪಾದಯಾತ್ರೆ ನಡೆಯುತ್ತಿದೆ. ಹಿರಿಯೂರು ನಗರದಿಂದ ಚಳ್ಳಕೆರೆ ರಸ್ತೆಯ ಬಾಲೇನಹಳ್ಳಿ ಮುಂದುವರಿದು ಹರ್ತಿಕೋಟೆಯಲ್ಲಿ ವಾಸ್ತವ್ಯ ಹೂಡುವರು. ನಂತರ ಬೆಳಿಗ್ಗೆ ಚಳ್ಳಕೆರೆ ತಾಲೂಕಿನ ಸಾಣಿಕೆರೆ ಬಳಿ ಚೇತನ್ ಹೋಟೆಲ್ ಬಳಿ ವಿಶ್ರಾಂತಿ ಪಡೆದು ಚಳ್ಳಕೆರೆ ನಗರದ ಪ್ರವೇಶಿಸಲಿದೆ.

ಭಾರತ್ ಜೋಡೋ ಪಾದಯಾತ್ರೆಗೆ ಇಬ್ಬರು ಪೊಲೀಸ್ ವರಿಷ್ಠಾಧಿಕಾರಿಗಳ ನೇತೃತ್ವದಲ್ಲಿ 7 ಡಿವೈಎಸ್‌ಪಿ, 29 ಪಿಐ, 89 ಪಿಎಸ್‌ಐ, 5 ಕೆಎಸ್‌ಆರ್‌ಪಿ, 7 ಡಿಎಆರ್ ತುಕಡಿಗಳು ಕರ್ತವ್ಯ ನಿರ್ವಹಿಸಲಿವೆ. ಯಾತ್ರೆ ಸಾಗುವ ಮಾರ್ಗದಲ್ಲಿ ಭದ್ರತೆ ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಕೆಲವು ಕಡೆ ವಾಹನಗಳ ಸಂಚಾರ ನಿಷೇಧಿಸಿ, ಬದಲಿ ಮಾರ್ಗಗಳ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ಪರಶುರಾಮ ತಿಳಿಸಿದ್ದಾರೆ.

ಯಾತ್ರೆಗೆ ತೆರಳುತ್ತಿದ್ದ ಬಸ್ ಅಪಘಾತ: ಭಾರತ್ ಜೋಡೋ ಯಾತ್ರೆಗೆ ಕಾಂಗ್ರೆಸ್ ಕಾರ್ಯಕರ್ತರನ್ನು ಕರೆದೊಯ್ಯುತ್ತಿದ್ದ ಖಾಸಗಿ ಬಸ್ ಅಪಘಾತಕ್ಕೀಡಾದ ಘಟನೆ ಚಿಕ್ಕಬಳ್ಳಾಪುರ–ಗೌರಿಬಿದನೂರು ಮಾರ್ಗದ ಕಣಿವೆಯಲ್ಲಿ ಸಂಭವಿಸಿದೆ. ಕಣಿವೆ ತಿರುವು ಪ್ರದೇಶದಲ್ಲಿ ಓವರ್ ಟೇಕ್ ಮಾಡುವ ಭರದಲ್ಲಿ ಎದುರುಗಡೆಯಿಂದ ಬಂದ ಕೆಎಸ್‌ಆರ್‌ಟಿಸಿ ಬಸ್‌ಗೆ ಮುಖಾಮುಖಿ ಡಿಕ್ಕಿಯಾಗಿದೆ. ಚಿಕ್ಕಬಳ್ಳಾಪುರ ಜಿಲ್ಲೆಯಿಂದ ಚಿತ್ರದುರ್ಗದ ಕಾಂಗ್ರೆಸ್ ಪಾದಯಾತ್ರೆಗೆ ಕಾಂಗ್ರೆಸ್ ಕಾರ್ಯಕರ್ತರನ್ನು ಕರೆದೊಯ್ಯಲಾಗುತ್ತಿತ್ತು. ಅದೃಷ್ಟವಶಾತ್ 2 ಬಸ್‌ನಲ್ಲಿದ್ದ ಪ್ರಯಾಣಿಕರು ಯಾವುದೇ ಅಪಾಯವಿಲ್ಲದೆ ಪಾರಾಗಿದ್ದಾರೆ. ಘಟನೆಯಲ್ಲಿ ಖಾಸಗಿ ಬಸ್‌ನ ಮುಂಭಾಗದ ಗಾಜು ಸಂಪೂರ್ಣ ಪುಡಿ, ಪುಡಿಯಾಗಿದೆ. ಘಟನೆ ನಂತರ ಬೇರೊಂದು ಬಸ್‌ನಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಪಾದಯಾತ್ರೆಗೆ ತೆರಳಿದ್ದಾರೆ. ಚಿಕ್ಕಬಳ್ಳಾಪುರ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ನಡೆದಿದೆ.

ಓಲಾ, ಉಬರ್, ರ್‍ಯಾಪಿಡೋ ಸುಲಿಗೆಗೆ ಬ್ರೇಕ್ ಹಾಕಲು ಸಾರಿಗೆ ಇಲಾಖೆ ನಿರ್ಧಾರ

ಬೆಂಗಳೂರು: ಓಲಾ, ಉಬರ್, ರ್‍ಯಾಪಿಡೋ ಆಪ್ ಆಧಾರಿತ ಆಟೋಗಳ ಸುಲಿಗೆಗೆ ಬ್ರೇಕ್ ಹಾಕಲು ಸಾರಿಗೆ ಇಲಾಖೆ ಮುಂದಾಗಿದೆ. ಆಟೋಗಳನ್ನು ಸೀಜ್ ಮಾಡಲು ಹೊರಟಿದ್ದ ಸಾರಿಗೆ ಇಲಾಖೆ ವಿರುದ್ಧ ದೊಡ್ಡ ಪ್ರತಿಭಟನೆಯೇ ನಡೆದಿದೆ. ಓಲಾ, ಉಬರ್, ರ್‍ಯಾಪಿಡೋ ಆಪ್ ಆಧಾರಿತ ಆಟೋಗಳಿಂದ ಹಾಡಹಗಲೇ ಜನರಿಂದ ಸುಲಿಗೆ ನಡೆಯುತ್ತಿರುವ ಬಗ್ಗೆ ಸಾರಿಗೆ ಇಲಾಖೆ ಖಡಕ್ ಎಚ್ಚರಿಕೆ ಕೊಟ್ಟಿದ್ದರೂ ಎಚ್ಚೆತ್ತಿರಲಿಲ್ಲ. ಓಲಾ, ಉಬರ್, ರ್‍ಯಾಪಿಡೋ ಕಂಪನಿಗಳಿಗೆ ಈಗಾಗಲೇ ನೋಟಿಸ್ ನೀಡಿ ಕೊಟ್ಟ ಗಡುವು ಕೂಡ ಮುಗಿದಿತ್ತು. ಆದರೆ ಓಲಾ, ಉಬರ್ ಕಂಪನಿಗಳು ಹೆಚ್ಚುವರಿ ಹಣ ವಸೂಲಿ ಮಾಡುತ್ತಿಲ್ಲ ಎಂದು ವಾದ ಮಾಡುತ್ತಿದ್ದವು. ನಾಳೆ ಸಾರಿಗೆ ಇಲಾಖೆ ಈ ಎರಡು ಸಂಸ್ಥೆಗಳ ಆಟೋಗಳ ಭವಿಷ್ಯ ನಿರ್ಧರಿಸಲಿದೆ.

ಆಪ್ ಆಧಾರಿತ ಆಟೋಗಳ ವಿರುದ್ಧ ಸಾರಿಗೆ ಇಲಾಖೆ ಕಠಿಣ ಕ್ರಮಕ್ಕೆ ಮುಂದಾಗಿದೆ. ಓಲಾ, ಉಬರ್, ರ್‍ಯಾಪಿಡೋ ಆಪ್ ಮೂಲಕ ಆಟೋ ಓಡಿಸಿದರೆ ಜಪ್ತಿ ಮಾಡುವುದಾಗಿ ಇಲಾಖೆ ಎಚ್ಚರಿಕೆ ಕೊಟ್ಟಿದೆ. ಈ ಬೆನ್ನಲ್ಲೇ ಜಯನಗರ ಆರ್‌ಟಿಓ ಅಧಿಕಾರಿಗಳು ಆಪ್ ಆಧಾರಿತ ಆಟೋ ಚಾಲಕನಿಗೆ 6 ಸಾವಿರ ರೂ. ದಂಡದ ರಶೀದಿಯನ್ನು ಕೊಟ್ಟಿದ್ದರು. ಇದರಿಂದ ರೊಚ್ಚಿಗೆದ್ದ ಆಟೋ ಚಾಲಕರು ಜಯನಗರ ಬಸ್ ನಿಲ್ದಾಣದ ಬಳಿ ಬೃಹತ್ ಪ್ರತಿಭಟನೆ ನಡೆಸಿದರು. ಕಂಪನಿಗಳ ವಿರುದ್ಧ ಕ್ರಮ ಕೈಗೊಳ್ಳದೇ ಆಟೋಗಳನ್ನು ಸೀಜ್ ಮಾಡುವ ಇಲಾಖೆ ಕ್ರಮಕ್ಕೆ ತೀವ್ರ ಆಕ್ರೋಶ ವ್ಯಕ್ತವಾಗಿವೆ. ಆಟೋಗಳನ್ನು ಸೀಜ್ ಮಾಡಿದರೆ ಸಿಎಂ, ಸಾರಿಗೆ ಸಚಿವರ ಮನೆಗಳಿಗೆ ಮುತ್ತಿಗೆ ಹಾಕುತ್ತೇವೆ ಎಂದು ಆಪ್ ಆಧಾರಿತ ಆಟೋ ಚಾಲಕರು ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ.

ಮೈಸೂರು ಮಿತ್ರ ಮಂಗಳವಾರ 11 ಅಕ್ಟೋಬರ್ 2022

ತಲಕಾವೇರಿ ತೀರ್ಥೋದ್ಭವ ಸಿದ್ಧತೆ: ಉಸ್ತುವಾರಿ ಸಚಿವರ ಸಭೆ



ಮಡಿಕೇರಿ, ಅ.10– ನಾಡಿನ ಜೀವನದಿ, ಪವಿತ್ರ ಕ್ಷೇತ್ರ ತಲಕಾವೇರಿಯಲ್ಲಿ ಜರುಗುವ ತುಲಾಸಂಕ್ರಮಣ ತೀರ್ಥೋದ್ಭವ ಸಿದ್ಧತೆ ಸಂಬಂಧ ಕೊಡಗು ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ಸಿ.ನಾಗೇಶ್ ಅವರು ಅಧಿಕಾರಿಗಳಿಂದ ಮಾಹಿತಿ ಪಡೆದರು.

ನಗರದ ಜಿಪಂ ಸಿಇಒ ಅವರ ಕಚೇರಿಯಲ್ಲಿ ಅಧಿಕಾರಿಗಳ ಜೊತೆ ಸಭೆ ನಡೆದ ಸಭೆಯಲ್ಲಿ ಮಾಹಿತಿ ಪಡೆದ ಸಚಿವರು ಕೋವಿಡ್–19 ಕಡಿಮೆಯಾಗಿರುವ ಹಿನ್ನೆಲೆ ಈ ಬಾರಿ ಭಕ್ತಾದಿಗಳಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಗಮನಹರಿಸಬೇಕು. ಸಂಜೆ ವೇಳೆಯಲ್ಲಿ ತೀರ್ಥೋದ್ಭವ ಸಂಭವಿಸುವುದರಿಂದ ಬೆಳಕಿನ ವ್ಯವಸ್ಥೆ, ಸುಗಮ ಸಾರಿಗೆ ಸಂಚಾರ ವ್ಯವಸ್ಥೆ, ಬಸ್ ಸೌಲಭ್ಯ ಹೀಗೆ ಮತ್ತಿತರ ಅಗತ್ಯ ತಯಾರಿ ಮಾಡಿಕೊಳ್ಳುವಂತೆ ಸಚಿವರು ಸೂಚಿಸಿದರು.

ಸಭೆಯ ಆರಂಭದಲ್ಲಿ ಪ್ರಮುಖರಾದ ಎಂ.ಬಿ.ದೇವಯ್ಯ ಅವರು ಭಾಗಮಂಡಲದ ತ್ರಿವೇಣಿ ಸಂಗಮದಲ್ಲಿ ಪಿಂಡ ಪ್ರಧಾನ ಮಾಡಿದ ಭಕ್ತಾದಿಗಳಿಗೆ ಪವಿತ್ರ ಕೊಳಕ್ಕೆ ತೆರಳಲು ಅವಕಾಶ ಮಾಡಬೇಕು ಎಂದು ಅವರು ಕೋರಿದರು. ಇದಕ್ಕೆ ವಿಧಾನಪರಿಷತ್ ಸದಸ್ಯ ಸುಜಾ ಕುಶಾಲಪ್ಪ ಅವರು ಧ್ವನಿಗೂಡಿಸಿ ಭಕ್ತಾದಿಗಳಿಗೆ ಯಾವುದೇ ರೀತಿಯ ಕಿರಿ ಕಿರಿ ಉಂಟಾಗದಂತೆ ಗಮನ ಹರಿಸಬೇಕು ಎಂದು ಸಲಹೆ ಮಾಡಿದರು.

ಡಿವೈಎಸ್‌ಪಿ ಗಜೇಂದ್ರ ಪ್ರಸಾದ್ ಅವರು ತಲಕಾವೇರಿ ಕೊಳದ ಬಳಿ ಈ ಹಿಂದಿನಂತೆ ಬ್ಯಾರಿಕೇಡ್ ಅಳವಡಿಸಿ ನೂಕುನುಗ್ಗಲು ಉಂಟಾಗದಂತೆ ಎಚ್ಚರಿಕೆ ವಹಿಸಲಾಗುತ್ತದೆ. ಇದಕ್ಕೆ ಭಕ್ತಾದಿಗಳು ಸಹಕರಿಸಬೇಕು ಎಂದು ಅವರು ಕೋರಿದರು.



ಈ ಸಂದರ್ಭದಲ್ಲಿ ಮಾತನಾಡಿದ ಎಂ.ಬಿ. ದೇವಯ್ಯ, ಪವಿತ್ರ ಕುಂಡಿಕೆ ಬಳಿ ಕುಂಕುಮಾರ್ಚನೆಗೆ ಅವಕಾಶ ಮಾಡಬೇಕು ಎಂದರು.

ಈ ಕುರಿತು ಮಾತನಾಡಿದ ಎಂ.ಪಿ. ಅಪ್ಪಚ್ಚು ರಂಜನ್, ತೀರ್ಥೋದ್ಭವ ದಿನದಂದು ಪವಿತ್ರ ಕುಂಡಿಕೆ ಬಳಿ ಕುಂಕುಮಾರ್ಚನೆ ಮಾಡಲು ಸಾಧ್ಯವಿಲ್ಲ. ಜೊತೆಗೆ ಕೊಳದಲ್ಲಿ ಪುಣ್ಯಸ್ನಾನ ಮಾಡುವುದು ಬೇಡ. ಇದಕ್ಕೆ ಭಕ್ತಾದಿಗಳು ಸಹಕರಿಸಬೇಕು ಎಂದು ಅವರು ಮನವಿ ಮಾಡಿದರು. ಇದಕ್ಕೆ ಧ್ವನಿಗೂಡಿಸಿದ ಶಾಸಕ ಕೆ.ಜಿ.ಬೋಪಯ್ಯ, ಇದಕ್ಕೆ ನನ್ನ ಸಹಮತವಿದೆ. ಭಕ್ತಾದಿಗಳು ತೀರ್ಥ ತೆಗೆದುಕೊಂಡು ಹೋಗುವುದರಿಂದ ಸಹಕರಿಸಬೇಕು ಎಂದು ಕೋರಿದರು.

ಇದಕ್ಕೆ ನಾಪಂಡ ರವಿಕಾಳಪ್ಪ ಅವರು ಧ್ವನಿಗೂಡಿಸಿ ಈ ಹಿಂದಿನಂತೆ ಭಕ್ತಾದಿಗಳಿಗೆ ಅವಕಾಶ ನೀಡಬೇಕು ಎಂದರು. ಈ ಕುರಿತು ಮತ್ತೊಬ್ಬ ಸ್ಥಳೀಯರು ಮಾತನಾಡಿ ಪವಿತ್ರ ಕೊಳದಲ್ಲಿ ಪುಣ್ಯಸ್ನಾನ ಮಾಡುವುದರಿಂದ ಒಳ್ಳೆಯದಾಗುತ್ತದೆ. ಹಾಗಾಗಿ ಯಾವುದೇ ನಿರ್ಬಂಧ ಹೇರಬಾರದು ಎಂದು ಅವರು ಕೋರಿದರು. ವಿಧಾನಪರಿಷತ್ ಸದಸ್ಯ ಸುಜಾ ಕುಶಾಲಪ್ಪ ಮಾತನಾಡಿ, ಕೊಡಗಿನ ಭಕ್ತಾದಿಗಳಿಗೆ ಯಾವುದೇ ನಿರ್ಬಂಧ ಹೇರಬಾರದು ಎಂದರು.

ಈ ಬಗ್ಗೆ ಮಾತನಾಡಿದ ಶಾಸಕರು ಸ್ಥಳೀಯರು ಮತ್ತು ಹೊರಗಿನವರು ಎಂದು ವಿಂಗಡಿಸುವುದು ಬೇಡ ಎಂದು ಸಲಹೆ ಮಾಡಿದರು. ಜಿ.ಪಂ. ಸಿಇಒ ಭಂವರ್ ಸಿಂಗ್ ಮೀನಾ, ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ನಂಜುಂಡೇಗೌಡ ಇತರರು ಹಲವು ಮಾಹಿತಿ ನೀಡಿದರು.

ಕೊಡವ ತಕ್ಕಾಫ್–2022 ಅಂತಾರಾಷ್ಟ್ರೀಯ ಮಟ್ಟದ ಸ್ಪರ್ಧೆಯಲ್ಲಿ ಕೊಡಗ್ ಕೂಟಕ್ಕೆ ಪ್ರಥಮ



ಇತ್ತೀಚೆಗೆ ನಡೆದ 'ಕೊಡವ ತಕ್ಕಾಫ್–2022' ಅಂತಾರಾಷ್ಟ್ರೀಯ ಮಟ್ಟದ ಸ್ಪರ್ಧೆಯಲ್ಲಿ 'ಕೊಡಗ್ ಕೂಟ' ತಂಡ ಪ್ರಥಮ ಬಹುಮಾನ ಪಡೆದುಕೊಂಡಿದೆ. ಏಳು ದೇಶಗಳ ನಡುವಿನ ಈ ಅಂತಾರಾಷ್ಟ್ರೀಯ ಕೊಡವ ತಕ್ಕಾಫ್ ಪೈಪೋಟಿಯಲ್ಲಿ ವಿವಿಧ ದೇಶದ ಏಳು ತಂಡಗಳು ಭಾಗವಹಿಸಿ ಕೊಡಗು ತಂಡ ಪ್ರಥಮ ಬಹುಮಾನ ಪಡೆದುಕೊಂಡರೆ, ಯು.ಎಸ್.ಎ ತಂಡ ದ್ವಿತೀಯ ಹಾಗೂ ಮಿಡಲ್ ಈಸ್ಟ್ ತಂಡ ತೃತೀಯ ಬಹುಮಾನವನ್ನು ಪಡೆದುಕೊಂಡಿದೆ. ಕಳೆದ ಎರಡು ವರ್ಷಗಳಿಂದ ಸಾಮಾಜಿಕ ಜಾಲ ಮಾಧ್ಯಮದಲ್ಲಿ ಬಲ್ಲಚಂಡ ನೈನಾ ಹಾಗೂ ಮರ್ಕರ ಹೋಮ್ ಆಫೀಸ್ ಆಯೋಜಿಸುತ್ತಿರುವ 'ಕೊಡವ ತಕ್ಕಾಫ್' ಪೈಪೋಟಿಯಲ್ಲಿ ಮೊದಲ ವರ್ಷವೇ ಕೊಡಗು ತಂಡ ಜಯಗಳಿಸಿದ್ದರೆ, ಈ ಬಾರಿ ಕೂಡ ಕೊಡಗು ತಂಡ 20 ಅಂಕಗಳ ಅಂತರದಲ್ಲಿ 'ಕೊಡವ ತಕ್ಕಾಫ್–2022' ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿದೆ. ಅಕ್ಟೋಬರ್ 1ರಂದು ಹಾಗೂ ಅಕ್ಟೋಬರ್ 9 ರಂದು ನಡೆದ ಎರಡು ಹಂತದ ಪೈಪೋಟಿಯಲ್ಲಿ ಕೊಡಗು ತಂಡದ ಪರ ಬಾಳೆಯಡ ದಿವ್ಯಾ ಮಂದಪ್ಪ ನೇತೃತ್ವದಲ್ಲಿ ಡಾ. ಮುಲ್ಲೇಂಗಡ ರೇವತಿ ಪೂವಯ್ಯ, ಮುಲ್ಲೇಂಗಡ ಮಧೋಶ್ ಪೂವಯ್ಯ, ಬೊಳ್ಳಾಜೀರ ಯಮುನಾ ಅಯ್ಯಪ್ಪ ಹಾಗೂ ಚಮ್ಮಟೀರ ಪ್ರವೀಣ್ ಉತ್ತಪ್ಪ ಭಾಗವಹಿಸಿದ್ದರು.

ಕೊಡಗಿಗೆ ಪ್ರವಾಸ ಬಂದಿದ್ದ ಟೆಕ್ಕಿ ಸಾವು



ಮಡಿಕೇರಿ,ಅ.10– ಪ್ರವಾಸಕ್ಕೆಂದು ಕೊಡಗು ಜಿಲ್ಲೆಗೆ ಬಂದಿದ್ದ ಸಾಫ್ಟ್‌ವೇರ್ ಇಂಜಿನಿಯರ್ ಮೃತಪಟ್ಟಿರುವ ಘಟನೆ ಪೊನ್ನಂಪೇಟೆ ತಾಲೂಕಿನ ಟಿ.ಶೆಟ್ಟಿಗೇರಿಯ ಬೀರುಗದಲ್ಲಿ ನಡೆದಿದೆ. ಮೂಲತಃ ಚಿಕ್ಕಬಳ್ಳಾಪುರದ ನಿವಾಸಿ ಅಭಿಷೇಕ್(31) ಎಂಬವರು ಮೃತಪಟ್ಟವರಾಗಿದ್ದು, ಹೃದಯಾಘಾತ ಸಾವಿಗೆ ಕಾರಣ ಎಂದು ಹೇಳಲಾಗಿದೆ.

ಬೀರುಗ ಗ್ರಾಮದ ಹೋಂ ಸ್ಟೇ ಒಂದರಲ್ಲಿ ಈ ಘಟನೆ ನಡೆದಿದ್ದು, ಮೃತರ ಸಹೋದರ ಅಶೋಕ್ ಕುಮಾರ್ ಅವರು ನೀಡಿರುವ ದೂರಿನ ಹಿನ್ನೆಲೆ ಶ್ರೀಮಂಗಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಬೆಂಗಳೂರಿನ ಖಾಸಗಿ ಸಂಸ್ಥೆಯಲ್ಲಿ ಉದ್ಯೋಗಿಗಳಾಗಿದ್ದ ಅಭಿಷೇಕ್ ಸಹಿತ ಒಟ್ಟು 17 ಮಂದಿ ಸ್ನೇಹಿತರು ಪ್ರವಾಸಕ್ಕೆಂದು ಕೊಡಗಿಗೆ ಬಂದಿದ್ದ ಸಂದರ್ಭ ಈ ಘಟನೆ ನಡೆದಿದೆ. ಗೋಣಿಕೊಪ್ಪ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ದೇಹವನ್ನು ಪೋಷಕರಿಗೆ ಒಪ್ಪಿಸಲಾಗಿದೆ.

ಸಾಕು ನಾಯಿಗೆ ಗುಂಡು: ಕೇಸ್ ದಾಖಲು

ಮಡಿಕೇರಿ,ಅ.10– ಮನೆ ಮಾಲೀಕನೊಂದಿಗೆ ವಾಕಿಂಗ್ ತೆರಳುತ್ತಿದ್ದ ಸಂದರ್ಭ ವ್ಯಕ್ತಿಯೊಬ್ಬರು ಕ್ಷುಲ್ಲಕ ಕಾರಣಕ್ಕೆ 'ಸೈಬೀರಿಯನ್ ಹಸ್ಕಿ' ತಳಿಯ ನಾಯಿಗೆ ಗುಂಡು ಹೊಡೆದ ಘಟನೆ ಮಡಿಕೇರಿ ತಾಲೂಕಿನ ತಾಳತ್‌ಮನೆಯಲ್ಲಿ ನಡೆದಿದೆ. ಗುಂಡೇಟು ತಗುಲಿ ಹಸ್ಕಿ ನಾಯಿ ತೀವ್ರವಾಗಿ ನರಳುತ್ತಿದೆ. ತಾಳತ್ತಮನೆ ನಿವಾಸಿ ಎಂ.ಕೆ.ನಾಚಪ್ಪ ಎಂಬವರಿಗೆ ಸೇರಿದ ಹಸ್ಕಿ ನಾಯಿ ಯಜಮಾನನೊಂದಿಗೆ ತೆರಳುತ್ತಿದ್ದಾಗ ರಾಜೀವ್ ಲೋಚನ್ ಎಂಬವರು ಗುಂಡು ಹಾರಿಸಿದ್ದಾರೆ ಎಂದು ನಾಚಪ್ಪ ಮಡಿಕೇರಿ ಗ್ರಾಮಾಂತರ ಠಾಣೆಗೆ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಇಗ್ಗುತ್ತಪ್ಪ ಕೊಡವ ಸಂಘದ ಪದಾಧಿಕಾರಿಗಳ ಆಯ್ಕೆ

ಗೋಣಿಕೊಪ್ಪ, ಅ.10– ಇಗ್ಗುತ್ತಪ್ಪ ಕೊಡವ ಸಂಘದ ನೂತನ ಅಧ್ಯಕ್ಷರಾಗಿ ಅಜ್ಜಿಕುಟ್ಟೀರ ಸಿ. ದೇವಯ್ಯ, ಉಪಾಧ್ಯಕ್ಷರಾಗಿ ಕೋಣಿಯಂಡ ಬೋಜಮ್ಮ ಉತ್ತಪ್ಪ, ಕಾರ್ಯದರ್ಶಿಯಾಗಿ ಚೋನೀರ ಸತ್ಯ, ಖಜಾಂಚಿಯಾಗಿ ಅಯ್ಯಂಡ ಪೂವಯ್ಯ, ನಿರ್ದೇಶಕರಾಗಿ ಚೊಟ್ಟೆಯಂಡಮಾಡ ಡಿ. ಅರುಣ, ಮಲ್ಲಂಡ ಸುರೇಶ್, ಚೋಡುಮಾಡ ಅಯ್ಯಣ್ಣ, ಮಾಳೇಟೀರ ಗಣಪತಿ, ಕತುರ ನಾಚಪ್ಪ, ಮೂಕಳಮಾಡ ಪೂಣಚ್ಚ, ಚೋನೀರ ಮಂಜು, ಮೋರ್ಕಂಡ ಗಣಪತಿ, ಚಿರಿಯಪಂಡ ಲತಾ ಪೂಣಚ್ಚ, ಚೊಟ್ಟೆಯಂಡಮಾಡ ರೀಟಾ ಮಾದಪ್ಪ, ಚಿಲ್ಲವಂಡ ರಚನಾ ದರ್ಶನ್, ಮಲಚೀರ ಯಶೋಧ ದೇವಯ್ಯ, ನೆಲ್ಲಮಕ್ಕಡ ಪ್ರೇಮ ಉತ್ತಪ್ಪ ಆಯ್ಕೆ ಮಾಡಲಾಯಿತು.

ಡಾ.ಸುಬ್ರಮಣಿಯನ್ ಸ್ವಾಮಿ ಸಂಸದರ ನಿಧಿಯಿಂದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ



ಮಡಿಕೇರಿ,ಅ.10– ಹಿರಿಯ ರಾಜಕಾರಣಿ ಡಾ.ಸುಬ್ರಮಣಿಯನ್ ಸ್ವಾಮಿ ತಮ್ಮ ರಾಜ್ಯ ಸಭಾ ನಿಧಿಯಿಂದ ಕೊಡಗಿನ ಕುಗ್ರಾಮಗಳ 'ಬಲ್ಯಮನೆ' ರಸ್ತೆ ಮತ್ತು ಇತರ ರಸ್ತೆಗಳ ಅಭಿವೃದ್ಧಿಗೆ 2.46 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ್ದು, ಮೊದಲ ಹಂತದ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ.

ಒಂದೂವರೆ ಕೋಟಿ ರೂ. ವೆಚ್ಚದಲ್ಲಿ ಕುಶಾಲನಗರ ತಾಲೂಕಿನ 'ನೂರೊಕ್ಕನಾಡ್ ಹಿಲ್ಸ್' ರಸ್ತೆ ಮತ್ತು ಮಡಿಕೇರಿ ತಾಲೂಕಿನ ಕತ್ತಲೆಕಾಡು ರಸ್ತೆ ಅಭಿವೃದ್ಧಿಯಾಗುತ್ತಿದೆ. ಈ ಭಾಗದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಡಾ.ಸುಬ್ರಮಣಿಯನ್ ಸ್ವಾಮಿ ಅವರ ಆಪ್ತ ಹಾಗೂ ವಿಹೆಚ್‌ಎಸ್‌ನ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಜಗದೀಶ್‌ಶೆಟ್ಟಿ ಭೂಮಿ ಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು, ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಕೋರಿಕೆಯ ಮೇರೆಗೆ ಸುಬ್ರಮಣಿಯನ್ ಸ್ವಾಮಿ ಅವರು ಸಂಸತ್ ಸದಸ್ಯರ ಸ್ಥಳೀಯ ಪ್ರದೇಶ ಅಭಿವೃದ್ಧಿ ಯೋಜನೆಯ ನಿಧಿಯನ್ನು ಮಂಜೂರು ಮಾಡಿದ್ದಾರೆ. ಕುಗ್ರಾಮಗಳ ಅಭಿವೃದ್ಧಿಗೆ ಸ್ವಾಮಿ ಅವರು ಹೆಚ್ಚು ಆಸಕ್ತಿ ವಹಿಸಿದ್ದು, ಇದೀಗ ಕೊಡಗು ಜಿಲ್ಲೆಗೆ ಬಿಡುಗಡೆಯಾಗಿರುವ ಅನುದಾನ ಸದ್ಬಳಕೆಯಾಗಬೇಕಾಗಿದೆ. 100 ವರ್ಷಗಳ ಕಾಲ ಉಳಿಯಬಹುದಾದ ರಸ್ತೆ ನಿರ್ಮಾಣದ ಗುರಿ ನಮ್ಮದಾಗಿದ್ದು, ಆ ನಿಟ್ಟಿನಲ್ಲಿ ಜಿಲ್ಲಾಡಳಿತ ಕೂಡ ಕಾಮಗಾರಿಯ ಮೇಲೆ ನಿಗಾ ವಹಿಸಬೇಕು ಎಂದು ತಿಳಿಸಿದರು.

ಕೊಡಗು ಜಿಲ್ಲೆಯ ಬೆಟ್ಟ ಗುಡ್ಡ ಪ್ರದೇಶಗಳ ಜನರಿಗೆ ಅನುಕೂಲ ಕಲ್ಪಿಸಲು ಮೂಲ ಸೌಲಭ್ಯಗಳನ್ನು ಅಭಿವೃದ್ಧಿಪಡಿಸುವ ಅಗತ್ಯವಿದೆ. ಡಾ.ಸುಬ್ರಮಣಿಯನ್ ಸ್ವಾಮಿ ಅವರು ನಿರ್ಲಕ್ಷಿಸಲ್ಪಟ್ಟ ಪ್ರದೇಶಕ್ಕೆ ಅನುದಾನ ಬಿಡುಗಡೆ ಮಾಡಿರುವುದು ಸೂಕ್ತ ನಿರ್ಧಾರವಾಗಿದೆ ಎಂದು ಜಗದೀಶ್ ಶೆಟ್ಟಿ ಅಭಿಪ್ರಾಯಪಟ್ಟರು.

ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಮಾಜ ಸೇವಕ ಪೊರಿಮಂಡ ದಿನಮಣಿ, ಪಂಚಾಯಿತಿ ಸದಸ್ಯೆ ಪೊರಿಮಂಡ ತಂಗಮ್ಮ ಲೋಕೇಶ್, ಯಾಲದಾಳು ಬಾಲಕೃಷ್ಣ ಪೂವಯ್ಯ, ವಿಎಚ್‌ಎಸ್ ಕಾರ್ಯಕರ್ತ ವಿಜೇಂದ್ರ ಶೆಟ್ಟಿ, ಬೆಂಗಳೂರಿನ ಹಿರಿಯ ಪತ್ರಕರ್ತ ಚೌಧರಿ, ಡಾ.ಎಜಾಜುದ್ದೀನ್, ಗುತ್ತಿಗೆದಾರರಾದ ಜಯಚಂದ್ರಗೌಡ, ಮಾದಪ್ಪ ಜೂನಿಯರ್ ಇಂಜಿನಿಯರ್ ಪ್ರಮೋದ್, ಸ್ಥಳೀಯ ನಿವಾಸಿಗಳಾದ ಜನಾರ್ಧನ್, ಉಳುವಾರು ಉದಯ, ಯಾಲದಾಳು ಓಂಕಾರ, ಸಿಎನ್‌ಸಿ ಪ್ರಮುಖರಾದ ಚೋಳಪಂಡ ಜ್ಯೋತಿ, ಸ್ವಾತಿ ಕಾಳಪ್ಪ, ಲೆಫ್ಟಿನೆಂಟ್ ಕರ್ನಲ್ ಪಾರ್ವತಿ,ಅರೆಯಡ ಗಿರೀಶ್, ಚಂಬಂಡ ಜನತ್, ಬೇಪಾಡಿಯಂಡ ದಿನು, ಮಣವಟ್ಟೀರ ಚಿಣ್ಣಪ್ಪ, ನಂದಿನೆರವಂಡ ಎ.ಅಪ್ಪಯ್ಯ, ನಂದಿನೆರವಂಡ ಕೆ.ನಂದಾ, ನಂದಿನೆರವಂಡ ಎಂ.ದಿನೇಶ್, ನಂದಿನೆರವಂಡ ಎ.ರವಿ ಬಸಪ್ಪ, ಪುಲ್ಲೇರ ಕಾಳಪ್ಪ, ಪುಲ್ಲೇರ ಹರ್ಷ ಮತ್ತಿತರರು ಉಪಸ್ಥಿತರಿದ್ದರು.

ಅರ್ಚಕ ಬಾಲಕೃಷ್ಣ ಭಟ್ ಪೂಜೆ ನೆರವೇರಿಸಿದರು. ಎರಡನೇ ಹಂತದ ಕಾಮಗಾರಿಗೆ ಸದ್ಯದಲ್ಲೇ ಚಾಲನೆ ನೀಡಲಾಗುವುದು ಎಂದರು.

ಮಹಿಳೆ ಸೇರಿ ನಾಲ್ವರು ದರೋಡೆಕೋರರ ಬಂಧನ

ಮಹಿಳೆ ಬಳಿ ಲೈಂಗಿಕ ಸಂಪರ್ಕಕ್ಕೆ ಬಂದಿದ್ದ ಕೇರಳ ಮೂಲದವರನ್ನು ಅಪಹರಿಸಿ ದರೋಡೆ ಮಾಡಿದ್ದರು

ವಿರಾಜಪೇಟೆ,ಅ.10– ಕೇರಳ ಮೂಲದ ವ್ಯಕ್ತಿಗಳಿಂದ 37 ಸಾವಿರ ರೂ. ನಗದನ್ನು ದರೋಡೆ ಮಾಡಿದ ಪ್ರಕರಣದಲ್ಲಿ ಮಹಿಳೆ ಸೇರಿ ನಾಲ್ವರು ಆರೋಪಿಗಳನ್ನು ವಿರಾಜಪೇಟೆ ನಗರ ಠಾಣಾ ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ವಿರಾಜಪೇಟೆ ನಿವಾಸಿಗಳಾದ ಬಿ.ಅಬ್ದುಲ್ ಜಮೀಲ್(28), ಪಿ.ಎಸ್.ಅನೀಸ್(30), ಪಿ.ಕೆ.ಸಂಜು(25) ಹಾಗೂ ಕೆ.ಎಸ್.ರಮ್ಯ(32) ಬಂಧಿತರಾಗಿದ್ದು, ಇವರಿಂದ ಕೃತ್ಯಕ್ಕೆ ಬಳಸಿದ್ದ 2 ಆಟೋರಿಕ್ಷಾ, 4 ಮೊಬೈಲ್ ಫೋನ್‌ಗಳು, 31 ಸಾವಿರ ರೂ. ನಗದು, 1 ಚಾಕು ಮತ್ತು 1 ಬಿಯರ್ ಬಾಟಲಿಯನ್ನು ವಶಕ್ಕೆ ಪಡೆಯಲಾಗಿದೆ.

ಘಟನೆ ಹಿನ್ನೆಲೆ: ಕೇರಳ ಮೂಲದವರಾದ ಅನ್ವರ್ ಮತ್ತು ಆತನ ಇಬ್ಬರು ಸ್ನೇಹಿತರು ವಿರಾಜಪೇಟೆ ಮಾರ್ಗವಾಗಿ ಅ.7ರಂದು ರಾತ್ರಿ ಕಾರಿನಲ್ಲಿ ಮೈಸೂರು ಕಡೆಗೆ ಹೊರಟಿದ್ದರು. ರಾತ್ರಿ ವಿರಾಜಪೇಟೆಗೆ ಬಂದ ಈ 3 ಮಂದಿ ತಮ್ಮ ಸ್ನೇಹಿತನನ್ನು ಭೇಟಿಯಾಗಲು ಮುಂದಾಗಿದ್ದರು. ಈ ವೇಳೆ 10.45 ಗಂಟೆಗೆ ಮಗ್ಗುಲ ಗ್ರಾಮದ ಡೆಂಟಲ್ ಕಾಲೇಜು ಬಳಿ ಆಟೋ ರಿಕ್ಷಾದಲ್ಲಿ ಬಂದ ಐವರು ಇವರನ್ನು ಕಾರಿನ ಸಮೇತ ಅಪಹರಿಸಿ ಅಯ್ಯಪ್ಪಬೆಟ್ಟದ ಕಡೆ ಕರೆದುಕೊಂಡು ಹೋಗಿ ಅವರ ಬಳಿ ಇದ್ದ 37 ಸಾವಿರ ರೂ. ನಗದನ್ನು ದರೋಡೆ ಮಾಡಿದ್ದರು. ಈ ಕುರಿತು ಅನ್ವರ್ ಎಂಬವರು ವಿರಾಜಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು. ಪ್ರಕರಣಕ್ಕೆ ಸಂಬಂಧಿಸಿದಂತೆ 4 ಮಂದಿ ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ ಸಂದರ್ಭ ದರೋಡೆ ಕೃತ್ಯ ಎಸಗಿರುವುದು ಪತ್ತೆಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಒಳಸಂಚು ಬಯಲು: ಆರೋಪಿಗಳನ್ನು ಹೆಚ್ಚಿನ ತನಿಖೆಗೆ ಒಳಪಡಿಸಿದಾಗ ಕೃತ್ಯದಲ್ಲಿ ಪಾಲ್ಗೊಂಡ ಮಹಿಳಾ ಆರೋಪಿಯ ಒಳ ಸಂಚು ಕೂಡ ಬಯಲಾಗಿದೆ. ಕೇರಳ ಮೂಲದ ದೂರುದಾರರು ಕೆ.ಎಸ್.ರಮ್ಯ ಎಂಬವರೊಂದಿಗೆ ಲೈಂಗಿಕ ಸಂಪರ್ಕ ನಡೆಸಲು ವಿರಾಜಪೇಟೆಗೆ ಬಂದಿರುವುದು ವಿಚಾರಣೆ ವೇಳೆ ಬಯಲಾಗಿದೆ. ಈ ವೇಳೆ ಕೆ.ಎಸ್.ರಮ್ಯ ಇತರ ಆರೋಪಿಗಳ ಜೊತೆ ದರೋಡೆಗೆ ಒಳ ಸಂಚು ರೂಪಿಸಿರುವುದು ಪತ್ತೆಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಬಂಧಿತ ಎಲ್ಲಾ ಆರೋಪಿಗಳನ್ನು ನ್ಯಾಯಾಂಗ ವಶಕ್ಕೆ ಒಪ್ಪಿಸಿರುವ ಪೊಲೀಸರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ವಿರಾಜಪೇಟೆ ಪೊಲೀಸ್ ಉಪಅಧೀಕ್ಷಕ ನಿರಂಜನ್ ರಾಜೇ ಅರಸ್ ಮಾರ್ಗದರ್ಶನದಲ್ಲಿ ವೃತ್ತ ನಿರೀಕ್ಷಕ ಬಿ.ಎಸ್. ಶಿವರುದ್ರ, ಪಿಎಸ್‌ಐ ಸಿ.ವಿ. ಶ್ರೀಧರ, ಮುತ್ತಣ್ಣ ಎಎಸ್‌ಐ ನಾಣಯ್ಯ, ಸಿಬ್ಬಂದಿಗಳಾದ ರವಿ, ಸತೀಶ, ಜೋಶ್, ನಿಶಾಂತ್, ಗೀತಾ, ಗಿರೀಶ್, ಮುಸ್ತಾಫ, ಧರ್ಮ, ಮಲ್ಲಿಕಾರ್ಜುನ, ಮಹಂತೇಶ, ವಿದ್ಯಾಬೆಳವಿ, ರಾಜೇಶ್ ಮತ್ತು ಗಿರೀಶ್ ಕಾರ್ಯಾಚರಣೆ ನಡೆಸಿದ್ದಾರೆ.

ಕೊಳ್ಳೇಗಾಲ ನಗರಸಭೆಗೆ ರೇಖಾ ರಮೇಶ್ ಅಧ್ಯಕ್ಷೆ

ಕೊಳ್ಳೇಗಾಲ, ಅ.10– ಇಲ್ಲಿನ ನಗರಸಭೆ ಅಧ್ಯಕ್ಷೆಯಾಗಿ ರೇಖಾ ರಮೇಶ್ ಆಯ್ಕೆಯಾಗಿದ್ದಾರೆ.

ನಗರಸಭೆ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್‌ನಿಂದ ರೇಖಾ ರಮೇಶ್, ಬಿಜೆಪಿಯಿಂದ ರಮ್ಯಾ ಮಹೇಶ್, ಸಿರಿಶಾ ಸತೀಶ್ ಉಮೇದುವಾರಿಕೆ ಸಲ್ಲಿಸಿದ್ದರು. ಕೊನೆ ಕ್ಷಣದಲ್ಲಿ ರಮ್ಯಾ ಮಹೇಶ್ ತಮ್ಮ ನಾಮಪತ್ರ ಹಿಂಪಡೆದಿದ್ದರು. ಅಂತಿಮವಾಗಿ ಚುನಾವಣಾ ಕಣದಲ್ಲಿ ರೇಖಾ ರಮೇಶ್, ಸಿರಿಶಾ ಸತೀಶ್ ಇದ್ದರು. ನಂತರ ನಡೆದ ಚುನಾವಣೆಯಲ್ಲಿ ರೇಖಾ ರಮೇಶ್ 14 ಮತಗಳನ್ನು ಪಡೆದು ನೂತನ ಅಧ್ಯಕ್ಷೆಯಾಗಿ ಆಯ್ಕೆಯಾದರೇ, ಸಿರಿಶಾ ಸತೀಶ್ 6 ಮತಗಳನ್ನು ಪಡೆದು ಪರಾಭವಗೊಂಡರು. ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದ ಉಪವಿಭಾಗಾಧಿಕಾರಿ ಗೀತಾ ಹುಡೇದ್ ನೂತನ ಅಧ್ಯಕ್ಷರ ಆಯ್ಕೆಯನ್ನು ಘೋಷಿಸಿದರು. ವಿದೇಶ ಪ್ರವಾಸದಲ್ಲಿದ್ದ ಕಾರಣ ಪಕ್ಷೇತರ ಅಭ್ಯರ್ಥಿ ಮನೋಹರ್ ಹಾಗೂ ವಿವಿಧ ಕಾರಣಗಳಿಂದ ಬಿಜೆಪಿಯ ಕವಿತಾ, ಬಿಎಸ್ಪಿಯ ಜಯರಾಜ್ ಚುನಾವಣಾಗೆ ಗೈರಾಗಿದ್ದರು. ಇದೇ ವೇಳೆ ನೂತನ ಅಧ್ಯಕ್ಷೆಯನ್ನು, ಹಲವು ಗಣ್ಯರು ಹೂವಿನ ಹಾರ, ಮೈಸೂರು ಪೇಟ ತೊಡಿಸಿ ಅಭಿನಂದಿಸಿದರು.



ಈ ವೇಳೆ ಆಯುಕ್ತ ನಂಜುಂಡಸ್ವಾಮಿ, ಹಿರಿಯ ಸದಸ್ಯರಾದ ಶಾಂತರಾಜು, ಎ.ಪಿ.ಶಂಕರ್, ಶಾಂತು, ಅಕ್ಮಲ್ ಪಾಷ ಇನ್ನಿತರರಿದ್ದರು. ನೂತನ ಅಧ್ಯಕ್ಷೆ ರೇಖಾ ರಮೇಶ್ ಮಾತನಾಡಿ, ಈ ಹಿಂದೆ ನನ್ನ ಪತಿ ರಮೇಶ್ ನಗರಸಭೆ ಅಧ್ಯಕ್ಷರಾಗಿದ್ದರು. ಈಗ ನನಗೆ ಅಧ್ಯಕ್ಷೆಯಾಗುವ ಅವಕಾಶ ದೊರೆತಿದೆ. ಈ ಅವಕಾಶ ನೀಡಿದ ಪಕ್ಷದ ವರಿಷ್ಠರು, ಮುಖಂಡರನ್ನು ಅಭಿನಂದಿಸುವೆ. ಸ್ಥಳೀಯ ಶಾಸಕರು, ಎಲ್ಲಾ ಸದಸ್ಯರು, ಅಧಿಕಾರಿಗಳನ್ನು ವಿಶ್ವಾಸಕ್ಕೆ ಪಡೆದು ಪಟ್ಟಣದ ಅಭಿವೃದ್ಧಿಗೆ ಮುಂದಾಗುವೆ ಎಂದರು.

ಕಣ್ಣೀರಿಟ್ಟ ಸದಸ್ಯೆ: ಇದೇ ವೇಳೆ ಕಾಂಗ್ರೆಸ್ ಸದಸ್ಯೆ ಸುಮಾ ಸುಬ್ಬಣ್ಣ, ನನಗೆ ಸ್ಥಾನ ನೀಡುವುದಾಗಿ ಹೇಳಿ ವಂಚಿಸಲಾಗಿದೆ. ಸಾಮಾನ್ಯ ವರ್ಗಕ್ಕೆ ಮೀಸಲಾದ ಅಧ್ಯಕ್ಷ ಸ್ಥಾನವನ್ನು ಎಸ್‌ಸಿ ಮೀಸಲಾತಿ ಅಡಿ ಆಯ್ಕೆಯಾದವರಿಗೆ ನೀಡಲಾಗಿದೆ ಎಂದು ಮಾಜಿ ಶಾಸಕ ಜಯಣ್ಣ ವಿರುದ್ಧ ಅಸಮಾಧಾನ ಹೊರಹಾಕಿದರು. ಜಿಲ್ಲಾಧ್ಯಕ್ಷರು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು ನನಗೆ ಮೋಸ ಮಾಡಿದ್ದಾರೆ ಎಂದು ಆರೋಪಿಸಿ ಕಣ್ಣೀರಿಡುತ್ತಾ ನಗರಸಭೆಯಿಂದ ನಿರ್ಗಮಿಸಿದರು.

ಕೊಳ್ಳೇಗಾಲ ನಗರಸಭೆ ಉಪ ಚುನಾವಣೆಗೆ ಡಿಸಿ ಅಧಿಸೂಚನೆ

ಚಾಮರಾಜನಗರ, ಅ.10– ಜಿಲ್ಲೆಯ ಕೊಳ್ಳೇಗಾಲ ನಗರಸಭೆಯಲ್ಲಿ ತೆರವಾಗಿರುವ 7 ಸದಸ್ಯ ಸ್ಥಾನಗಳಿಗೆ ಉಪ ಚುನಾವಣೆ ನಡೆಸಲು ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಸೋಮವಾರ ಅಧಿಸೂಚನೆ ಹೊರಡಿಸಿದ್ದಾರೆ.

ಕೊಳ್ಳೇಗಾಲ ನಗರಸಭೆಯ 2, 6, 7, 13, 21, 25 ಹಾಗೂ 26ನೇ ವಾರ್ಡ್‌ಗಳಿಗೆ ಉಪಚುನಾವಣೆ ಸಂಬಂಧ ಅಧಿಸೂಚನೆ ಹೊರಡಿಸಲಾಗಿದೆ. ಇದರೊಂದಿಗೆ ನಾಮಪತ್ರ ಸಲ್ಲಿಕೆ ಅವಧಿ ಆರಂಭವಾಗಿದ್ದು, ನಾಮಪತ್ರವನ್ನು ಕೊಳ್ಳೇಗಾಲ ತಾಲೂಕು ಕಚೇರಿಯಲ್ಲಿ ಸ್ವೀಕರಿಸಲಾಗುವುದು. ನಾಮಪತ್ರ ಸಲ್ಲಿಸಲು ಅ.17 ಕಡೆ ದಿನ. ಅ.18ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದೆ. ಉಮೇದುವಾರಿಕೆ ಹಿಂಪಡೆಯಲು ಅ.20 ಕಡೆ ದಿನ. ಮತದಾನ ಅವಶ್ಯವಿದ್ದರೆ ಅ.28ರಂದು ಬೆಳಗ್ಗೆ 7 ರಿಂದ ಸಂಜೆ 5 ರವರೆಗೆ ನಡೆಸಲಾಗುತ್ತದೆ. ಮರು ಮತದಾನ ಅವಶ್ಯ ಇದ್ದಲ್ಲಿ ಅ.30 ರಂದು ನಡೆಸಲಾಗುತ್ತದೆ. ಮತ ಎಣಿಕೆ ಕಾರ್ಯ ತಾಲೂಕಿನ ಕೇಂದ್ರ ಸ್ಥಳದಲ್ಲಿ ಅ.31 ರಂದು ಬೆಳಗ್ಗೆ 8 ಗಂಟೆಗೆ ಆರಂಭವಾಗಲಿದೆ. ಅ.31ರಂದು ಚುನಾವಣಾ ಪ್ರಕ್ರಿಯೆ ಮುಕ್ತಾಯವಾಗಲಿದೆ ಎಂದು ಡಿಸಿ ತಿಳಿಸಿದ್ದಾರೆ.



ಮೀಸಲು ನಿಗದಿ

ಕೊಳ್ಳೇಗಾಲ ನಗರಸಭೆ ವಾರ್ಡ್ ಸಂಖ್ಯೆ 2 ಹಾಗೂ 6ಕ್ಕೆ ಪರಿಶಿಷ್ಟ ಜಾತಿ ಮಹಿಳೆ, ವಾರ್ಡ್ ಸಂಖ್ಯೆ 7ಕ್ಕೆ ಹಿಂದುಳಿದ ವರ್ಗ (ಎ), ವಾರ್ಡ್ ಸಂಖ್ಯೆ 13ಕ್ಕೆ ಸಾಮಾನ್ಯ ಮಹಿಳೆ, ವಾರ್ಡ್ ಸಂಖ್ಯೆ 21 ಮತ್ತು 25ಕ್ಕೆ ಪರಿಶಿಷ್ಟ ಜಾತಿ, ವಾರ್ಡ್ ಸಂಖ್ಯೆ 26ಕ್ಕೆ ಸಾಮಾನ್ಯ ಮಹಿಳೆಗೆ ಮೀಸಲಾತಿ ನಿಗದಿಯಾಗಿದೆ.

ಶುಲ್ಕ ಮರುಪಾವತಿಗೆ ಅರ್ಜಿ ಆಹ್ವಾನ

ಚಾಮರಾಜನಗರ, ಅ.10– ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಸರ್ಕಾರದಿಂದ ಮಾನ್ಯತೆ ಪಡೆದ ಅಧಿಕೃತ ರಾಷ್ಟ್ರೀಯ ಕ್ರೀಡಾ ಸಂಸ್ಥೆಗಳು ಆಯೋಜಿಸುವ ರಾಷ್ಟ್ರ ಮಟ್ಟದ ಕ್ರೀಡಾಕೂಟಗಳಲ್ಲಿ ಪದಕ ಪಡೆದ ಮತ್ತು ಅಂತರಾಷ್ಟ್ರೀಯ ಮಟ್ಟದ ಕ್ರೀಡಾಕೂಟಗಳಿಗೆ ಭಾರತ ಸರ್ಕಾರದಿಂದ ನಿಯೋಜಿಸಲ್ಪಟ್ಟ ತಂಡದಲ್ಲಿ ಭಾಗವಹಿಸಿ ಉತ್ತಮ ಸಾಧನೆ ಮಾಡಿದ ರಾಜ್ಯದ ಕ್ರೀಡಾಪಟುಗಳ 2022–23ನೇ ಸಾಲಿನ ಶೈಕ್ಷಣಿಕ ಶುಲ್ಕ ಮರುಪಾವತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಜಿಲ್ಲೆಯ ಅರ್ಹ ಕ್ರೀಡಾಪಟುಗಳು ನಿಗದಿತ ಅರ್ಜಿಗಳನ್ನು ನಗರದ ಜಿಲ್ಲಾಡಳಿತ ಭವನದಲ್ಲಿರುವ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರ ಕಚೇರಿಯಿಂದ ಪಡೆದು ಅ.29ರೊಳಗೆ ಸಲ್ಲಿಸಬೇಕು. ಮಾಹಿತಿಗೆ ದೂ:08226–224932, 9844160841 ಸಂಪರ್ಕಿಸಿ.

ಸರ್ಕಾರಗಳಿಂದ ಸರ್ವರಿಗೂ ಉತ್ತಮ ಆರೋಗ್ಯ ಸೇವೆ

ತುರ್ತು ವಾಹನ ಸೇವೆಗೆ ಶಾಸಕ ನಿರಂಜನ್ ಕುಮಾರ್ ಚಾಲನೆ



ಗುಂಡ್ಲುಪೇಟೆ, ಅ.10– ಸರ್ವರಿಗೂ ಉತ್ತಮ ಆರೋಗ್ಯ ಸೇವೆ ನೀಡಲು ಕೇಂದ್ರ ಹಾಗೂ ರಾಜ್ಯ ಬಿಜೆಪಿ ಸರ್ಕಾರಗಳು ಅವಿರತವಾಗಿ ಶ್ರಮಿಸುತ್ತಿವೆ ಎಂದು ಶಾಸಕ ಸಿ.ಎಸ್.ನಿರಂಜನಕುಮಾರ್ ತಿಳಿಸಿದರು.

ತಾಲೂಕಿನ ಕಬ್ಬಹಳ್ಳಿ ಗ್ರಾಮದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ತುರ್ತು ವಾಹನ ಸೇವೆಗೆ (ಆಂಬುಲೆನ್ಸ್ 108) ಹಸಿರು ನಿಶಾನೆ ತೋರಿ, ತಾವೇ ವಾಹನ ಚಾಲನೆ ಮಾಡಿ ಅವರು ಮಾತನಾಡಿದರು.

ಕ್ಷೇತ್ರದ ಜನತೆಗೆ ಮೂಲ ಸೌಕರ್ಯ ಸೇರಿದಂತೆ ಶಿಕ್ಷಣ, ಆರೋಗ್ಯ ಮತ್ತಿತರೆ ಸೇವೆಗಳನ್ನು ಕಲ್ಪಿಸಲು ಶ್ರಮಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ತಾಲೂಕಿನ ಹಲವು ಆರೋಗ್ಯ ಕೇಂದ್ರಗಳಿಗೆ ತುರ್ತು ವಾಹನ ಮತ್ತು ಅಗತ್ಯ ಸಿಬ್ಬಂದಿ ನೇಮಿಸಲು ಕ್ರಮ ಕೈಗೊಳ್ಳಲಾಗಿದೆ ಎಂದರು.

ಈ ವೇಳೆ ಮುಖಂಡರಾದ ಸಿ.ಮಹದೇವಪ್ರಸಾದ್, ಕೆ.ಆರ್.ಲೋಕೇಶ್ ಸೇರಿದಂತೆ ವಿವಿಧ ಘಟಕಗಳ ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ಹಾಗೂ ಆರೋಗ್ಯ ಇಲಾಖೆ ಸಿಬ್ಬಂದಿಗಳು ಹಾಜರಿದ್ದರು.

ಇಂದು ಅಹವಾಲು ಸ್ವೀಕಾರ

ಚಾಮರಾಜನಗರ, ಅ.10– ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಅವರು ಅ.11ರಂದು ಬೆಳಗ್ಗೆ 11 ರಿಂದ ಮಧ್ಯಾಹ್ನ 2 ಗಂಟೆವರೆಗೆ ಗುಂಡ್ಲುಪೇಟೆ ತಾಲೂಕು ಕಚೇರಿಗೆ ಭೇಟಿ ನೀಡಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸುವರು ಹಾಗೂ ತಾಲೂಕು ಕಚೇರಿ ಪರಿಶೀಲನೆ ನಡೆಸುವರು ಎಂದು ಜಿಲ್ಲಾಧಿಕಾರಿ ಕಚೇರಿ ಪ್ರಕಟಣೆ ತಿಳಿಸಿದೆ.

ಬೌದ್ಧ ಧಮ್ಮದ ಪಂಚಶೀಲ ತತ್ವಗಳಿಂದ ನೆಮ್ಮದಿ ಜೀವನ

ಭಾರತೀಯ ಬೌದ್ಧ ಮಹಾಸಭಾದ ಜಿಲ್ಲಾಧ್ಯಕ್ಷ ಬಸವರಾಜು

ಚಾಮರಾಜನಗರ,ಅ.10– ಬೌದ್ಧ ಧಮ್ಮ ಸ್ವೀಕರಿಸಿ ಪಂಚಶೀಲ ತತ್ವಗಳನ್ನು ಅಳವಡಿಸಿಕೊಂಡರೆ ನೆಮ್ಮದಿ ಜೀವನ ನಡೆಸಬಹುದು ಎಂದು ಭಾರತೀಯ ಬೌದ್ಧ ಮಹಾಸಭಾದ ಜಿಲ್ಲಾಧ್ಯಕ್ಷ ಬಸವರಾಜು ತಿಳಿಸಿದರು.

ನಗರದ ರಾಮಸಮುದ್ರ ಬಡಾವಣೆಯಲ್ಲಿರುವ ನಗರಸಭಾ ಸದಸ್ಯ ಆರ್.ಪಿ.ನಂಜುಂಡಸ್ವಾಮಿ ಅವರ ನಿವಾಸದಲ್ಲಿ ಏರ್ಪಡಿಸಿದ್ದ ಧಮ್ಮ ದೀಪ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.



ಗೌತಮ ಬುದ್ಧರು ಧ್ಯಾನ ಮಾಡಿ ತನ್ನನ್ನು ತಾವು ಅರಿತುಕೊಂಡು ಜಗತ್ತಿಗೆ ಮಾನವೀಯ ಮೌಲ್ಯದ ಜತೆಗೆ ವೈಚಾರಿಕ ಮತ್ತು ವೈಜ್ಞಾನಿಕವಾಗಿ ಆಲೋಚನೆ ಮಾಡುವ ಕ್ರಮ ತಿಳಿಸಿಕೊಟ್ಟರು. ಆದ್ದರಿಂದಲೇ ಅಂಬೇಡ್ಕರ್ ಅವರು ಬೌದ್ಧ ಧಮ್ಮವನ್ನು ಸ್ವೀಕರಿಸಿದರು ಎಂದರು.

ಡಾ.ಬಿ.ಆರ್.ಅಂಬೇಡ್ಕರ್ ಅವರ ದಾರಿ ಯಲ್ಲಿ ನಾವೆಲ್ಲರೂ ಸಾಗೋಣ. ಜಿಲ್ಲಾದ್ಯಂತ ಧಮ್ಮ ಬೆಳೆಸೋಣ ಎಂದ ಅವರು, ಪ್ರತಿದಿನ ಬೆಳಗ್ಗೆ ಮತ್ತು ಸಂಜೆ ಧ್ಯಾನ ಮಾಡಿದರೆ ಏಕಾಗ್ರತೆ ಬೆಳೆಯುತ್ತದೆ. ಹುಣ್ಣಿಮೆ ದಿನಗಳು ಬೌದ್ಧರಿಗೆ ಪವಿತ್ರ. ನಗರದ ಸಾರನಾಥ ಬೌದ್ಧ ವಿಹಾರದಲ್ಲಿ ಹುಣ್ಣಿಮೆ ದಿನ, ಪ್ರತಿ ಭಾನುವಾರ ಧ್ಯಾನ ಮತ್ತು ಪ್ರಾರ್ಥನೆ ಇರುತ್ತದೆ. ಆಸಕ್ತರು ಭಾಗವಹಿಸಬಹುದು ಎಂದರು.

ಪ್ರಗತಿಪರ ಸಂಘಟನೆಗಳ ಒಕ್ಕೂಟದ ಸಂಚಾಲಕ ಸಿ.ಎಂ.ಕೃಷ್ಣಮೂರ್ತಿ ಮಾತನಾಡಿ, ಜಿಲ್ಲೆಯಿಂದ 250 ಮಂದಿ ಅಂಬೇಡ್ಕರ್ ದೀಕ್ಷಾ ಭೂಮಿಗೆ ಯಾತ್ರೆ ಕೈಗೊಂಡಿದ್ದೆವು. ಅಲ್ಲಿ ಬೌದ್ಧ ಭಿಕ್ಕುಗಳು ನೀಡಿದ ಸಂದೇಶವನ್ನು ಪಾಲಿಸಬೇಕು. ಅಂಬೇಡ್ಕರ್ ಅವರು ಶೋಷಿತರ ವಿಮೋಚನೆಗೆ ಎಲ್ಲಾ ಮಾದರಿಯ ಹೋರಾಟಗಳನ್ನು ಮಾಡಿದ್ದಾರೆ. ಕೊನೆಗೆ ಧರ್ಮ ಮಾರ್ಗವನ್ನು ತೋರಿಸಿಕೊಟ್ಟಿದ್ದಾರೆ. ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಡೆಯಬೇಕಿದೆ ಎಂದು ಸಲಹೆ ನೀಡಿದರು.

ನಗರಸಭಾ ಸದಸ್ಯ ಆರ್.ಪಿ. ನಂಜುಂಡಸ್ವಾಮಿ ಮಾತನಾಡಿದರು ಕಾರ್ಯಕ್ರಮದಲ್ಲಿ ಪಂಚಶೀಲ ಫೌಂಡೇಶನ್ ಉಪಾಧ್ಯಕ್ಷ ಬಂಗಾರಸ್ವಾಮಿ, ಪ್ರಧಾನ ಕಾರ್ಯದರ್ಶಿ ಪಿ.ಸೋಮಣ್ಣ, ರಾಮಸಮುದ್ರ ಮಹೇಶ್, ಜಿ.ಎಂ.ಗಾಡ್ಗರ್, ಎಂ.ಸಿದ್ದರಾಜು, ಡಿಎಸ್‌ಎಸ್ ಸಿ.ಎಂ.ಶಿವಣ್ಣ, ಆನಂದ್ ವೀರಶೈವ, ಮಂಜುನಾಯಕ, ಸಿದ್ದರಾಜುಗೌಡ, ದೀಕ್ಷಾ ಭೂಮಿ ಯಾತ್ರಿಗಳು ಇದ್ದರು.

ಪೆಟ್ಟಿ ಅಂಗಡಿ ಬಾಗಿಲು ಮುರಿದು 40 ಸಾವಿರ ರೂ. ಕಳವು

ಚಾಮರಾಜನಗರ, ಅ.10– ಪೆಟ್ಟಿ ಅಂಗಡಿ ಬಾಗಿಲು ಮುರಿದು 40 ಸಾವಿರ ರೂ. ದೋಚಿರುವ ಘಟನೆ ತಾಲೂಕಿನ ವಡ್ಡಗಲಪುರದಲ್ಲಿ ಗ್ರಾಮದಲ್ಲಿ ಭಾನುವಾರ ರಾತ್ರಿ ನಡೆದಿದೆ.

ಗ್ರಾಮದ ನಿವಾಸಿ ದೊಡ್ಡಪ್ಪ ಎಂಬುವರ ಪೆಟ್ಟಿ ಅಂಗಡಿಯಲ್ಲಿ ಕಳ್ಳತನ ನಡೆದಿರುವುದು. ರಾತ್ರಿ ವೇಳೆ ಪೆಟ್ಟಿ ಅಂಗಡಿಯಲ್ಲೇ ಮಲಗುತ್ತಿದ್ದ ದೊಡ್ಡಪ್ಪನವರು ಭಾನುವಾರ ರಾತ್ರಿ ಅಂಗಡಿಯಲ್ಲಿ ಮಲಗಿರಲಿಲ್ಲ. ಇದನ್ನರಿತ ದುಷ್ಕರ್ಮಿಗಳು ಅಂಗಡಿ ಬಾಗಿಲು ಮುರಿದು 40 ಸಾವಿರ ರೂ. ದೋಚಿ ಪರಾರಿಯಾಗಿದ್ದಾರೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಡಿವೈಎಸ್ಪಿ ಪ್ರಿಯದರ್ಶಿನಿ ಸಾಣೆಕೊಪ್ಪ, ಸಿಪಿಐ ಚಿಕ್ಕರಾಜಶೆಟ್ಟಿ, ಎಸ್‌ಐ ರಾಜೇಂದ್ರ ಪರಿಶೀಲನೆ ನಡೆಸಿದರು. ಈ ಸಂಬಂಧ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಕೊತ್ತಲವಾಡಿ ಗ್ರಾಪಂಗೆ ಸತ್ಯಾನಂದಮೂರ್ತಿ ಉಪಾಧ್ಯಕ್ಷ

ಚಾಮರಾಜನಗರ, ಅ.10– ತಾಲೂಕಿನ ಕೊತ್ತಲವಾಡಿ ಗ್ರಾಮ ಪಂಚಾಯಿತಿ ನೂತನ ಉಪಾಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಕೆ.ಎಸ್.ಸತ್ಯಾನಂದಮೂರ್ತಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಉಪಾಧ್ಯಕ್ಷ ಶಿವಸ್ವಾಮಿ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಸೋಮವಾರ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತ ಸದಸ್ಯ ಸತ್ಯಾನಂದಮೂರ್ತಿ ಹಾಗೂ ಬಿಜೆಪಿ ಬೆಂಬಲಿತ ಸದಸ್ಯ ಮೋಹನ್ ಕುಮಾರ್ ಸ್ಪರ್ಧಿಸಿದ್ದರು. ನಂತರ ನಡೆದ ಚುನಾವಣೆಯಲ್ಲಿ ಸತ್ಯಾನಂದಮೂರ್ತಿ 12 ಮತ ಪಡೆದು ಉಪಾಧ್ಯಕ್ಷರಾಗಿ ಆಯ್ಕೆಯಾದರೇ, ಮೋಹನ್ ಕುಮಾರ್ 7 ಮತ ಪಡೆದು ಪರಾಭವಗೊಂಡರು. ಚುನಾವಣೆಯಲ್ಲಿ ಗ್ರಾಪಂನ ಎಲ್ಲಾ 19 ಸದಸ್ಯರು ಭಾಗವಹಿಸಿದ್ದರು.

ಚುನಾವಣಾಧಿಕಾರಿಗಳೂ ಆದ ಪಂಚಾಯತ್ ರಾಜ್ ಇಲಾಖೆಯ ಮಂಜುನಾಥ್ ನೂತನ ಉಪಾಧ್ಯಕ್ಷ ಸತ್ಯಾನಂದಮೂರ್ತಿ ಅವರಿಗೆ ಪ್ರಮಾಣ ಪತ್ರ ವಿತರಿಸಿದರು. ನೂತನ ಉಪಾಧ್ಯಕ್ಷರನ್ನು ಜಿಲ್ಲಾ ಕಾಂಗ್ರೆಸ್‌ನ ಖಜಾಂಚಿ ಸೋಮಲಿಂಗಪ್ಪ ಅಭಿನಂದಿಸಿದರು. ನಂತರ ಮಾತನಾಡಿದ ಸೋಮಲಿಂಗಪ್ಪ, ಗ್ರಾಪಂನಿಂದ ದೊರೆಯುವ ಸವಲತ್ತುಗಳನ್ನು ಅರ್ಹರಿಗೆ ತಲುಪಿಸಿ ಪ್ರಾಮಾಣಿಕತೆಯಿಂದ ಸೇವೆ ಸಲ್ಲಿಸುವಂತೆ ಕರೆ ನೀಡಿದರು. ಮುಖಂಡರಾದ ಬಾಲಚಂದ್ರಮೂರ್ತಿ, ಬಸವರಾಜು, ಗ್ರಾಪಂ ಸದಸ್ಯರು, ನೌಕರರು ಹಾಜರಿದ್ದರು.



ಅರ್ಜಿ ಆಹ್ವಾನ

ಚಾಮರಾಜನಗರ, ಅ.10– ಸಮನ್ವಯ ಶಿಕ್ಷಣ ಕಾರ್ಯಕ್ರಮದಡಿ ಫಿಜಿಯೋಥೆರಪಿ ಸಂಬಂಧ ಒಬ್ಬರು ಥೆರಪಿಸ್ಟ್ ಹಾಗೂ ಒಬ್ಬರು ಆಯಾರನ್ನು ನೇಮಕ ಮಾಡಿಕೊಳ್ಳಲು ಅರ್ಹ ವಿದ್ಯಾರ್ಹತೆಯುಳ್ಳ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಯನ್ನು ಅ.14ರೊಳಗೆ ನಗರದ ಕ್ಷೇತ್ರ ಶಿಕ್ಷಣಾಧಿಕಾರಿ ಮತ್ತು ಕ್ಷೇತ್ರ ಸಂಪನ್ಮೂಲ ಕೇಂದ್ರ ಚಾಮರಾಜನಗರ ಇಲ್ಲಿಗೆ ಅಂಚೆ ಅಥವಾ ಖುದ್ದಾಗಿ ಸಲ್ಲಿಸಬಹುದು.

ಒಂದನೇ ಪುಟದಿಂದ

ಮೈಸೂರು ವಿವಿ ಮೈಸೂರು ಜಿಲ್ಲೆಗೆ ಸೀಮಿತ

ಆಯಾ ಜಿಲ್ಲೆಗಳ ವಿಶ್ವವಿದ್ಯಾನಿಲಯಕ್ಕೆ ಸಂಯೋಜನೆಗೊಂಡು ಹೊಸ ನೀತಿ-ನಿಯಮಾನುಸಾರ ಕಾರ್ಯನಿರ್ವಹಿಸಲಿವೆ. ಪ್ರಸ್ತುತ ಮೈಸೂರು, ಮಂಡ್ಯ, ಹಾಸನ, ಚಾಮರಾಜನಗರ ಜಿಲ್ಲಾ ವ್ಯಾಪ್ತಿ ಹೊಂದಿರುವ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಬಿಎಡ್ ಸೇರಿ 234 ಕಾಲೇಜುಗಳು ಸಂಯೋಜನೆಗೊಳಪಟ್ಟಿದ್ದು,

1.15 ಲಕ್ಷ ವಿದ್ಯಾರ್ಥಿಗಳು ವಿವಿಧ ಪದವಿ ಹಾಗೂ ಸ್ನಾತಕೋತ್ತರ ಪದವಿ ಕೋರ್ಸ್‌ಗಳ ವ್ಯಾಸಂಗ ಮಾಡುತ್ತಿದ್ದಾರೆ. ಸಾಕಷ್ಟು ಸಂಖ್ಯೆಯ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು, ಸಹಾಯಕ ಪ್ರಾಧ್ಯಾಪಕರು, ಉಪನ್ಯಾಸಕರು, ಅರೆಕಾಲಿಕ ಉಪನ್ಯಾಸಕರು, ಅತಿಥಿ ಉಪನ್ಯಾಸಕರು, ಬೋಧಕೇತರ ಸಿಬ್ಬಂದಿ ಹಾಗೂ ತಾತ್ಕಾಲಿಕ ನೌಕರರನ್ನು ಹೊಂದಿರುವ ಮೈಸೂರು ವಿಶ್ವವಿದ್ಯಾನಿಲಯವು ಇನ್ನು ಮುಂದೆ ಕೇವಲ ಮೈಸೂರು ಜಿಲ್ಲೆಗೆ ಸೀಮಿತವಾಗಲಿದೆ.

ಮೈಸೂರು ವಿಶ್ವವಿದ್ಯಾನಿಲಯಕ್ಕೆ ಇನ್ನು ಮುಂದೆ 1 ಸ್ನಾತಕೋತ್ತರ ಕೇಂದ್ರ, 15 ಬಿಎಡ್ ಹಾಗೂ 93 ಪ್ರಥಮ ದರ್ಜೆ ಕಾಲೇಜುಗಳು ಮಾತ್ರ ಉಳಿಯುತ್ತವೆ. ಚಾಮರಾಜನಗರ ಜಿಲ್ಲೆಗೆ 17 ಪ್ರಥಮ ದರ್ಜೆ ಕಾಲೇಜು, 2 ಬಿಎಡ್ ಹಾಗೂ 1 ಸ್ನಾತಕೋತ್ತರ ಸೇರಿ ಒಟ್ಟು 20 ಕಾಲೇಜುಗಳು ಸೇರಿರುತ್ತವೆ.

ಅದೇ ರೀತಿ ಮಂಡ್ಯ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ 36 ಪ್ರಥಮ ದರ್ಜೆ ಕಾಲೇಜು, 12 ಬಿಎಡ್ ಹಾಗೂ 1 ಸ್ನಾತಕೋತ್ತರ ಕೇಂದ್ರ, ಹಾಸನ ವ್ಯಾಪ್ತಿಗೆ 1 ಸ್ನಾತಕೋತ್ತರ ಕೇಂದ್ರ, 8 ಬಿಎಡ್ ಹಾಗೂ 47 ಪ್ರಥಮ ದರ್ಜೆ ಕಾಲೇಜುಗಳು ಭವಿಷ್ಯದಲ್ಲಿ ಬರಲಿವೆ. ಪ್ರತೀ ಜಿಲ್ಲೆಯಲ್ಲಿ ಸ್ಥಾಪಿತವಾಗುವ ವಿಶ್ವವಿದ್ಯಾನಿಲಯಗಳಿಗೆ ಪ್ರತ್ಯೇಕ ಕುಲಪತಿ, ಕುಲಸಚಿವ, ಪರೀಕ್ಷಾಂಗ ಕುಲಸಚಿವ, ಹಣಕಾಸು ಅಧಿಕಾರಿ, ಯೋಜನಾ ನಿರ್ದೇಶಕರು, ಸಿಂಡಿಕೇಟ್ ಮತ್ತು ಅಕಾಡೆಮಿಕ್ ಕೌನ್ಸಿಲ್ ಸಮಿತಿ ಸದಸ್ಯರನ್ನು ನಿಯೋಜಿಸಬೇಕಾಗುತ್ತದೆ. ಚಾಮರಾಜನಗರ, ಹಾಸನ, ಕೊಡಗು, ಹಾವೇರಿ, ಕೊಪ್ಪಳ, ಬಾಗಲಕೋಟೆ, ಬೀದರ್, ಮಂಡ್ಯ ಸೇರಿದಂತೆ ರಾಜ್ಯಾದ್ಯಂತ ಎಲ್ಲಾ ಜಿಲ್ಲೆಗಳಲ್ಲೂ ವಿವಿಗಳನ್ನು ಸ್ಥಾಪಿಸಿ, ಎಲ್ಲರಿಗೂ ಉನ್ನತ ಶಿಕ್ಷಣ ಸಿಗುವಂತೆ ಮಾಡಲಾಗುವುದೆಂದು ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ಇತ್ತೀಚೆಗೆ ಘೋಷಿಸಿದ್ದರು. ಈ ಉದ್ದೇಶಕ್ಕೆ 14 ಕೋಟಿ ರೂ. ಅನುದಾನ ನಿಗದಿಗೊಳಿಸಿದ್ದು, ನಿಯಮಿತ ಸ್ಥಳಾವಕಾಶ, ಮಿತವಾದ ಸಿಬ್ಬಂದಿ ಹಾಗೂ ಕಡಿಮೆ ಖರ್ಚಿನಲ್ಲಿ ವಿಶ್ವವಿದ್ಯಾನಿಲಯಗಳನ್ನು ನಿರ್ವಹಣೆ ಮಾಡಬೇಕು. ಒಮ್ಮೆ ವಿಶ್ವವಿದ್ಯಾನಿಲಯಗಳು ಅಸ್ತಿತ್ವಕ್ಕೆ ಬಂದಲ್ಲಿ ಆಯಾ ಜಿಲ್ಲೆಗಳ ಕಾಲೇಜುಗಳು ಹೊಸ ವಿವಿಗಳಿಗೆ ಸಂಯೋಜನೆ ಗೊಳ್ಳಬೇಕಾಗುತ್ತದೆ ಎಂದು ಸಚಿವರು ಈಗಾಗಲೇ ಪ್ರಕಟಿಸಿದ್ದಾರೆ. 2020ರ ರಾಷ್ಟ್ರೀಯ ಶಿಕ್ಷಣ ನೀತಿ (NEP-2020)ಯನ್ವಯ ಸರ್ವರಿಗೂ ಸುಲಭ ರೀತಿ ಉನ್ನತ ಶಿಕ್ಷಣ ಲಭ್ಯವಾಗಬೇಕೆಂಬ ಉದ್ದೇಶದಿಂದ ಪ್ರತೀ ಜಿಲ್ಲೆಯಲ್ಲಿ ಒಂದೊಂದು ವಿಶ್ವವಿದ್ಯಾನಿಲಯ ತೆರೆಯಲಾಗುತ್ತಿದೆ ಎಂದು ತಿಳಿಸಿದರು.

ಸಂಶೋಧನೆ, ಗುಣಮಟ್ಟದ ಶಿಕ್ಷಣಕ್ಕೆ ಒತ್ತು ನೀಡಬಹುದು

ಮೈಸೂರು ವಿಶ್ವವಿದ್ಯಾನಿಲಯವನ್ನು ವಿಭಜಿಸಿ ನೆರೆ ಜಿಲ್ಲೆಗಳಲ್ಲಿ ಪ್ರತ್ಯೇಕ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸುತ್ತಿರುವುದರಿಂದ ಉನ್ನತ ಶಿಕ್ಷಣ ಮತ್ತು ಸಂಶೋಧನೆಗೆ ಹೆಚ್ಚು ಒತ್ತು ನೀಡಬಹುದೆಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಜಿ.ಹೇಮಂತ ಕುಮಾರ್ ಅಭಿಪ್ರಾಯಪಟ್ಟಿದ್ದಾರೆ. ಪ್ರತೀ ಜಿಲ್ಲೆಯಲ್ಲೂ ಒಂದೊಂದು ವಿಶ್ವವಿದ್ಯಾನಿಲಯ ಸ್ಥಾಪಿಸಲು ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ನೀಡಿದ್ದು, ಈ ಕುರಿತು ಸದ್ಯದಲ್ಲೇ ಸರ್ಕಾರ ಅಧಿಸೂಚನೆ ಹೊರಡಿಸಲಿದೆ. ನಂತರ ಅತೀ ಶೀಘ್ರ ಹೊಸ ವಿಶ್ವವಿದ್ಯಾನಿಲಯಗಳ ರೂಪುರೇಷೆ ಸಿದ್ಧಗೊಳ್ಳಲಿದೆ. ಇದರಿಂದ ನಮಗೆ ಕಾಲೇಜುಗಳು ಮತ್ತು ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿ ಶಿಕ್ಷಣದ ಗುಣಮಟ್ಟವನ್ನು ಮತ್ತಷ್ಟು ಹೆಚ್ಚಿಸಲು ಸಾಧ್ಯವಾಗಲಿದೆ ಎಂದು ತಿಳಿಸಿದರು.



ಹೇಮಂತ ಕುಮಾರ್

ಪ್ರೊ.ಆರ್.ಶಿವಪ್ಪ: ಮೈಸೂರು ನಗರ ಮತ್ತು ಜಿಲ್ಲೆಯ ಪದವಿ ಮತ್ತು ಸ್ನಾತಕೋತ್ತರ ಕಾಲೇಜುಗಳಿಗೆ ಮಾತ್ರ ಸೀಮಿತವಾಗುವುದರಿಂದ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆಯಲು ಅವಕಾಶ ಸಿಗಲಿದೆ. ಹಾಗೆಯೇ 1.15 ಲಕ್ಷ ವಿದ್ಯಾರ್ಥಿಗಳ ಬದಲಾಗಿ ಕೇವಲ 40,000 ಮಂದಿಗೆ ಪ್ರವೇಶಾವಕಾಶ ವಿರುವ ಕಾರಣ ಮೈಸೂರು ವಿಶ್ವವಿದ್ಯಾನಿಲಯದ ಮೇಲಿನ ಹೊರೆ ಕಡಿಮೆಯಾಗಲಿದೆ ಎಂದು ಕುಲಸಚಿವ ಪ್ರೊ.ಆರ್.ಶಿವಪ್ಪ ಅಭಿಪ್ರಾಯಪಟ್ಟಿದ್ದಾರೆ.



ಪ್ರೊ.ಆರ್.ಶಿವಪ್ಪ

ಪ್ರೊ. ಪಿ. ವೆಂಕಟರಾಮಯ್ಯ: ಹೊಸ ವಿಶ್ವವಿದ್ಯಾನಿಲಯಗಳಿಗೆ ಮೂಲ ಸೌಕರ್ಯ ಕಲ್ಪಿಸುವುದು, ಬೋಧಕ-ಬೋಧಕೇತರ ಸಿಬ್ಬಂದಿ ನೇಮಕ ಮಾಡಲು ಕೋಟಿಗಟ್ಟಲೆ ಅನುದಾನ ಬೇಕಾಗುತ್ತದೆ. ಅಲ್ಲದೆ, ರಾತ್ರೋರಾತ್ರಿ ವಿಶ್ವವಿದ್ಯಾನಿಲಯ ಸ್ಥಾಪಿಸುವುದು ಸಾಧ್ಯವಾಗದ ಮಾತು ಎಂದು ಕುವೆಂಪು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಪಿ.ವೆಂಕಟರಾಮಯ್ಯ ತಿಳಿಸಿದ್ದಾರೆ. ವಿಶ್ವವಿದ್ಯಾನಿಲಯ ಸ್ಥಾಪಿಸುವುದರ ಜೊತೆಗೆ ಅನುಕೂಲಗಳನ್ನೂ ಕಲ್ಪಿಸಬೇಕು. ಇಲ್ಲದಿದ್ದಲ್ಲಿ ಸರ್ಕಾರದ ಉದ್ದೇಶ ಸಫಲವಾಗುವುದಿಲ್ಲ. ಸಂಶೋಧನೆ ಹಾಗೂ ಶಿಕ್ಷಣದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವ ಆತಂಕ ಎದುರಾಗುತ್ತದೆ ಎಂದು ಅವರು ನುಡಿದರು.



ವೆಂಕಟರಾಮಯ್ಯ

ಮುಲಾಯಂ ಸಿಂಗ್ ಯಾದವ್ ಇನ್ನಿಲ್ಲ

ಮತ್ತು ಬ್ಯಾಚುಲರ್ ಆಫ್ ಟೀಚಿಂಗ್ (BT) ಮುಗಿಸಿದ ನಂತರ ಆಗ್ರಾ ವಿಶ್ವವಿದ್ಯಾಲಯದಲ್ಲಿ ತಮ್ಮ ಉನ್ನತ ಶಿಕ್ಷಣವನ್ನು ಪೂರ್ಣಗೊಳಿಸಿದರು, ಅಲ್ಲಿ ಅವರು ರಾಜಕೀಯ ವಿಜ್ಞಾನದಲ್ಲಿ ತಮ್ಮ ಸ್ನಾತಕೋತ್ತರ ಪದವಿಯನ್ನು ಪಡೆದರು.

ರಾಮ್ ಮನೋಹರ್ ಲೋಹಿಯಾ ಮತ್ತು ರಾಜ್ ನಾರಾಯಣ್‌ರಂತಹ ನಾಯಕರಿಂದ ಪ್ರಭಾವಿತರಾಗಿದ್ದ ಮುಲಾಯಂ ಸಿಂಗ್ ಯಾದವ್ ಅವರು 1967ರಲ್ಲಿ ಉತ್ತರ ಪ್ರದೇಶದ ವಿಧಾನಸಭೆಗೆ ಮೊದಲ ಬಾರಿಗೆ ಸದಸ್ಯರಾಗಿ ಆಯ್ಕೆಯಾದರು.

1975 ರಲ್ಲಿ ಇಂದಿರಾ ಗಾಂಧಿಯವರ ತುರ್ತುಪರಿಸ್ಥಿತಿ ಸಮಯದಲ್ಲಿ ಯಾದವ್ ಅವರನ್ನು ಬಂಧಿಸಿ 19 ತಿಂಗಳ ಕಾಲ ಜೈಲಿನಲ್ಲಿ ಇರಿಸಲಾಯಿತು. ಅವರು ಮೊದಲು 1977 ರಲ್ಲಿ ರಾಜ್ಯ ಸಚಿವರಾದರು. ನಂತರ, 1980 ರಲ್ಲಿ ಅವರು ಉತ್ತರ ಪ್ರದೇಶದ ಲೋಕದಳದ (ಜನತಾ ಪಕ್ಷ) ಅಧ್ಯಕ್ಷರಾದರು, ನಂತರ ಜನತಾ ದಳದ (ಜನತಾ ಪಕ್ಷ) ಭಾಗವಾಯಿತು. 1982 ರಲ್ಲಿ ಅವರು ಉತ್ತರ ಪ್ರದೇಶ ವಿಧಾನ ಪರಿಷತ್ತಿನಲ್ಲಿ ವಿರೋಧ ಪಕ್ಷದ ನಾಯಕರಾಗಿ ಆಯ್ಕೆಯಾದರು. 1985 ರವರೆಗೆ ಆ ಹುದ್ದೆಯನ್ನು ಅಲಂಕರಿಸಿದರು. ಲೋಕದಳ ಪಕ್ಷವು ವಿಭಜನೆಯಾದಾಗ ಯಾದವ್ ಕ್ರಾಂತಿಕಾರಿ ಮೋರ್ಚಾ ಪಕ್ಷವನ್ನು ಪ್ರಾರಂಭಿಸಿದರು. ಅವರು 1989-1991 ರವರೆಗೆ, 1993-1995 ಮತ್ತು 2003 ರಿಂದ 2007ರವರೆಗೆ ಮೂರು ಬಾರಿ ಯುಪಿ ಮುಖ್ಯಮಂತ್ರಿಯಾಗಿ ಆಡಳಿತ ನಡೆಸಿದ್ದಾರೆ. ಕೇಂದ್ರದಲ್ಲಿ ಯುನೈಟೆಡ್ ಫ್ರಂಟ್ ಸರ್ಕಾರ ಅವಧಿಯಲ್ಲಿ 1996-1998 ರ ಅವಧಿಯಲ್ಲಿ ರಕ್ಷಣಾ ಸಚಿವರಾಗಿದ್ದರು.

ಭಾರತದ ಮಾಜಿ ರಕ್ಷಣಾ ಸಚಿವರೂ ಆಗಿದ್ದ ಸಮಾಜವಾದಿ ಪಕ್ಷದ ಪೋಷಕ ಮುಲಾಯಂ ಸಿಂಗ್ ಯಾದವ್ ಅವರ ನಿಧನವು ಭಾರತೀಯ ರಾಜಕೀಯಕ್ಕೆ ದೊಡ್ಡ ನಷ್ಟವಾಗಿದೆ. ದೇವರು ಅವರ ಆತ್ಮಕ್ಕೆ ಶಾಂತಿ ನೀಡಲಿ ಮತ್ತು ಅವರ ಕುಟುಂಬ ಸದಸ್ಯರಿಗೆ ಶಕ್ತಿಯನ್ನು ನೀಡಲಿ ಎಂದು ಕಾಂಗ್ರೆಸ್ ತನ್ನ ಅಧಿಕೃತ ಟ್ವಿಟ್ಟರ್ ಖಾತೆಯಲ್ಲಿ ಬರೆದುಕೊಂಡಿದೆ. ಹಲವು ಫೋಟೋಗಳನ್ನು ಹಾಕಿ ಟ್ವೀಟ್ ಮಾಡಿರುವ ಪ್ರಧಾನಿ ಮೋದಿ, ಮುಲಾಯಂ ಸಿಂಗ್ ಯಾದವ್ ಅವರು ಗಮನಾರ್ಹ ವ್ಯಕ್ತಿತ್ವ ಹೊಂದಿದ್ದರು. ಜನರ ಸಮಸ್ಯೆಗಳ ಬಗ್ಗೆ ಸಂವೇದನಾಶೀಲರಾಗಿದ್ದ ಅವರು ವಿನಮ್ರ ಮತ್ತು ಈ ಮಣ್ಣಿನ ನಾಯಕರಾಗಿ ವ್ಯಾಪಕವಾಗಿ ಪ್ರಶಂಸಿಸಲ್ಪಟ್ಟರು. ಅವರು ಶ್ರದ್ಧೆಯಿಂದ ಜನರಿಗೆ ಸೇವೆ ಸಲ್ಲಿಸಿದರು. ಲೋಕನಾಯಕ್ ಜೆಪಿ ಮತ್ತು ಡಾ. ಲೋಹಿಯಾ ಅವರ ಆದರ್ಶಗಳನ್ನು ಜನಪ್ರಿಯಗೊಳಿಸಲು ತಮ್ಮ ಜೀವನವನ್ನು ಮುಡಿಪಾಗಿಟ್ಟರು.

ನಾನು ಗುಜರಾತ್ ಮುಖ್ಯಮಂತ್ರಿಯಾಗಿದ್ದ ವೇಳೆ ಮುಲಾಯಂ ಸಿಂಗ್ ಯಾದವ್ ಜೀ ಅವರೊಂದಿಗೆ ಅನೇಕ ಸಂವಾದಗಳನ್ನು ನಡೆಸಿದ್ದೆ. ನಿಕಟ ಒಡನಾಟ ಮುಂದುವರಿದಿತ್ತು. ಅವರ ಅಭಿಪ್ರಾಯಗಳನ್ನು ಕೇಳಲು ಎದುರು ನೋಡುತ್ತಿದ್ದೆ. ಅವರ ನಿಧನ ನನಗೆ ನೋವು ತಂದಿದೆ. ಅವರ ಕುಟುಂಬಕ್ಕೆ ಮತ್ತು ಲಕ್ಷಾಂತರ ಬೆಂಬಲಿಗರಿಗೆ ಅವರ ಅಗಲುವಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತ ನೀಡಲಿ ಎಂದು ಪ್ರಾರ್ಥಿಸಿಕೊಂಡಿದ್ದಾರೆ. ಹಿರಿಯ ನಾಯಕನ ನಿಧನಕ್ಕೆ ಸಂತಾಪ ವ್ಯಕ್ತಪಡಿಸಿರುವ ಯುಪಿ ಸಿಎಂ ಯೋಗಿ ಆದಿತ್ಯನಾಥ್, ಅವರ ನಿಧನದಿಂದ ದೇಶದಲ್ಲಿ ಸಮಾಜವಾದಿ ಚಳವಳಿಗಳ ಯುಗ ಅಂತ್ಯಗೊಂಡಿದೆ ಎಂದು ಶ್ರದ್ಧಾಂಜಲಿ ಸಲ್ಲಿಸಿದ್ದಾರೆ.

ದೇಶದ ರಕ್ಷಣಾ ಸಚಿವರಾಗಿ ಮತ್ತು ಉತ್ತರ ಪ್ರದೇಶದ ಮುಖ್ಯಮಂತ್ರಿಯಾಗಿ ಯಾದವ್ ಅವರ ಕೊಡುಗೆ ಅವಿಸ್ಮರಣೀಯವಾಗಿ ಉಳಿಯುತ್ತದೆ. ಅದಕ್ಕಿಂತ ಹೆಚ್ಚಾಗಿ ತುಳಿತಕ್ಕೊಳಗಾದ ಮತ್ತು ತುಳಿತಕ್ಕೊಳಗಾದವರಿಗಾಗಿ ಅವರು ನಡೆಸಿದ ಹೋರಾಟ ಸದಾ ಸ್ಮರಣೀಯ ಎಂದು ತಮ್ಮ ಸಂದೇಶದಲ್ಲಿ ಎಐಸಿಸಿ ಹಂಗಾಮಿ ಅಧ್ಯಕ್ಷೆ ಸೋನಿಯಾ ಗಾಂಧಿ ತಿಳಿಸಿದ್ದಾರೆ. ರಾಮ್ ಮನೋಹರ್ ಲೋಹಿಯಾ, ರಾಜ್ ನಾರಾಯಣ್ ಅವರಂಥ ನಾಯಕರ ಮಾರ್ಗದರ್ಶನದಲ್ಲಿ ಮುನ್ನೆಲೆಗೆ ಬಂದ ಮುಲಾಯಂ ಸಿಂಗ್ ಅವರು ತುರ್ತು ಪರಿಸ್ಥಿತಿ ವಿರೋಧಿಸಿ ಸೆರೆವಾಸ ಅನುಭವಿಸಿದ್ದರು. ಸಮಾಜವಾದಿ ಪಕ್ಷವನ್ನು ಸ್ಥಾಪಿಸಿ, ಮೂರು ಬಾರಿ ಉತ್ತರ ಪ್ರದೇಶದ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ್ದ ಮುಲಾಯಂ ಸಿಂಗ್ ಅವರು ಕೇಂದ್ರ ರಕ್ಷಣಾ ಸಚಿವರಾಗಿಯೂ ಸೇವೆ ಸಲ್ಲಿಸಿದ್ದರು. ಅವರ ನಿಧನದಿಂದ ರಾಷ್ಟ್ರವು ಮುತ್ಸದ್ದಿ ರಾಜಕಾರಣಿಯೊಬ್ಬರನ್ನು ಕಳೆದುಕೊಂಡಂತಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ. ಮುಲಾಯಂ ಸಿಂಗ್ ಯಾದವ್ ಸಾವು ಆಘಾತಕಾರಿ. ಅವರು ಉತ್ತರ ಪ್ರದೇಶದಲ್ಲಿ ಕೋಮುವಾದದ ವಿರುದ್ಧ ಪ್ರಬಲ ರಾಜಕೀಯ ಶಕ್ತಿಯಾಗಿದ್ದರು. ಅವರ ಕುಟುಂಬ ಮತ್ತು ಅಭಿಮಾನಿಗಳ ದುಃಖದಲ್ಲಿ ನಾನು ಭಾಗಿಯಾಗಿದ್ದೇನೆ ಎಂದು ವಿಪಕ್ಷ ನಾಯಕ ಸಿದ್ದರಾಮಯ್ಯ ತಿಳಿಸಿದ್ದಾರೆ.



ಎಷ್ಟು ಗಿಡ ನೆಟ್ಟಿದ್ದೀನಂತ ನಾನ್ಯಾರಿಗೆ ಲೆಕ್ಕ ಕೊಡ್ಲಿ... ಲೆಕ್ಕ ಕಟ್ಕೊಂಡು ನಾನೇನ್ ಮಾಡ್ಲಿ...?

ಮಕ್ಕಳ ತೊದಲು ಪ್ರಶ್ನೆಗಳಿಗೆ ಸಾಲುಮರದ ತಿಮ್ಮಕ್ಕನ ಉತ್ತರ

- ತಲೆ ಮೇಲೊಂದು, ಸೊಂಟದಲ್ಲೊಂದು ಮಡಿಕೆ ಹೊತ್ತು ಗಿಡಗಳಿಗೆ ನೀರು ಹಾಕಿ ಅವುಗಳನ್ನು ಪೋಷಿಸಿದೆ
- ಆಯಿಷ್ ಸಂಸ್ಥೆಯಲ್ಲಿ ವಿದ್ಯಾರ್ಥಿಗಳೊಂದಿಗೆ ಸಂವಾದದಲ್ಲಿ ಪಾಲ್ಗೊಂಡಿದ್ದ ಸಾಲುಮರದ ತಿಮ್ಮಕ್ಕ



ಮಕ್ಕಳ ತೊದಲು ಪ್ರಶ್ನೆಗಳಿಗೆ ಉತ್ತರಿಸುತ್ತಾ ಅವರಿಗೆ ಆಶೀರ್ವದಿಸಿದ ಸಾಲುಮರದ ತಿಮ್ಮಕ್ಕ



ಸಂವಾದದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳು, ಮಕ್ಕಳು

ಮೈಸೂರು, ಅ.10(ಆರ್‌ಕೆಬಿ)- ನಿಮಗೆಲ್ಲರಿಗೂ ಗಣೇಶ, ಸರಸ್ವತಿ, ಲಕ್ಷ್ಮಿ, ಈಶ್ವರ, ಪಾರ್ವತಿ ಒಳ್ಳೆಯದು ಮಾಡಲಿ... ನಿಮಗೆ ಎಲ್ಲಾ ಸುಖ, ಸಂತೋಷ, ಸಮೃದ್ಧಿ ನೀಡಲಿ ಎಂದು ವೃಕ್ಷಮಾತೆ ಪದ್ಮಶ್ರೀ ಸಾಲುಮರದ ತಿಮ್ಮಕ್ಕ ದೇವರಲ್ಲಿ ಪ್ರಾರ್ಥಿಸಿದರು.

ಮಕ್ಕಳಿರಲಿ, ದೊಡ್ಡವರಿರಲಿ ಎಲ್ಲರಿಗೂ ಎರಡೂ ಕೈಎತ್ತಿ ಆಶೀರ್ವದಿಸುತ್ತಾ, ಗಿಡ ನೆಡಿ, ಅವುಗಳ ಮರವಾಗಿ ಬೆಳೆಸಿ, ನಿಮಗೆ, ನಿಮ್ಮ ಮಕ್ಕಳೆಲ್ಲರಿಗೂ ಅದರಿಂದ ಒಳ್ಳೆಯದಾಗುತ್ತದೆ. ನೆರಳು ನೀಡುತ್ತದೆ ಎಂಬ ಸ್ವಾರ್ಥರಹಿತ ಮಾತುಗಳು ಅವರ ಬಾಯಿಂದ ಹೊರಬರುತ್ತಿತ್ತು. ನಿಮಗೆಲ್ಲರಿಗೂ ಭಾಗ್ಯ, ಸುಖ, ಶಾಂತಿ ಸಿಗಲಿ ಎಂದು ಹಾರೈಸಿದರು.

ಮೈಸೂರಿನ ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆಯಲ್ಲಿ ಎನ್‌ಎಸ್‌ಎಸ್ ವತಿಯಿಂದ ಸೋಮವಾರ ಆಯೋಜಿಸಲಾಗಿದ್ದ ಪರಿಸರ ಸಂರಕ್ಷಣೆ ಕುರಿತು ವಿದ್ಯಾರ್ಥಿ ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಅವರು, ವಿದ್ಯಾರ್ಥಿಗಳು ಮತ್ತು ಮಕ್ಕಳ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದ ರೀತಿ ಇದು. ಮಕ್ಕಳಿಗೆ ಒಳ್ಳೆಯ ಬಾಳು ಕೊಡು, ಈ ಮಕ್ಕಳನ್ನು ಉದ್ಧಾರ ಮಾಡು ಎಂದು ದೇವರ ಹೆಸರುಗಳನ್ನು ಹೇಳಿ, ಪ್ರಾರ್ಥಿಸಿದರು.

ಇದುವರೆಗೆ ಎಷ್ಟು ಗಿಡ ನೆಟ್ಟಿದ್ದೀರಿ? ಇದು ಪುಟ್ಟ ಮಗುವಿನ ತೊದಲು ಪ್ರಶ್ನೆ. ಇದಕ್ಕೆ ಉತ್ತರಿಸಿದ ತಿಮ್ಮಕ್ಕ, ಲೆಕ್ಕ ಇಟ್ಟುಕೊಂಡು ನಾನು ಯಾರಿಗೆ ಹೇಳಬೇಕು. ನಾನ್ಯಾವ ಲೆಕ್ಕ ಕೊಡಲಿ. ಲೆಕ್ಕ ಕಟ್ಟಿಕೊಂಡು ನನಗೇನು. ಗಿಡಗಳು ಮರವಾಗಿ ಬೆಳೆಯಬೇಕು. ಅದು ಎಲ್ಲರಿಗೂ ಅನುಕೂಲವಾಗಬೇಕು ಎಂದು ಹೇಳುವ ಮೂಲಕ ತಮ್ಮ ವೃಕ್ಷಪ್ರೇಮವನ್ನು ಪ್ರತಿಪಾದಿಸಿದರು.

ನಿಮಗೆ ಯಾವ ಊರು ಇಷ್ಟ? ಎಂಬ ಮತ್ತೊಂದು ಮಗುವಿನ ಪ್ರಶ್ನೆಗೆ ಉತ್ತರಿಸಿದ ತಿಮ್ಮಕ್ಕ, ಒಂದೇ ಊರು ಅಲ್ಲ. ಎಲ್ಲ ಊರೂ ಇಷ್ಟ ಎಂದರು.

ಅಷ್ಟು ಗಿಡಕ್ಕೂ ನೀರು ಹೇಗೆ ಹಾಕಿದ್ರೀ...? ಎಂಬ ಪ್ರಶ್ನೆಗೆ, ಸೊಂಟದ ಮೇಲೊಂದು, ತಲೆಯ ಮೇಲೊಂದು ಮಡಿಕೆ ಇಟ್ಟುಕೊಂಡು ದೂರದ ಕೆರೆಗೆ ಹೋಗಿ ನೀರು ತಂದು ನಾನು ನನ್ನ ಪತಿ, ಗಿಡಗಳಿಗೆ ಹಾಕುತ್ತಿದ್ದ ಬಗ್ಗೆ ವಿವರಿಸಿದರು.

111 ವರ್ಷದ ನಿಮ್ಮ ಆರೋಗ್ಯದ ಗುಟ್ಟೇನು? ಎಂಬ ಸಭಿಕರ ಪ್ರಶ್ನೆಗೆ ಪ್ರತಿಕ್ರಿಯಿಸಲು ಸ್ವಲ್ಪ ತಡವರಿಸಿದ ಅವರು, ನಂತರ ಕಷ್ಟ ಪಟ್ಟೆ, ಕೂಲಿ ಮಾಡಿದೆ. ನನ್ನದು ಸುಖ ಪಟ್ಟ ಜನ್ಮವಲ್ಲ. ಕಷ್ಟಪಟ್ಟರೂ, ನಾನು ಮಕ್ಕಳಿಲ್ಲದ ಬಂಜೆಯಾದೆ ಎಂದು ಹೇಳುವಾಗ ಮುಂದೆ ಅವರಿಂದ ಮಾತುಗಳು ಹೊರಡಲಿಲ್ಲ.

ಆಗ ಪಕ್ಕದಲ್ಲಿದ್ದ ಅವರ ಸುಪುತ್ರ, ಸಾಲುಮರದ ತಿಮ್ಮಕ್ಕ ಇಂಟರ್‌ನ್ಯಾಷನಲ್ ಫೌಂಡೇಷನ್‌ನ ಸಂಚಾಲಕ ಡಾ.ಉಮೇಶ್ ಮಾತು ಮುಂದುವರಿಸಿದರು. ತಿಮ್ಮಕ್ಕನವರಿಗೆ ಏನೂ ಆಸೆ ಇಲ್ಲ. ದುಡ್ಡಿಗೆ ಆಸೆ ಪಡಲಿಲ್ಲ. ಅವರಿಗೆ ಸಕ್ಕರೆ ಕಾಯಿಲೆ, ರಕ್ತದೊತ್ತಡ ಯಾವುದೂ ಇಲ್ಲ. ದಿನಕ್ಕೆ ಎರಡು ಹೊತ್ತು ರಾಗಿ ಮುದ್ದೆ ಊಟ. ಕಾಫಿ, ಟೀ ಕುಡಿಯುವುದಿಲ್ಲ. ನಿಸ್ವಾರ್ಥ ಬದುಕು ಅವರದ್ದು. ಯಾವುದೇ ಫಲಾಪೇಕ್ಷೆ ಇಲ್ಲದಿದ್ದರೆ ಆರೋಗ್ಯ ವೃದ್ಧಿಸುತ್ತದೆ ಎಂಬುದಕ್ಕೆ ತಿಮ್ಮಕ್ಕನವರು ನಿಜವಾದ ನಿದರ್ಶನ ಎಂದು ತಿಳಿಸಿದರು.

ಮಕ್ಕಳಿಲ್ಲದಿದ್ದಾಗ ಅವರಿಗೆ ಗಿಡ ನೆಡುವ ಮನಸ್ಸು ಬಂತು. ಬಿಸಿಲಲ್ಲಿ ಗರ್ಭಿಣಿಯೊಬ್ಬರು ನಡೆದು ಹೋಗುತ್ತಿದ್ದುದನ್ನು ಕಂಡು ಮರುಗಿದ ತಿಮ್ಮಕ್ಕನವರಿಗೆ ಮರ ಇದ್ದರೆ ನೆರಳು ಸಿಗುತ್ತಿತ್ತಲ್ಲ ಎಂಬುದು ಮನಸ್ಸಿಗೆ ಬಂತು. ಅಂದಿನಿಂದಲೇ ಗಿಡಗಳನ್ನು ನೆಡಲು ಆರಂಭಿಸಿದರು. ತಿಮ್ಮಕ್ಕ ಮತ್ತು ಅವರ ಪತಿ ಮರಗಳನ್ನು ಮಕ್ಕಳಂತೆ ಸಾಕಿ, ಸಲಹಿದರು. ಕೂಲಿ ಕೆಲಸ ಮಾಡುತ್ತಾ, ಉಳಿದ ಸಮಯದಲ್ಲಿ ಗಿಡ ನೆಡುವುದು, ನೆಟ್ಟ ಗಿಡಗಳಿಗೆ ಮರೆಯದೇ ನೀರು ಹಾಕುವುದು ಮಾಡುತ್ತಿದ್ದರು. ಅವರಿಗೆ ಟಿವಿ, ಪೇಪರ್, ಸರ್ಕಾರಿ ಸೌಲಭ್ಯಗಳ ಬಗ್ಗೆ ಏನೇನೂ ಗೊತ್ತಿಲ್ಲದ ಅನಕ್ಷರಸ್ಥ ಮಹಿಳೆ. ಅಂಥ ಸಾಧಕಿಗೆ ಇಂದು ಸರ್ಕಾರವೇ ಅವರೊಂದಿಗಿದೆ. ಒಳ್ಳೆಯ ಕೆಲಸ ಮಾಡಿದರೆ ಜಗತ್ತು ನಿಮ್ಮ ಬಳಿ ಇರುತ್ತದೆ ಎಂಬುದಕ್ಕೆ ಇದೇ ಸಾಕ್ಷಿ ಎಂದು ಹೇಳಿದರು.

ಇದಕ್ಕೂ ಮುನ್ನ ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆಯ ನಿರ್ದೇಶಕಿ ಡಾ.ಎಂ.ಪುಷ್ಪಾವತಿ ಅಧ್ಯಕ್ಷ ಭಾಷಣ ಮಾಡಿ, ಇಂಥ ಸಾಧಕರನ್ನು ನಮ್ಮ ಸಂಸ್ಥೆಗೆ ಕರೆಸಿ, ಅವರ ಅನುಭವ, ಸಾಧನೆಗಳನ್ನು ಜನರಿಗೆ ತಿಳಿಸುವ ಪ್ರಯತ್ನ ಇದು. ನಮ್ಮ ವಾಹನ ನಿಲ್ಲಿಸಬೇಕಾದರೆ ನೆರಳಿಗಾಗಿ ಮರಗಳನ್ನು ಹುಡುಕುತ್ತೇವೆ. ಅಂಥ ಲಕ್ಷಾಂತರ ಮರಗಳನ್ನು ಬೆಳೆಸಿ, ಸಮಾಜಕ್ಕೆ ದಾರಿ ತೋರಿಸಿದ್ದಾರೆ. ಅವರಿಗೆ ಪದ್ಮಶ್ರೀ, ನಾಡೋಜ ಪ್ರಶಸ್ತಿ ಎಂದರೇನು ಗೊತ್ತಿಲ್ಲ ಆದರೆ ಆ ಪ್ರಶಸ್ತಿಗಳು ಅವರನ್ನು ಹುಡುಕಿಕೊಂಡು ಬಂದಿವೆ. ಅಂಥವರ ಆಶೀರ್ವಾದಿಂದ ನಾವು ಮುಂದಿನ ಪೀಳಿಗೆಗೆ ಹಸಿರು-ಉಸಿರು ತೆಗೆದುಕೊಂಡು ಹೋಗೋಣ. ನಾವೆಲ್ಲರೂ ಬೀಜದ ಉಂಡೆಗಳನ್ನು ಮಾಡಿ, ಖಾಲಿ ಜಾಗಗಳಲ್ಲಿ ಹರಡಿ, ಎಲ್ಲೆಡೆ ಮರಗಳು ಬೆಳೆದು ಪ್ರಕೃತಿ ಉಳಿಸುವ ಅಳಿಲು ಸೇವೆ ಮಾಡೋಣ ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಸಾಲುಮರದ ತಿಮ್ಮಕ್ಕ ಇಂಟರ್‌ನ್ಯಾಷನಲ್ ಫೌಂಡೇಷನ್‌ನ ಗೌರವ ಟ್ರಸ್ಟಿ ಎಂ. ಯೋಗೇಶ್ವರ್, ಡಾ.ಮಹೇಶ್ ಬಿವಿಎಂ, ಎನ್‌ಎಸ್‌ಎಸ್ ಸಹಾಯಕ ಅಧಿಕಾರಿ ಬಾಲು ಇನ್ನಿತರರು ಉಪಸ್ಥಿತರಿದ್ದರು.

ಕೇರಳದ ಕುಂಬಳೆ ಅನಂತಪುರ ಶ್ರೀ ಅನಂತ ಪದ್ಮನಾಭ ದೇವಾಲಯದ ದೇವಮೊಸಳೆ ಸಾವು

ಮೈಸೂರು,ಅ.10(ಎಂಟಿವೈ)- ಕಾಸರಗೋಡು ಸಮೀಪದ ಕುಂಬಳೆ ಅನಂತಪುರ ಶ್ರೀ ಅನಂತ ಪದ್ಮನಾಭ ದೇವಾಲಯದಲ್ಲಿ ಮಂಗಳಾರತಿ ವೇಳೆ ಕೊಳದಿಂದ ಮೇಲೆ ಬಂದು ದರ್ಶನ ನೀಡುತ್ತಿದ್ದ ಸಸ್ಯಾಹಾರಿ ಮೊಸಳೆ ಕಳೆದ ರಾತ್ರಿ ಮೃತಪಟ್ಟಿದೆ.



ಕಾಸರಗೋಡು ಸಮೀಪದ ಕುಂಬಳೆ ಅನಂತಪುರದ ಅನಂತ ಪದ್ಮನಾಭ ದೇವಾಲಯದ ಸುತ್ತ ಕೊಳವಿದ್ದು, ಆ ಕೊಳದ ಬಲ ಭಾಗದ ಗುಹೆ ಮಾದರಿಯ ಹಳ್ಳದಲ್ಲಿ ಆಶ್ರಯ ಪಡೆದಿದ್ದ ಮೊಸಳೆ, ಪ್ರತಿದಿನ ಬೆಳಗ್ಗೆ ಮತ್ತು ಸಂಜೆ ದೇವಾಲಯದಲ್ಲಿ ಮಂಗಳಾರತಿ ವೇಳೆಗೆ ಮೊಳಗುತ್ತಿದ್ದ ಗಂಟೆಯ ನೀನಾದ ಕೇಳಿದ ತಕ್ಷಣ ಕೊಳದಿಂದ ಮೇಲೆ ಬರುತ್ತಿತ್ತು. ಗರ್ಭಗುಡಿಯ ಮುಂಭಾಗ ತಲೆ ಹಾಕಿ, ಮಲಗಿ ಭಕ್ತರಲ್ಲಿ ಅಚ್ಚರಿ ಮೂಡಿಸಿದ್ದ ಈ ಮೊಸಳೆಯನ್ನು 'ಬಬಿಯಾ' ಎಂದು ಕರೆಯಲಾಗುತ್ತಿತ್ತು. ಸುಮಾರು 90 ವರ್ಷ ವಯಸ್ಸಾಗಿದ್ದ ಈ ಮೊಸಳೆಯನ್ನು ಆ ಭಾಗದ ಜನರು ದೇವರ ಸ್ವರೂಪವೆಂದು ಭಾವಿಸುತ್ತಿದ್ದರು. ಕಳೆದ ರಾತ್ರಿ ವಯೋಸಹಜ ಸಮಸ್ಯೆಯಿಂದ ಮೊಸಳೆ ಮೃತಪಟ್ಟಿದ್ದು, ವಿಧಿವಿಧಾನದಂತೆ ಪೂಜೆ ಸಲ್ಲಿಸಿ ದೇವಾಲಯದ ಮುಂಭಾಗ ಅಂತ್ಯಕ್ರಿಯೆ ನೆರವೇರಿಸಲಾಗಿದೆ.

ಪುನರ್‌ಜನ್ಮದ ನಂಬಿಕೆ: ಅಪಾರ ಸಂಪತ್ತು ದೊರೆತ ಅನಂತ ಪದ್ಮನಾಭ ದೇವಾಲಯ ಹಾಗೂ ಮೊಸಳೆ ಇದ್ದ ಕುಂಬಳೆ ಅನಂತಪುರ ಶ್ರೀ ಅನಂತ ಪದ್ಮನಾಭ ದೇವಾಲಯ ಬೇರೆ ಬೇರೆ. ಕಾಸರಗೋಡಿನಿಂದ 18-20 ಕಿ.ಮೀ. ದೂರದ ಕುಂಬಳೆ ಅನಂತಪುರ ಶ್ರೀ ಅನಂತ ಪದ್ಮನಾಭ ದೇವಾಲಯ ಅನಂತ ಪದ್ಮನಾಭಸ್ವಾಮಿಯ ಮೂಲ ನೆಲೆ ಎನ್ನಲಾಗಿದೆ. ಅಲ್ಲದೆ, ಬ್ರಿಟಿಷ್ ಆಡಳಿತದಲ್ಲಿ ಬ್ರಿಟಿಷ್ ಅಧಿಕಾರಿಯ ಗುಂಡಿಗೆ ಬಲಿಯಾಗಿ ಮರುದಿನ ಪುನರ್ಜನ್ಮವೆತ್ತಿದ್ದ ದೇವರ ಮೊಸಳೆ ಎಂದೇ ದೇಶ ವಿದೇಶಗಳಲ್ಲಿ ಪ್ರಸಿದ್ಧಿ ಪಡೆದಿತ್ತು. ಈ ದೇವಾಲಯಕ್ಕೆ ಮಂಗಳೂರು, ಉಡುಪಿ, ಕಾಸರಗೋಡು, ಕೇರಳದ ಹಲವು ಭಾಗಗಳಿಂದಲೂ ಭಕ್ತರು ಬಂದು ಪೂಜೆ ಸಲ್ಲಿಸುತ್ತಿದ್ದರು. ಮೊಸಳೆ ಇದ್ದ ಕೊಳಕ್ಕೆ ಕಡ್ಲೆಪುರಿ ಎರಚಿ ಕೈ ಮುಗಿಯುತ್ತಿದ್ದರು.

ಇಂದು ಮೃಗಾಲಯ, ಕಾರಂಜಿಕೆರೆಗೆ ಪ್ರವೇಶಾವಕಾಶ

ಮೈಸೂರು,ಅ.10(ಎಂಟಿವೈ)- ಈದ್ ಮಿಲಾದ್ ಹಬ್ಬದ ಹಿನ್ನೆಲೆಯಲ್ಲಿ ಅ.11ರಂದು ಮೃಗಾಲಯ ಹಾಗೂ ಕಾರಂಜಿಕೆರೆಗೆ ಪ್ರವಾಸಿಗರ ಪ್ರವೇಶಕ್ಕೆ ಅವಕಾಶ ಕಲ್ಪಿಸಲಾಗಿದೆ.

ಪ್ರತಿ ಮಂಗಳವಾರ ಮೃಗಾಲಯಕ್ಕೆ ರಜೆ ಇದ್ದು, ನಾಳೆ ಈದ್ ಮಿಲಾದ್ ಹಾಗೂ ದಸರಾ ಹಿನ್ನೆಲೆಯಲ್ಲಿ ಮೈಸೂರಿಗೆ ಆಗಮಿಸುತ್ತಿರುವ ಪ್ರವಾಸಿಗರಿಗೆ ಅನುಕೂಲವಾಗುವಂತೆ ರಜೆ ರದ್ದು ಮಾಡಲಾಗಿದೆ. ಎಂದಿನಂತೆ ಪ್ರವಾಸಿಗರು ಬೆಳಗ್ಗೆ 8.30ರಿಂದ ಸಂಜೆ 5.30 ರವರೆಗೆ ಮೃಗಾಲಯ ಹಾಗೂ ಕಾರಂಜಿ ಕೆರೆ ವೀಕ್ಷಿಸಬಹುದಾಗಿದೆ ಎಂದು ಮೃಗಾಲಯದ ಕಾರ್ಯ ನಿರ್ವಾಹಕ ನಿರ್ದೇಶಕ ಅಜಿತ್ ಎಂ.ಕುಲ ಕರ್ಣಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದೇಶಗಳಲ್ಲಿ ವೈದ್ಯರು, ಇಂಜಿನಿಯರ್ ಸಿಗ್ತಾರೆ

ಆದರೆ ಸಂಗೀತ, ಕಲೆಗಾರ ತೀರಾ ಕಮ್ಮಿ

- ವಯೋಲಿನ್ ವಿದ್ವಾಂಸ ಮೈಸೂರು ಮಂಜುನಾಥ್ ಅಭಿಮತ
- ನೂರಡಿ ಕಟ್ಟಡ ನಿರ್ಮಿಸುವುದು ಸುಲಭ, ಆದರೆ ಕಲಾಪರಂಪರೆ ಕಟ್ಟುವುದು ಕಷ್ಟ
- ಶಿಲ್ಪಕಲಾ ಅಕಾಡೆಮಿ ರಜತ ಮಹೋತ್ಸವದಲ್ಲಿ ಕಲಾ ಪರಂಪರೆ ಸ್ಮರಣೆ

ಮೈಸೂರು,ಅ.10(ಎಂಟಿವೈ)- ವಿಶ್ವಮಟ್ಟದಲ್ಲಿ ಸಂಗೀತ, ಚಿತ್ರಕಲೆ, ಸಾಹಿತ್ಯ, ಶಿಲ್ಪಕಲೆ ಸೇರಿದಂತೆ ಲಲಿತ ಕಲೆಗಳಿಗೆ ವ್ಯಾಪಕ ಮನ್ನಣೆ ದೊರೆಯುತ್ತಿರುವ ಹಿನ್ನೆಲೆಯಲ್ಲಿ ಅವುಗಳನ್ನು ಪ್ರವರ್ಧಮಾನಕ್ಕೆ ತರಲು ಇನ್ನಷ್ಟು ಕಾರ್ಯಕ್ರಮ ರೂಪಿಸಬೇಕಾಗಿದೆ ಎಂದು ಅಂತಾರಾಷ್ಟ್ರೀಯ ವಯೋಲಿನ್ ವಿದ್ವಾಂಸ ಮೈಸೂರು ಎಂ.ಮಂಜುನಾಥ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ವಿಜ್ಞಾನ ಭವನದಲ್ಲಿ ಸೋಮವಾರ ನಡೆದ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ರಜತ ಮಹೋತ್ಸವ ಹಾಗೂ ಶಿಲ್ಪಿಗಳಾದ ದೇವಲಕುಂದ ವಾದಿರಾಜ್ ಮತ್ತು ಬಿ.ಬಸವಣ್ಣ ಅವರ ಜನ್ಮಶತಮಾನೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಿದೇಶಗಳಲ್ಲಿ ವೈದ್ಯರು, ಇಂಜಿನಿಯರ್‌ಗಳು ಸಿಗುತ್ತಾರೆ. ಆದರೆ, ಸಂಗೀತಗಾರರು ಕಮ್ಮಿ. ನಮ್ಮ ದೇಶದ ಸಂಗೀತ ವಿದ್ವಾಂಸರು, ಕಲಾವಿದರು ಹಾಗೂ ಸಾಹಿತಿಗಳನ್ನು ವಿದೇಶಿಯರು ಗೌರವದಿಂದ ಆಹ್ವಾನಿಸಿ, ಕಾರ್ಯಕ್ರಮ ಆಯೋಜಿಸುತ್ತಾರೆ. ಯಾವುದೇ ರಾಷ್ಟ್ರದ ಗೌರವ, ಘನತೆ ಮತ್ತು ಹಿರಿಮೆಯ ಬಗ್ಗೆ ಮಾತನಾಡುವಾಗ ಆ ರಾಷ್ಟ್ರದ ಸಂಸ್ಕೃತಿ, ಸಾಹಿತ್ಯ ಹಾಗೂ ಕಲೆಗೆ ನೀಡಿರುವ ಆದ್ಯತೆಯನ್ನು ಗಮನಿಸುತ್ತೇವೆ. ಯೂರೋಪ್ ರಾಷ್ಟ್ರಗಳು ಕಲೆಗೆ ಎಷ್ಟು ಒತ್ತು ನೀಡುತ್ತಿವೆ ಎನ್ನುವುದನ್ನು ನೋಡಿದ್ದೇವೆ. ಅಮೆರಿಕಾ ಸೇರಿದಂತೆ ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳು ನೂರು ಮಹಡಿ ಎತ್ತರದ ಕಟ್ಟಡಗಳನ್ನು ನಿರ್ಮಿಸಿ, ಹೊಸ, ಹೊಸ ತಂತ್ರಜ್ಞಾನ ಆವಿಷ್ಕರಿಸಿರಬಹುದು. ಆದರೆ, ಭಾರತದಂತೆ ಸಾಂಸ್ಕೃತಿಕ, ಪಾರಂಪರಿಕ ಹಾಗೂ ಸಾಹಿತ್ಯಕವಾಗಿ ಶ್ರೀಮಂತ ಪರಂಪರೆಯನ್ನು ಹೊಂದಲು ಸಾಧ್ಯವಿಲ್ಲ ಎಂದರು.

ನಮ್ಮ ಇತಿಹಾಸ, ಪರಂಪರೆ, ಕಲೆ ಹಾಗೂ ಸಾಹಿತ್ಯದ ಬಗ್ಗೆ ಹೆಮ್ಮೆ ಪಡಬೇಕು ಹಾಗೂ ಮತ್ತಷ್ಟು ವಿಸ್ತರಿಸಬೇಕು. ನಮ್ಮ ಕಲಾ ಪ್ರಕಾರಗಳನ್ನು ಉಳಿಸಿ-ಬೆಳೆಸಬೇಕು. ಆದರೆ ಇತ್ತೀಚಿನ ದಿನಗಳಲ್ಲಿ ಹೆಚ್ಚು ಹಣ ಸಂಪಾದಿಸಬಹುದಾದ ಕ್ಷೇತ್ರಕ್ಕೆ ಸಂಬಂಧಿಸಿದಂತಹ ಶಿಕ್ಷಣವನ್ನು ಮಕ್ಕಳಿಗೆ ಕೊಡಿಸಲು ಪೋಷಕರು ಮುಂದಾಗುತ್ತಿರುವುದನ್ನು ನಾವು ಕಾಣುತ್ತೇವೆ. ಐಟಿ, ಬಿಟಿ ಕಂಪನಿಗಳು, ನೂರಾರು ಮಹಡಿಯುಳ್ಳ ಕಟ್ಟಡಗಳು ನಮ್ಮ ಕಲಾ ಶ್ರೀಮಂತಿಗೆಗೆ ಸಮವಲ್ಲ. ಕಲೆ, ಸಾಹಿತ್ಯ ಕ್ಷೇತ್ರಕ್ಕಿರುವ ಸಾವಿರಾರು ವರ್ಷದ ಭವ್ಯ ಇತಿಹಾಸ ಸರಿಗಟ್ಟಲು ಯಾರಿಂದಲೂ ಸಾಧ್ಯವಿಲ್ಲ. ಆದರೆ, ಯಾರು ಬೇಕಾದರೂ ನೂರು ಮಹಡಿ ಕಟ್ಟಡ ಕಟ್ಟಬಹುದು. ಚಂದ್ರಲೋಕಕ್ಕೆ ಯಾನ ನಡೆಸಬಹುದು. ಆದರೆ ಕಲೆ, ಸಾಹಿತ್ಯದ ಒಂದು ದೊಡ್ಡ ಪರಂಪರೆ ಕಟ್ಟಲು ಸಾಧ್ಯವಿಲ್ಲ ಎಂದು ಅಭಿಪ್ರಾಯಪಟ್ಟರು.



ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ರಜತ ಮಹೋತ್ಸವ ಕಾರ್ಯಕ್ರಮದಲ್ಲಿ ಶಿಲ್ಪಿಗಳಾದ ದೇವಲಕುಂದ ವಾದಿರಾಜ್ ಮತ್ತು ಬಿ.ಬಸವಣ್ಣ ಅವರ ಭಾವಚಿತ್ರಕ್ಕೆ ವಿಜಯನಗರ ಸಾಮ್ರಾಜ್ಯದ ಶ್ರೀಕೃಷ್ಣದೇವರಾಯನ ವಂಶಸ್ಥ ಶ್ರೀಕೃಷ್ಣದೇವರಾಯರು ಪುಷ್ಪಾರ್ಚನೆ ಮಾಡಿದರು.

ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ ಮಾತನಾಡಿ, ಪ್ರಸ್ತುತ ಸಂದರ್ಭದಲ್ಲಿ ಶಿಕ್ಷಣ ಕ್ಷೇತ್ರವು ವಿದ್ಯಾರ್ಜನೆಯ ಉದ್ದೇಶದಿಂದ ದೂರ ಸರಿಯುತ್ತಿದೆ. ಅದು ಹಣಾರ್ಜನೆ(ಹಣ ಗಳಿಕೆಯ ಉದ್ದೇಶ)ಯ ಉದ್ದೇಶ ಹೊಂದಿದೆ. ನಮ್ಮ ದೇಶದಲ್ಲಿ ಸಾಂಸ್ಕೃತಿಕ ಕ್ಷೇತ್ರಕ್ಕೆ ಮಹತ್ವ ಇದೆ. ಆದ್ದರಿಂದ ಹಿಂದೆ ನಮ್ಮ ನೆಲದ ಸಾಂಸ್ಕೃತಿಕ ಬದುಕನ್ನು ಅಧ್ಯಯನ ಮಾಡಲು, ನೋಡಲು ವಿದೇಶದಿಂದ ಅನೇಕ ದಾರ್ಶನಿಕರು ಬರುತ್ತಿದ್ದರು. ಅಧ್ಯಯನ ಮಾಡಿ ಇಲ್ಲಿನ ಜ್ಞಾನವನ್ನು ಕೊಂಡೊಯ್ಯುತ್ತಿದ್ದರು. ಶಿಕ್ಷಣ ಕ್ಷೇತ್ರ ಎಲ್ಲಿವರೆಗೆ ಉನ್ನತವಾಗಿರುತ್ತದೆಯೋ ಅಲ್ಲಿವರೆಗೆ ಸಾಂಸ್ಕೃತಿಕ ಪ್ರಜ್ಞೆ ಇರುತ್ತದೆ. ಶಿಕ್ಷಣ ಧನಾರ್ಜನೆಯಾದಾಗ ಸಾಂಸ್ಕೃತಿಕ ಪ್ರಜ್ಞೆ ಕಳೆದುಕೊಳ್ಳುತ್ತೇವೆ. ಕಲೆಯು ಮನುಷ್ಯನನ್ನು ಅಮರನಾಗಿಸುತ್ತದೆ. ಯಾರಿಗೆ ಕಲೆ ಒಲಿದಿರುತ್ತದೆಯೋ ಅವರ ಹೆಸರು ಸಾವಿರಾರು ವರ್ಷ ಇರುತ್ತದೆ. ಹಾಗಾಗಿ, ಎಲ್ಲ ಕಲೆಗಳನ್ನು ಬೆಳೆಸುವ ಕೆಲಸವನ್ನು ನಮ್ಮ ಇಲಾಖೆ, ಅಕಾಡೆಮಿಗಳು ಮಾಡುತ್ತವೆ ಎಂದರು.

> ಅಮೆರಿಕಾ ಸೇರಿದಂತೆ ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳು ನೂರು ಮಹಡಿ ಎತ್ತರದ ಕಟ್ಟಡಗಳನ್ನು ನಿರ್ಮಿಸಿ, ಹೊಸ, ಹೊಸ ತಂತ್ರಜ್ಞಾನ ಆವಿಷ್ಕರಿಸಿರಬಹುದು. ಆದರೆ, ಭಾರತದಂತೆ ಸಾಂಸ್ಕೃತಿಕ, ಪಾರಂಪರಿಕ ಹಾಗೂ ಸಾಹಿತ್ಯಕವಾಗಿ ಶ್ರೀಮಂತ ಪರಂಪರೆಯನ್ನು ಹೊಂದಲು ಸಾಧ್ಯವಿಲ್ಲ
> -ಮೈಸೂರು ಎಂ.ಮಂಜುನಾಥ್,
> ಅಂತಾರಾಷ್ಟ್ರೀಯ ವಯೋಲಿನ್ ವಿದ್ವಾಂಸ

ಇದಕ್ಕೂ ಮುನ್ನ ಕಾರ್ಯಕ್ರಮವನ್ನು ವಿಜಯನಗರ ಸಾಮ್ರಾಜ್ಯದ ಶ್ರೀಕೃಷ್ಣದೇವರಾಯನ ವಂಶಸ್ಥ ಶ್ರೀಕೃಷ್ಣದೇವರಾಯರು ಉದ್ಘಾಟಿಸಿ ಮಾತನಾಡಿ, ದೇಶ ಹಾಗೂ ಸಂಸ್ಕೃತಿಗಾಗಿ ಏನನ್ನಾದರೂ ಕೊಡುಗೆ ನೀಡಿದರೆ ಮುಂದಿನ ಪೀಳಿಗೆ ನಮ್ಮನ್ನು ನೆನಪಿಟ್ಟುಕೊಳ್ಳುತ್ತದೆ. ನನ್ನ ಪೂರ್ವಿಕರು ಮಾಡಿದ ಪುಣ್ಯದಿಂದ ನಾನು ಇಲ್ಲಿಗೆ ಬಂದಿದ್ದೇನೆ ಎಂದರು.

ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಪ ನಿರ್ದೇಶಕಿ ನಿರ್ಮಲಾ ಮಠಪತಿ, ಅಕಾಡೆಮಿಯ ಅಧ್ಯಕ್ಷ ವೀರಣ್ಣ ಎಂ.ಅರ್ಕಸಾಲಿ, ಚೆನ್ನೈನ ಡಾ.ಕನಕರಾಜು, ಅಕಾಡೆಮಿಯ ರಿಜಿಸ್ಟ್ರಾರ್ ಆರ್.ಚಂದ್ರಶೇಖರ್ ಇದ್ದರು. ಶಿಲ್ಪಿಗಳಾದ ದೇವಲಕುಂದ ವಾದಿರಾಜ್ ಹಾಗೂ ಬಿ.ಬಸವಣ್ಣ ಬದುಕು ಮತ್ತು ಕಲಾಕೃತಿ ಕುರಿತು ಕ್ರಮವಾಗಿ ಗಣೇಶ್ ಎಲ್.ಭಟ್ ಹಾಗೂ ಪಿ.ಆರ್.ನಾಗರಾಜ್ ಮಾತನಾಡಿದರು.

ಚಿಲ್ಕುಂದದಲ್ಲಿ ತಂಬಾಕು ಹರಾಜು ಪ್ರಕ್ರಿಯೆಗೆ ಚಾಲನೆ

ಕಂಪಲಾಪುರ, ಅ.10– ರೈತ ತನ್ನ ಒಂದು ವರ್ಷದ ಶ್ರಮದ ಜೊತೆಗೆ ಮುಂದಿನ ಭವಿಷ್ಯ ಎರಡನ್ನೂ ಸೇರಿಸಿ ಬೇಲ್ ಮಾಡಿ ಮಾರುಕಟ್ಟೆಗೆ ತಂದಿದ್ದಾನೆ. ಅವನನ್ನು ಉಳಿಸುವ ಜವಾಬ್ದಾರಿ ಕಂಪನಿಗಳ ಮೇಲಿದೆ ಎಂದು ಶಾಸಕ ಹೆಚ್.ಪಿ.ಮಂಜುನಾಥ್ ತಿಳಿಸಿದರು.

ಇಲ್ಲಿಗೆ ಸಮೀಪದ ಚಿಲ್ಕುಂದ ತಂಬಾಕು ಮಾರುಕಟ್ಟೆ ಸಂಖ್ಯೆ 62ರಲ್ಲಿ ತಂಬಾಕು ಹರಾಜು ಪ್ರಕ್ರಿಯೆಗೆ ಚಾಲನೆ ನೀಡಿ ಮಾತನಾಡಿದ ಅವರು, ಈ ಬಾರಿ ಅತಿವೃಷ್ಟಿಯಿಂದಾಗಿ ಬೆಳೆ ಕೈ ಸೇರಿಲ್ಲ. ಹಾಕಿದ ಗೊಬ್ಬರ ನೀರಿನಲ್ಲಿ ಕೊಚ್ಚಿ ಹೋಗಿದೆ. ಜೊತೆಗೆ ಗೊಬ್ಬರದ ಬೆಲೆ, ಉತ್ಪಾದನಾ ವೆಚ್ಚ ದುಪ್ಪಟ್ಟಾಗಿ ಮಾನಸಿಕ ವಾಗಿ ರೈತ ನೊಂದಿದ್ದಾನೆ. ಆದ್ದರಿಂದ ರೈತನಿಗೆ ಬೇಕಾಗಿರುವುದು ವೈಜ್ಞಾನಿಕ ಬೆಲೆಯಲ್ಲ. ಬದಲಾಗಿ ಮಾನವೀಯ ಬೆಲೆ ಎಂದರು.

ಮಾರುಕಟ್ಟೆಗಳಲ್ಲಿ ರೈತರಿಗೆ ಅಗತ್ಯ ಮೂಲ ಸೌಕರ್ಯ ಕಲ್ಪಿಸಬೇಕು. ಈ ಬಾರಿ 100 ಮಿಲಿಯನ್ ಕೆ.ಜಿ. ತಂಬಾಕು ಉತ್ಪಾದನೆ ಗುರಿ ಹೊಂದಿದ್ದರೂ, 60 ಮಿಲಿಯನ್ ಕೆ.ಜಿ. ಆಗುವುದೂ ಕಷ್ಟ, ಆದ್ದರಿಂದ 100 ಮಿಲಿಯನ್ ಕೆ.ಜಿ. ಗೆ ಕೊಡುವ ಸರಾಸರಿ ಬೆಲೆಯನ್ನು 60 ಮಿಲಿಯನ್ ಕೆ.ಜಿ.ಗೆ ಕೊಟ್ಟರೆ ರೈತ ಬದುಕು ತ್ತಾನೆ ಎಂದರು.



ತಂಬಾಕು ಮಂಡಳಿ ಸದಸ್ಯ ಹೆಚ್.ಆರ್. ದಿನೇಶ್ ಮತನಾಡಿ, ನಾನು ಮಂಡಳಿ ಸದಸ್ಯನಾಗಿ ಕೇವಲ 4 ತಿಂಗಳು ಕಳೆದಿದ್ದು, ರೈತರ ಹಿತ ಕಾಯುವುದೇ ನಮ್ಮ ಗುರಿಯಾಗಿದೆ. ಈ ಬಾರಿ ಹೆಚ್ಚು ಮಳೆಯಿಂದಾಗಿ ಜಮೀನಿನಲ್ಲಿ ನೀರು ತುಂಬಿ ರೈತನಿಗೆ ಬೆಳೆ ಕೈ ಸೇರಿಲ್ಲ. ಜೊತೆಗೆ ಇಳುವರಿ ಕುಂಠಿತಗೊಂಡಿದೆ. ಪ್ರತಿ ಕೆಜಿ ತಂಬಾಕಿಗೆ ಸರಾಸರಿ 250 ರೂ. ದೊರಕ ಬೇಕು ಆಗ ಮಾತ್ರ ರೈತ ಚೇತರಿಸಿ ಕೊಳ್ಳುತ್ತಾನೆ. ಈ ಬಗ್ಗೆ ಕಂಪನಿಯವರ ಸಭೆ ಕರೆದು ಮಾತನಾಡುವುದಾಗಿ ತಿಳಿಸಿದರು.

ಇಂದಿನ ಮಾರುಕಟ್ಟೆಗೆ ಒಟ್ಟು 27 ಬೇಲ್‌ಗಳು ಬಂದಿದ್ದು, ಎಲ್ಲಾ ಬೇಲುಗಳು ಗುಣಮಟ್ಟದ್ದಾದ್ದರಿಂದ ಪ್ರತಿ ಕೆಜಿಗೆ ಗರಿಷ್ಠ 201 , ಕನಿಷ್ಟ 200 ರೂ. ದೊರೆಯಿತು. ಹರಾಜಿನಲ್ಲಿ ಒಟ್ಟು 15 ಕಂಪನಿಗಳು ಭಾಗವಹಿಸಿದ್ದವು.

ಈ ವೇಳೆ ಹರಾಜು ಅಧೀಕ್ಷಕ ಡಾ.ಬ್ರಿಜ್ ಭೂಷಣ್, ಕ್ಷೇತ್ರಾಧಿಕಾರಿ ಸವಿನಯ್, ನಾಗರಾಜ್, ಕಿರಣ್, ಚಿಲ್ಕುಂದ ಗ್ರಾಪಂ ಅದ್ಯಕ್ಷೆ ಶೋಭಾ, ಉಪಾಧ್ಯಕ್ಷ ಜಯಣ್ಣ, ಹುಣಸೂರು ತಾಪಂ ಉಪಾಧ್ಯಕ್ಷ ಹೆಚ್. ಪ್ರೇಮ್ ಕುಮಾರ್, ಗೊಬ್ಬರ ಕಮಿಟಿ ಸದಸ್ಯ ಡಿ.ಸ್ವಾಮಿ, ಮಂಡಳಿ ನಿ.ನೌಕರ ಬೊಮ್ಮೇಗೌಡ, ಕೊತ್ತೇಗಾಲ ಗ್ರಾಪಂ ಸದಸ್ಯ ಕರುಣಾಕರ್, ರೈತ ಮುಖಂಡರಾದ ಪ್ರಭಾಕರ ಆರಾಧ್ಯ, ಶಿವಣ್ಣ, ವಿಷಕಂಠಪ್ಪ, ಶಿವಬಸಪ್ಪ, ರವಿ, ನಿತ್ಯಾನಂದ, ದೊಡ್ಡಬೇಲಾಳು ಸಹಕಾರ ಸಂಘದ ಅಧ್ಯಕ್ಷ ಶಿವಣ್ಣ, ನಿರ್ದೇಶಕ ಕುಮಾರ್, ನಿಂಗರಾಜ್, ಈರಣ್ಣ, ವೇಣು, ಸೇರಿದಂತೆ ಕಿಸಾನ್ ಮೋರ್ಚಾ, ಅಖಂಡ ಕರ್ನಾಟಕ ರೈತ ಸಂಘದವರು, ಹಲವು ರೈತರು ಇದ್ದರು.

ಮಡಿಕೆಹುಂಡಿಯಲ್ಲಿ ರೈತರಿಗೆ ಉಚಿತ ಗಿಡ ವಿತರಣೆ



ಮಲ್ಕುಂಡಿ, ಅ.10– ರೈತರು ಮನೆಗೊಂದು ಗಿಡ ಬೆಳೆಸಿದರೆ ಉತ್ತಮ ಮಳೆಯಾಗಿ ಉತ್ತಮ ಗಾಳಿ ದೊರೆಯುತ್ತದೆ ಎಂದು ಗ್ರಾಪಂ ಅದ್ಯಕ್ಷೆ ಮಹದೇವಮ್ಮ ಹೇಳಿದರು.

ಸಮೀಪದ ಮಡಿಕೆಹುಂಡಿಯಲ್ಲಿ ಹಾಡ್ಯ ಗ್ರಾಪಂ ವತಿಯಿಂದ ಅರಣ್ಯ ಇಲಾಖೆ ಸಹಯೋಗದೊಂದಿಗೆ ರೈತರಿಗೆ ಉಚಿತ ಗಿಡ ವಿತರಿಸಿ ಮಾತನಾಡಿದ ಅವರು, ಪ್ರತಿಯೊಬ್ಬರೂ ತಮ್ಮ ಮನೆ ಮುಂದೆ ಮಕ್ಕಳಂತೆ ಗಿಡ ಬೆಳೆಸಿದರೆ ಉತ್ತಮ ಗಾಳಿ ಸಿಗುತ್ತದೆ. ಇದರಿಂದ ಉತ್ತಮ ಆರೋಗ್ಯವೂ ದೊರೆಯುತ್ತದೆ ಎಂದರು. ಈ ವೇಳೆ ಗ್ರಾಪಂ ಸದಸ್ಯರಾದ ಕೃಷ್ಣ, ಮಹದೇವಸ್ವಾಮಿ, ಪಿಡಿಓ ಕರಿಯಪ್ಪ ಉಪ ಅರಣ್ಯ ಅಧಿಕಾರಿ ಮೋಹನ್, ಗಂಗಾಧರ್ ಸೇರಿದಂತೆ ಪ್ರಮುಖರಿದ್ದರು.



ಹುಣಸೂರು ತಾಲೂಕಿನ ಶ್ಯಾನಭೋಗನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ ದಶರಥೇಗೌಡ ಅವರು ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಹಾಗೂ ರಾಜ್ಯ ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷ ಜಿ.ಡಿ.ಹರೀಶ್‌ಗೌಡ ಮತ್ತು ಎಂಸಿಡಿಸಿಸಿ ಬ್ಯಾಂಕ್ ನಿರ್ದೇಶಕ ಕೆ.ಎಸ್.ಕುಮಾರ್ ಅವರನ್ನು ಅಭಿನಂದಿಸಿದರು. ಈ ವೇಳೆ ಜೆಡಿಎಸ್ ಮುಖಂಡ ಮಧು ಇನ್ನಿತರರಿದ್ದರು.



ತಿ.ನರಸೀಪುರ ಪಟ್ಟಣದ ಖಾಸಗಿ ಬಸ್ ನಿಲ್ದಾಣದಲ್ಲಿ ಮಹರ್ಷಿ ಶ್ರೀ ವಾಲ್ಮೀಕಿ ಜಯಂತಿ ಆಚರಿಸಲಾಯಿತು. ಈ ವೇಳೆ ಖಾಸಗಿ ಬಸ್ ಏಜೆಂಟರ ಸಂಘದ ಅಧ್ಯಕ್ಷ ಪಿ. ಪುಟ್ಟರಾಜು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಸವರಾಜು, ಮಹದೇಶ್ವರ ಭವನ್ ಮಾಲೀಕ ರಾಜಣ್ಣ, ಜಿ.ಎಲ್.ಉಮೇಶ್, ಸಂಘದ ಕಾರ್ಯದರ್ಶಿ ರಾಜಣ್ಣ, ವಿಚಾರವಾದಿ ಕೆ.ಎನ್. ಪ್ರಭು ಸ್ವಾಮಿ, ಪುರಸಭಾ ಸದಸ್ಯ ಎನ್. ಲೋಕೇಶ್, ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಮಹದೇವಯ್ಯ, ಜಿಲ್ಲಾ ಕಾರ್ಯದರ್ಶಿ ಬಸವರಾಜು, ಬಸ್ ಏಜೆಂಟರಾದ ಶ್ರೀನಿವಾಸ್, ಮಾಧು, ಶಂಕರ್, ಕುಮಾರ್, ಸಿದ್ದಪ್ಪ, ಚಿನ್ನಸ್ವಾಮಿ, ವೆಂಕಟೇಶ್ ಇದ್ದರು.

ಪೋಷಕರು ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕೊಡಿಸಿ

ತಾಲೂಕು ಗಾಣಿಗರ ಸಂಘದ ಅಧ್ಯಕ್ಷ ರಾಮಚಂದ್ರ



ತಿ.ನರಸೀಪುರ, ಅ.10– ಮಕ್ಕಳು ದೇಶದ ಆಸ್ತಿ. ಪೋಷಕರು ಅವರಿಗೆ ಆಸ್ತಿ ಮಾಡದಿದ್ದರೂ ಗುಣಮಟ್ಟದ ಶಿಕ್ಷಣ ಕೊಡಿಸಬೇಕು. ಆಗ ಮಾತ್ರ ಮಕ್ಕಳ ಭವಿಷ್ಯ ಉಜ್ವಲವಾಗುವ ಜೊತೆಗೆ ಸಮಾಜದ ಉದ್ಧಾರವೂ ಆಗಲು ಸಾಧ್ಯ ಎಂದು ತಾಲೂಕು ಗಾಣಿಗರ ಸಂಘದ ಅಧ್ಯಕ್ಷ ರಾಮಚಂದ್ರ ಅಭಿಪ್ರಾಯಪಟ್ಟರು.

ತಾಲೂಕು ಗಾಣಿಗರ ಸಂಘದ ಸುವರ್ಣ ಮಹೋತ್ಸವದ ಅಂಗವಾಗಿ ಪಟ್ಟಣದ ರೇಣುಕಾ ಸಭಾ ಭವನದಲ್ಲಿ ಆಯೋಜಿಸಿದ್ದ ಸಂಘದ ಅಭಿವೃದ್ಧಿಗಾಗಿ ಸೇವೆ ಸಲ್ಲಿಸಿದ ಮಹನೀಯರಿಗೆ ಸನ್ಮಾನ ಹಾಗೂ ಸಮಾಜದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಮಾಜಕ್ಕೆ, ದೇಶಕ್ಕೆ ಕೊಡುಗೆ ನೀಡಲು ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಲು ಪೋಷಕರು ಮುಂದಾಗಬೇಕು. ಇತ್ತೀಚಿನ ಬೆಳವಣಿಗೆ ಗಮನಿಸಿದಾಗ ಎಸ್‌ಎಸ್‌ಎಲ್‌ಸಿಯಲ್ಲಿ ವಿದ್ಯಾಭ್ಯಾಸ ಮಾಡಿದ ಮಕ್ಕಳು ಪಿಯುಸಿಯಲ್ಲಿ ಇರುವುದಿಲ್ಲ. ಪೋಷಕರು ಮಕ್ಕಳ ಶಿಕ್ಷಣವನ್ನು ಮೊಟಕುಗೊಳಿಸುತ್ತಿದ್ದಾರೆ. ಇದು ಉತ್ತಮ ಬೆಳವಣಿಗೆಯಲ್ಲ. ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸುವ ಮೂಲಕ ದೇಶಕ್ಕೆ ಉತ್ತಮ ಪ್ರಜೆ ನೀಡುವಲ್ಲಿ ಪೋಷಕರ ಪಾತ್ರ ಬಹುಮುಖ್ಯವಾಗುತ್ತದೆ ಎಂದರು.

ಯುವಜನತೆ ಸಮಾಜ ಕಟ್ಟುವ ಕೆಲಸಕ್ಕೆ ಮುಂದಾಗಬೇಕು. ದೂರದೃಷ್ಟಿ, ಗುರಿ ಹೊಂದುವ ಮೂಲಕ ಎಲ್ಲ ಸಮಾಜದವರೊಂದಿಗೆ ಬೆರೆತು ಕೆಲಸ ಮಾಡುವ ಉದ್ದೇಶ ಹೊಂದಬೇಕು ಎಂದು ಸಲಹೆ ನೀಡಿದರು.

ಇದೇ ವೇಳೆ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಸಮಾಜದ 38 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಸಂಘದ ಅಭಿವೃದ್ಧಿಗೆ ಸೇವೆ ಸಲ್ಲಿಸಿದ 33 ಗ್ರಾಮಗಳ 235 ಮಂದಿ ಹಿರಿಯ ಮುಖಂಡರು, ಕಾರ್ಯಕ್ರಮದ ಯಶಸ್ಸಿನ ರೂವಾರಿಗಳಾದ ಆನಂದ್ ದಂಪತಿಯನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಸಂಘದ ಗೌರವಾಧ್ಯಕ್ಷ ಎಸ್.ಮಹದೇವಶೆಟ್ಟಿ, ಉಪಾಧ್ಯಕ್ಷರಾದ ಜಿ.ನಾರಾಯಣಶೆಟ್ಟಿ, ಆರ್.ತಮ್ಮಯ್ಯ, ಖಜಾಂಚಿ ಎಂ.ಮಹದೇವಸ್ವಾಮಿ, ಸಂಘಟನಾ ಕಾರ್ಯದರ್ಶಿ ಎಂ.ಶಿವರಾಜು, ಸಹ ಕಾರ್ಯದರ್ಶಿಗಳಾದ ಕೆ.ಎಸ್.ಮಹದೇವಸ್ವಾಮಿ, ಸಿ.ಜಯಣ್ಣ, ಶಾಮಿಯಾನ ಮಹದೇವಸ್ವಾಮಿ, ಆಲಗೂಡು ಎ.ಸಿ. ಪೂರ್ಣಚಂದ್ರ ಮತ್ತಿತರರಿದ್ದರು.

ಸಾಹಿತ್ಯ ಕ್ಷೇತ್ರಕ್ಕೆ ಡಾ.ಶಿವರಾಮ ಕಾರಂತರ ಕೊಡುಗೆ ಅಪಾರ

ಜಿಲ್ಲಾ ಕಸಾಪ ನಿಕಟಪೂರ್ವ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ

ಹೆಚ್.ಡಿ.ಕೋಟೆ, ಅ.10– ಸದಾ ಪ್ರಯೋಗಶೀಲತೆಯಲ್ಲಿ ತೊಡಗಿ ಬಹುಮುಖ ಪ್ರತಿಭೆ ಹೊಂದಿದ್ದ ಡಾ.ಶಿವರಾಮ ಕಾರಂತರು ಸಾಹಿತ್ಯ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದಾರೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ನಿಕಟಪೂರ್ವ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ ತಿಳಿಸಿದರು.



ತಾಲೂಕಿನ ತುಂಬಸೋಗೆ ಗ್ರಾಮದ ಎಂಎಂಕೆ ಪದವಿ ಪೂರ್ವ ಕಾಲೇಜಿನಲ್ಲಿ ಸೋಮವಾರ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಆಯೋಜಿಸಿದ್ದ ಡಾ.ಶಿವರಾಮ ಕಾರಂತರ ಜನ್ಮ ದಿನೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕಾರಂತರು ಬದುಕಿನ ಬಗ್ಗೆ ಕುತೂಹಲ ಹೊಂದಿದ್ದರು. ಯಾವುದೇ ವಿಚಾರವನ್ನು ಸುಲಭವಾಗಿ ಒಪ್ಪಿಕೊಳ್ಳುತ್ತಿರಲಿಲ್ಲ. ವೈಚಾರಿಕತೆ ಮತ್ತು ವೈಜ್ಞಾನಿಕತೆಯಿಂದ ಕೂಡಿದ್ದಲ್ಲಿ ಮಾತ್ರ ವಿಚಾರಕ್ಕೆ ಬೆಲೆ ಎಂದು ನಂಬಿದ್ದರು. ತಮ್ಮ ಸುತ್ತಮುತ್ತಲ ಬೆಟ್ಟಗುಡ್ಡ, ನದಿಗಳ ಅನುಭವವನ್ನು ಅವರು ತಮ್ಮ ಸಾಹಿತ್ಯದ ಮೂಲಕ ಕಟ್ಟಿಕೊಟ್ಟಿದ್ದರಿಂದ ಅವರನ್ನು ನಡೆದಾಡುವ ವಿಶ್ವವಿದ್ಯಾಲಯ ಎಂದು ಕರೆಯುತ್ತಾರೆ ಎಂದ ಅವರು, ಇವರು ಕನ್ನಡ ಚಿತ್ರರಂಗಕ್ಕೆ ಭೂತರಾಜ್ಯ ಎಂಬ ಮೂಕಿ ಚಿತ್ರವನ್ನು ನಿರ್ದೇಶಿಸಿ, ನಿರ್ಮಿಸಿ ಮತ್ತು ನಟಿಸಿದ ಮೊದಲಿಗರಾಗಿದ್ದು, ಅವರ ಅನೇಕ ಕಾದಂಬರಿಗಳು ಸಿನಿಮಾಗಳಾಗಿವೆ ಎಂದರು. ಶಿವರಾಮ ಕಾರಂತರ ಕುರಿತು ಮಾತನಾಡಿದ ಸಾಹಿತಿ ಡಾ.ಕುವಾರ್, ಜೀವನದ ಅನುಭವದ ಆಧಾರದ ಮೇಲೆ ಅನೇಕ ಕೃತಿಗಳನ್ನು ಕಾರಂತರು ರಚಿಸುತ್ತಿದ್ದರು. 3ರಿಂದ 4 ದಿನಗಳಲ್ಲಿ ಒಂದೊಂದು ಕೃತಿ ರಚಿಸುತ್ತಿದ್ದರು. ಈ ಕಾರಣದಿಂದ ಅವರ ಬರಹಕ್ಕಿಂತ ಬದುಕನ್ನೇ ಅಧ್ಯಯನ ಮಾಡಬೇಕು ಎಂದರು. ಆರಂಭಿಕ ಪ್ರಗತಿಪರ ಚಿಂತಕರಲ್ಲಿ ಕಾರಂತರು ಮುಂಚೂಣಿಯಲ್ಲಿದ್ದರು. ಕಾರಂತರು 400ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿ ಕನ್ನಡ ಭಾಷೆಯನ್ನು ಶ್ರೀಮಂತಗೊಳಿಸಿದ್ದಾರೆ. ರಾಮಾಯಣ, ಮಹಾಭಾರತದ ಅನೇಕ ಸನಿವೇಶಗಳಿಗೆ ಹೊಸ ರೂಪ ನೀಡಿ ಯಕ್ಷಗಾನಕ್ಕೆ ಅಳವಡಿಸಿ ಜನಪ್ರಿಯಗೊಳಿಸಿದರು ಎಂದರು.

ಕಾರ್ಯಕ್ರಮದಲ್ಲಿ ಎಂಎಂಕೆ ಸ್ವತಂತ್ರ ಪದವಿಪೂರ್ವ ಕಾಲೇಜಿನ ಸಂಸ್ಥಾಪಕ ಎಸ್.ಪಿ.ಪ್ರಕಾಶ್, ಕಸಾಪ ತಾಲೂಕು ಅಧ್ಯಕ್ಷ ಕನ್ನಡ ಪ್ರಮೋದ, ಕಸಬಾ ಹೋಬಳಿ ಘಟಕ ಅಧ್ಯಕ್ಷ ಕಾಳೇಗೌಡ, ಉಪನ್ಯಾಸಕರಾದ ವಿರೂಪಾಕ್ಷ, ಸಿದ್ಧಾರ್ಥ, ಮಹದೇವಿ.ಎಂ, ಸುಪ್ರಿಯಾ, ನವ್ಯಾ ಇದ್ದರು.

ಚರಂಡಿ ನಿರ್ಮಾಣಕ್ಕೆ ಒತ್ತಾಯಿಸಿ ಪ್ರತಿಭಟನೆ



ತಿ.ನರಸೀಪುರ ಅ.10– ಭಾನುವಾರ ರಾತ್ರಿ ಸುರಿದ ಧಾರಾಕಾರ ಮಳೆಯಿಂದಾಗಿ ಮನೆಗಳಿಗೆ ನೀರು ನುಗ್ಗಿದ ಪರಿಣಾಮ ಸಮರ್ಪಕ ಚರಂಡಿ ನಿರ್ಮಾಣಕ್ಕೆ ಒತ್ತಾಯಿಸಿ ತಾಲೂಕಿನ ವಾಟಾಳು ಗ್ರಾಮಸ್ಥರು ಸೋಮವಾರ ಪ್ರತಿಭಟನೆ ನಡೆಸಿದರು. ಗ್ರಾಮದ ಗ್ರಾಪಂ ಆವರಣದಲ್ಲಿ ಜಮಾಯಿಸಿದ ಗ್ರಾಮಸ್ಥರು ಗ್ರಾಪಂ ಕಚೇರಿಗೆ ಬೀಗ ಹಾಕಿ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಮಾತನಾಡಿದ ಗ್ರಾಮಸ್ಥರು, ಗ್ರಾಮದ ಬಂಡಿ ಬೀದಿಯಲ್ಲಿ ಗ್ರಾಪಂ ಚರಂಡಿ ನಿರ್ಮಿಸಿಲ್ಲ. ಭಾನುವಾರ ರಾತ್ರಿ ಸುರಿದ ಧಾರಾಕಾರ ಮಳೆಗೆ ಮನೆಗಳಿಗೆ ನೀರು ನುಗ್ಗಿ ರಾತ್ರಿ ಇಡಿ ಪರದಾಡುವಂತಾಗಿದೆ. ಪ್ರತಿ ವರ್ಷ ಮಳೆಗಾಲದಲ್ಲಿ ಚರಂಡಿ ಸಮಸ್ಯೆಯಿಂದಾಗಿ ಮಳೆ ನೀರು ಮನೆಗೆ ನುಗ್ಗಿ ತೀವ್ರ ಸಮಸ್ಯೆಯಾಗುತ್ತಿದ್ದರೂ, ಗ್ರಾಪಂ ಚರಂಡಿ ನಿರ್ಮಿಸಿಲ್ಲ. ಈ ಸಂಬಂಧ ತಾಪಂ ಇಓಗೆ ಮನವಿ ಮಾಡಿದ್ದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದ ಗ್ರಾಮಸ್ಥರು, ಸ್ಥಳಕ್ಕೆ ಉನ್ನತ ಮಟ್ಟದ ಅಧಿಕಾರಿಗಳು ಭೇಟಿ ನೀಡಿ ತುರ್ತು ಕ್ರಮ ತೆಗೆದುಕೊಳ್ಳುವವರೆವಿಗೂ ಕಚೇರಿ ತೆರೆಯಲು ಬಿಡುವುದಿಲ್ಲ ಎಂದು ಪಟ್ಟು ಹಿಡಿದರು.

ಗ್ರಾಮಸ್ಥರು ಕಚೇರಿಗೆ ಬೀಗ ಜಡಿದಿದ್ದರಿಂದ ಪಂಚಾಯಿತಿ ಅಧಿಕಾರಿಗಳು ಹಾಗೂ ಸಿಬ್ಬಂದಿ ಹೊರಗೆ ನಿಂತಿದ್ದರು. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಕಚೇರಿಗೆ ರಜೆ ಹಾಕಿದ್ದರೆ, ಅಧ್ಯಕ್ಷರು ವ್ಯಾಪ್ತಿ ಪ್ರದೇಶದಿಂದ ಹೊರಗಿದ್ದರು. ತಾಪಂ ಕಾರ್ಯ ನಿರ್ವಾಹಕ ಅಧಿಕಾರಿ ಮೊಬೈಲ್‌ನಲ್ಲಿ ಭರವಸೆ ನೀಡಿದ ಹಿನ್ನಲೆಯಲ್ಲಿ ಆದಷ್ಟು ಬೇಗ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳುವಂತೆ ಗ್ರಾಮಸ್ಥರು ಒತ್ತಾಯಿಸಿ ಪ್ರತಿಭಟನೆ ಕೈಬಿಟ್ಟರು.

ಭಾನುವಾರ ಸುರಿದ ಭಾರೀ ಮಳೆಗೆ ಗ್ರಾಮದ ವಾಟಾಳು ಮಠ ಹಾಗೂ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯು ಕೂಡ ಮಳೆ ನೀರಿನಿಂದ ಆವೃತ್ತವಾಗಿತ್ತು ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಪ್ರತಿಭಟನೆಯಲ್ಲಿ ಬಂಡಿ ಬೀದಿ ನಿವಾಸಿಗಳಾದ ಕಿರಣ, ಗಣೇಶ, ಶಿವಣ್ಣ, ಸೋಮಣ್ಣ, ಚಿನ್ನಸ್ವಾಮಿ, ಮಹೇಶ, ಬಸವರಾಜು, ಮಂಜು, ರಾಜಣ್ಣ, ನಾಗಣ್ಣ, ಜಗದೀಶ್, ಜಯಮ್ಮ, ರಾಜಮ್ಮ, ಮಂಜು, ರಾಘವೇಂದ್ರ, ಪುಟ್ಟಮಾದಮ್ಮ ಇನ್ನಿತರರಿದ್ದರು.

ರಸ್ತೆ, ಚರಂಡಿ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ

ನಂಜನಗೂಡು, ಅ.10– ತಾಲೂಕಿನ ದೇವರಸನಹಳ್ಳಿಯ ಸಾಮಾನ್ಯ ವರ್ಗದ ಬೀದಿಯಲ್ಲಿ 25 ಲಕ್ಷ ರೂ. ವೆಚ್ಚದ ಕಾಂಕ್ರೀಟ್ ರಸ್ತೆ, ಮತ್ತು ಸಿಸಿ ಚರಂಡಿ ನಿರ್ಮಾಣ ಕಾಮಗಾರಿಗೆ ಗ್ರಾಪಂ ಅಧ್ಯಕ್ಷೆ ಮಂಗಳಮ್ಮ ಭೂಮಿ ಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು, ಶಾಸಕ ಬಿ.ಹರ್ಷವರ್ಧನ್ ಗ್ರಾಮೀಣ ಭಾಗದಲ್ಲಿ ಮೂಲ ಸೌಕರ್ಯಕ್ಕೆ ಒತ್ತು ನೀಡುವ ಮೂಲಕ ಅಭಿವೃದ್ಧಿಯ ಹರಿಕಾರರೆನಿಸಿದ್ದಾರೆ. ಗ್ರಾಮದ ಸಾಮಾನ್ಯ ವರ್ಗದ ಬೀದಿಗೆ ಮೂಲ ಸೌಕರ್ಯ ಕಲ್ಪಿಸುವ ಸಲುವಾಗಿ ಶಾಸಕರ ನಿಧಿಯಿಂದ 25 ಲಕ್ಷ ಅನುದಾನ ನೀಡಿದ್ದು, ಕಾಂಕ್ರೀಟ್ ಮತ್ತು ಸಿಸಿ ರಸ್ತೆ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಅಲ್ಲದೇ ಗ್ರಾಮದಲ್ಲಿ ಸಮುದಾಯ ಭವನ ನಿರ್ಮಾಣಕ್ಕೂ ಅನುದಾನ ನೀಡಿರುವುದಲ್ಲದೆ ಗ್ರಾಪಂ ವ್ಯಾಪ್ತಿಯ ಗ್ರಾಮಗಳಲ್ಲಿ ಶಾಸಕರು ಹಲವು ಅಭಿವೃದ್ಧಿ ಕೆಲಸಗಳಿಗೆ ಚಾಲನೆ ನೀಡಿ ಅಭಿವೃದ್ಧಿಗೆ ಮುಂದಾಗಿದ್ದಾರೆ. ನಂಜನಗೂಡಿನಿಂದ ದೇವರಸನಹಳ್ಳಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆ ಅಭಿವೃದ್ಧಿಪಡಿಸುವಂತೆ ಮನವಿ ಮಾಡಿದ್ದು, 2.5 ಕೋಟಿ ಅನುದಾನ ನೀಡುವುದಾಗಿ ಭರವಸೆ ನೀಡಿದ್ದು, ಶೀಘ್ರ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲಿದ್ದಾರೆ ಎಂದರು.

ಈ ವೇಳೆ ಸದಸ್ಯರಾದ ಗೋವರ್ಧನ್, ವೆಂಕಟೇಶ್, ಪ್ರೇಮ, ಸುಮತಿ, ಮಂಜು, ರವಿ, ಮುಖಂಡರಾದ ದೊಡ್ಡತಮ್ಮಯ್ಯ, ಪ್ರಸಾದ್‌ಬಾಬು, ಸಂಜು, ಸುರೇಶ್, ಡಿ.ಆರ್.ರವಿಕುಮಾರ್ ಹಾಗೂ ಗ್ರಾಮದ ಯಜಮಾನರು ಇದ್ದರು.



ತಾಯ್ತನ ಅಂತಃಕರಣದ ಅಸ್ಮಿತೆ ಡಾ.ಶಿವರಾತ್ರಿ ರಾಜೇಂದ್ರ ಶ್ರೀ

ಆಧ್ಯಾತ್ಮಿಕ ಚಿಂತಕ ಶಂಕರ್ ದೇವನೂರು ಬಣ್ಣನೆ



ನಂಜನಗೂಡು, ಅ.10– 'ಜಗವೆಲ್ಲಾ ನಗುತಿರಲಿ, ಜಗದ ಅಳುವು ನನಗಿರಲಿ' ಎನ್ನುವ ತಾಯ್ತನದ ಅಂತಃಕರಣದ ಅಸ್ಮಿತೆ ಡಾ.ಶಿವರಾತ್ರಿ ರಾಜೇಂದ್ರ ಶ್ರೀಗಳು ಎಂದು ಆಧ್ಯಾತ್ಮಿಕ ಚಿಂತಕ ಶಂಕರ್ ದೇವನೂರು ಬಣ್ಣಿಸಿದರು.

ನಗರದ ಹೌಸಿಂಗ್ ಬೋರ್ಡ್ ಕಾಲೋನಿಯಲ್ಲಿರುವ ಶ್ರೀಪತಂಜಲಿ ಯೋಗ ಶಿಕ್ಷಣ ಸಮಿತಿಯ ಯೋಗ ಮಹಾಮನೆಯಲ್ಲಿ ಡಾ.ಶಿವರಾತ್ರಿ ರಾಜೇಂದ್ರ ಸ್ವಾಮೀಜಿಯವರ 107ನೇ ಜಯಂತಿ ಅಂಗವಾಗಿ ಹಮ್ಮಿಕೊಂಡಿದ್ದ ನುಡಿ ನೈವೇದ್ಯ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಎಲ್ಲರ ಒಳಿತಿನಲ್ಲಿ ನಮ್ಮ ಒಳಿತಿದೆ ಎಂಬುದು ಶಿವರಾತ್ರಿ ರಾಜೇಂದ್ರ ಶ್ರೀಗಳ ಧ್ಯೇಯವಾಗಿತ್ತು. ಮಾನವರೆಲ್ಲರೂ ಒಂದೇ ಎನ್ನುವ ಅವರ ಸಮತೆ, ಮಮತೆ, ಹೃದಯವಂತಿಕೆ, ಮಾನವೀಯ ಅಂತಃಕರಣ, ಶ್ರಮಶೀಲತೆ, ಸೇವಾ ಕೈಂಕರ್ಯ, ಕಾರುಣ್ಯವನ್ನು ತಾತ್ವಿಕವಾಗಿ ಪ್ರತಿಪಾದಿಸಿದ ವಾತ್ಸಲ್ಯ ಮೂರ್ತಿ ರಾಜೇಂದ್ರ ಶ್ರೀಗಳು. ಅಕ್ಷರ, ಅನ್ನ, ಆಶ್ರಯ, ತ್ರಿವಿಧ ದಾಸೋಹ ಮೂಲಕ ಮನುಕುಲದ ಗಾಯಕ್ಕೆ ಮದ್ದಾದ ಮಹಾನುಭಾವರು ಎಂದು ಸ್ಮರಿಸಿದರು.

ಬಡತನ, ಮೌಢ್ಯ ನಿವಾರಣೆಗೆ ಶಿಕ್ಷಣವೇ ಮದ್ದು ಎಂಬುದನ್ನು ಅರಿತ ರಾಜೇಂದ್ರ ಶ್ರೀಗಳು ಸ್ವಾತಂತ್ರ್ಯ ಪೂರ್ವದಲ್ಲಿ ಹಸಿವು, ಬಡತನದಿಂದ ತತ್ತರಿಸಿ ಶಿಕ್ಷಣದಿಂದ ವಂಚಿತರಾಗಿದ್ದ ಕಾಲಘಟ್ಟದಲ್ಲಿ ಉಚಿತ ವಿದ್ಯಾರ್ಥಿ ನಿಲಯ ತೆರೆದರು. ಧವಸ, ಧಾನ್ಯ ಬೇಡಿ ತಂದು ಹಸಿದ ಹೊಟ್ಟೆ ತುಂಬಿಸಿ ಅವರು ಉಪವಾಸ ಇದ್ದ ನಿದರ್ಶನಗಳಿವೆ. ಪಟ್ಟಾಧಿಕಾರ ಸಂದರ್ಭ ಭಕ್ತರು ನೀಡಿದ್ದ ಚಿನ್ನದ ಕರಡಿಗೆ ಮಾರಿ ಮಕ್ಕಳ ಹಸಿವು ನಿವಾರಿಸಿದ ದಿವ್ಯ ಚೇತನರು ಎಂದರು.

ಯುದ್ಧ, ದ್ವೇಷದಿಂದ ಸಾಮ್ರಾಜ್ಯ ಗೆದ್ದವರು ಯಾರೂ ಇಲ್ಲ. ಪ್ರೀತಿ, ಕಾರುಣ್ಯ, ಅಂತಃಕರಣದಿಂದ ಎಲ್ಲವನ್ನು ತನ್ನದಾಗಿಸಿಕೊಳ್ಳಬಹುದು ಎಂಬುದನ್ನು ಜಗತ್ತಿಗೆ ಸಾರಿದ್ದ ಸುತ್ತೂರು ಮಠ ರಾಜೇಂದ್ರ ಶ್ರೀಗಳ ಕಾರುಣ್ಯದ ರಥವನ್ನು ಮುನ್ನಡೆಸುತ್ತಿರುವ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ ನಮ್ಮ ದಿವ್ಯ ಪರಂಪರೆಯನ್ನು ಜಗತ್ತಿನೆಲ್ಲೆಡೆ ವಿಸ್ತರಿಸುತ್ತಾ ಸಮಾಜಕ್ಕೆ ನೆರಳಾಗಿದ್ದಾರೆ ಎಂದರು.

ಕೆ.ಸಿ.ಶಿವಪ್ಪ ಅವರು ರಾಜೇಂದ್ರಶ್ರೀಗಳ ಕುರಿತು ರಚಿಸಿರುವ ಕವಿತೆಯನ್ನು ಶಂಕರ್ ದೇವನೂರು ವಾಚಿಸುತ್ತಿದ್ದಂತೆ ನೆರೆದಿದ್ದವರು ಭಾವುಕರಾದರು. ಸಾಮೂಹಿಕವಾಗಿ ಓಂಕಾರ ಧ್ಯಾನ ಹಾಗೂ ಶಿವಧ್ಯಾನದಿಂದ ರಾಜೇಂದ್ರ ಶ್ರೀಗಳಿಗೆ ನೈವೇದ್ಯ ಸಲ್ಲಿಸಲಾಯಿತು. ಗಾಯಕ ಸ್ವರೂಪ್ ರಮೇಶ್ ಭಕ್ತಿ ಗೀತೆ ಗಾಯನ ಎಲ್ಲರ ಮಂತ್ರಮುಗ್ಧಗೊಳಿಸಿತು. ರಾಜ್ಯಮಟ್ಟದ ಸರ್ವೋದಯ ಪ್ರಶಸ್ತಿ ಪುರಸ್ಕೃತ ಪ್ರಸಾದ್ ಹಾಗೂ ರಾಜ್ಯ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕೃತ ನಾಗರಾಜು ಅವರನ್ನು ಗೌರವಿಸಲಾಯಿತು.

ನವಿಲೂರು ಹಾಗೂ ಚುಂಚನಹಳ್ಳಿ ಪಟ್ಟದ ಮಠಾಧ್ಯಕ್ಷ ಚನ್ನಬಸವ ಸ್ವಾಮೀಜಿ ಆಶೀರ್ವಚನ ನೀಡಿದರು. ಶ್ರೀಪತಂಜಲಿ ಯೋಗ ಶಿಕ್ಷಣ ಸಮಿತಿ ಅಧ್ಯಕ್ಷ ಆರ್.ವಿ.ರೇವಣ್ಣ, ಕಾರ್ಯದರ್ಶಿ ಎನ್.ಆರ್.ಗಣೇಶ್‌ಮೂರ್ತಿ, ಪ್ರಧಾನ ಯೋಗ ಶಿಕ್ಷಕ ಪ್ರಕಾಶ್ ಜೆ.ಉಡಿಗಾಲ, ನಂಜನಗೂಡು ಯೋಗ ಫೌಂಡೇಶನ್ ಅಧ್ಯಕ್ಷ ಡಿಗ್ಗೇನಹಳ್ಳಿ ಪ್ರಕಾಶ್ ಉಪಸ್ಥಿತರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಪೊನ್ನಿಯನ್ ಸೆಲ್ವನ್–1(ತ): ಬೆ.10.05ಕ್ಕೆ, ರಾ.7.05ಕ್ಕೆ, ಕಾಂತಾರ (ಕ): ಮ.1.15ಕ್ಕೆ, ಸಂ.4.10ಕ್ಕೆ, ರಾ.10.15ಕ್ಕೆ.
ಸ್ಕ್ರೀನ್ 2	ಗುರುಶಿಷ್ಯರು (ಕ): ಸಂ.4ಕ್ಕೆ, ಗುಡ್‌ಬೈ (ಹಿಂ): ಮ.1.25ಕ್ಕೆ, ರಾ.7.10ಕ್ಕೆ, ವಿಕ್ರಂ ವೇದಾ (ಹಿಂ): ಸಂ.4.15ಕ್ಕೆ, ರೋರ್ಸ್ಚಾಚ್ (ಮ): ರಾ.10.05ಕ್ಕೆ.
ಸ್ಕ್ರೀನ್ 3	ಗುಡ್‌ಬೈ (ಹಿಂ): ಬೆ.10ಕ್ಕೆ, ಸ್ವಾತಿ ಮುತ್ಯಂ (ತೆ): ಮ.12.50ಕ್ಕೆ, ಟಿಕೆಟ್ ಆಫ್ ಪ್ಯಾರಡೈಸ್ (ಇಂ): ಮ.3.15ಕ್ಕೆ, ಸಂ.5.20ಕ್ಕೆ, ದಿ ಗೋಸ್ಟ್ (ತೆ): ರಾ.7.25ಕ್ಕೆ ಗಾಡ್‌ಫಾದರ್ (ತೆ): ರಾ.10.10ಕ್ಕೆ.
ಸ್ಕ್ರೀನ್ 4	ಕಾಂತಾರ (ಕ): ಬೆ.10.10ಕ್ಕೆ, ಮ.1.05ಕ್ಕೆ, ರಾ.7.10ಕ್ಕೆ, ಪೊನ್ನಿಯನ್ ಸೆಲ್ವನ್–1(ತ): ಸಂ.4ಕ್ಕೆ, ತೋತಾಪುರಿ –1(ಕ): ರಾ.10.05ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಕಾಂತಾರ (ಕ): ಬೆ.9.15ಕ್ಕೆ, ಮ.12.15ಕ್ಕೆ, ಮ.3.20ಕ್ಕೆ, ಸಂ.6.25ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 2	ಕಾಂತಾರ (ಕ): ಬೆ.10.10ಕ್ಕೆ, ಮ.1.15ಕ್ಕೆ, ಸಂ.4.20ಕ್ಕೆ, ರಾ.7.25ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 3	ಗಾಡ್‌ಫಾದರ್ (ತೆ): ಬೆ.9.35ಕ್ಕೆ, ಮ.3.45ಕ್ಕೆ, ರಾ.10.20ಕ್ಕೆ, ದಿ ಗೋಸ್ಟ್ (ತೆ): ಮ.12.50ಕ್ಕೆ, ಗುರುಶಿಷ್ಯರು (ಕ): ರಾ.7ಕ್ಕೆ.
ಸ್ಕ್ರೀನ್ 4	ಪೊನ್ನಿಯನ್ ಸೆಲ್ವನ್ –1(ತ): ಬೆ.9.30ಕ್ಕೆ, ಮ.3.35ಕ್ಕೆ, ರಾ.10.10ಕ್ಕೆ, ತೋತಾಪುರಿ –1(ಕ): ಮ.12.45ಕ್ಕೆ, ವಿಕ್ರಮ್ ವೇದಾ (ಹಿಂ): ಸಂ.6.55ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ದಿ ಚೆಕ್ ಮೇಟ್ (ಕ): ಬೆ.10ಕ್ಕೆ, ಗುರುಶಿಷ್ಯರು (ಕ): ಮ.12.50ಕ್ಕೆ, ಗಾಡ್ ಫಾದರ್ (ತೆ): ಸಂ.4ಕ್ಕೆ, ರಾ.9.50ಕ್ಕೆ, ದಿ ಗೋಸ್ಟ್ (ತೆ): ರಾ.7.05ಕ್ಕೆ.
ಸ್ಕ್ರೀನ್ 2	ಕಾಂತಾರ (ಕ): ಬೆ.9.55ಕ್ಕೆ, ಮ.12.55ಕ್ಕೆ, ಮ.3.55ಕ್ಕೆ, ಸಂ.6.55ಕ್ಕೆ, ರಾ.10ಕ್ಕೆ.
ಸ್ಕ್ರೀನ್ 3	ಕಾಂತಾರ (ಕ): ಬೆ.11.40ಕ್ಕೆ, ಮ.3.10ಕ್ಕೆ, ಪೊನ್ನಿಯನ್ ಸೆಲ್ವನ್–1 (ತ): ಸಂ.6.15ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಗುರುಶಿಷ್ಯರು (ಕ): ಬೆ.10.45ಕ್ಕೆ, ದಿ ಗೋಸ್ಟ್ (ತೆ): ಮ.3.45ಕ್ಕೆ, ವಿಕ್ರಮ್ ವೇದಾ (ಹಿಂ): ಸಂ.6.30ಕ್ಕೆ, ಕಾಂತಾರ (ಕ): ರಾ.9.40ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕಾಂತಾರ (ಕ): ಬೆ.8.35ಕ್ಕೆ, ಮ.12.30ಕ್ಕೆ, ಮ.3.40ಕ್ಕೆ, ಸಂ.6.50ಕ್ಕೆ, ರಾ.10ಕ್ಕೆ, ತೋತಾಪುರಿ 1(ಕ): ಬೆ.10.30ಕ್ಕೆ, ಸಂ.4.25ಕ್ಕೆ, ರಾ.7.20ಕ್ಕೆ, ರಾ.10.15ಕ್ಕೆ, ಗುರು ಶಿಷ್ಯರು (ಕ): ಬೆ.10.15ಕ್ಕೆ, ಬ್ರಹ್ಮಾಸ್ತ್ರ (3ಡಿ)(ಹಿಂ): ಬೆ.11.30ಕ್ಕೆ, ಸಂ.6.30ಕ್ಕೆ, ರಾ.10ಕ್ಕೆ, ಪೊನ್ನಿಯನ್ ಸೆಲ್ವನ್–1(ತ): ಬೆ.8ಕ್ಕೆ, ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, ನಾನೇ ವರುವೇನ್ (ತ): ಬೆ.10.50ಕ್ಕೆ, ಮ.1.30ಕ್ಕೆ, ರಾ.7.35ಕ್ಕೆ, ಅವತಾರ್ ರೀ ರಿಲೀಸ್ (ಇಂ): ಮ.3ಕ್ಕೆ, ಡೋಂಟ್ ವರಿ ಡಾರ್ಲಿಂಗ್ (ಇಂ): ಸಂ.4.10ಕ್ಕೆ, ವಿಕ್ರಮ್ ವೇದ (ಹಿಂ): ಬೆ.9ಕ್ಕೆ, ಬೆ.11.45ಕ್ಕೆ, ಮ.3.15ಕ್ಕೆ, ಸಂ.6.45ಕ್ಕೆ, ರಾ.10.15ಕ್ಕೆ, ಚುಪ್ (ಹಿಂ): ಮ.1.25ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಗಾಡ್‌ಫಾದರ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಂತಾರ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಮಿಸ್ ಮಲ್ಲಿಗೆ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಗಾಡ್‌ಫಾದರ್ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕಾಂತಾರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಗುರು ಶಿಷ್ಯರು (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಪುನ್ನಿಯಿನ್ ಸೆಲ್ವನ್ ಭಾಗ–1(ತ)	4 ಪ್ರದರ್ಶನಗಳು
ಸಂಗಂ	
ತೋತಾಪುರಿ (ಕ)	4 ಪ್ರದರ್ಶನಗಳು
ಲಿಡೋ	
ಗಾಡ್‌ಫಾದರ್ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ಗಾಡ್‌ಫಾದರ್ (ಹಿ)	4 ಪ್ರದರ್ಶನಗಳು
ಪ್ರಭಾ	
ಘೋಸ್ಟ್ (ತೆ)	4 ಪ್ರದರ್ಶನಗಳು

ಹುಣಸೂರಲ್ಲಿ ಈದ್ ಮಿಲಾದ್ ಮೆರವಣಿಗೆ



ಹುಣಸೂರು, ಅ.10– ಪ್ರವಾದಿ ಮಹಮದ್ ಪೈಗಂಬರ್ ಹುಟ್ಟುಹಬ್ಬದ ಅಂಗವಾಗಿ ನಗರದ ಪ್ರಮುಖ ಬೀದಿಗಳಲ್ಲಿ ಮುಸ್ಲಿಂ ಸಮುದಾಯದವರು ಮೆರವಣಿಗೆ ನಡೆಸಿದರು. ಮೆರವಣಿಗೆಯಲ್ಲಿ ಮಕ್ಕಳ ದಫ್ ಕಾರ್ಯಕ್ರಮ ಗಮನ ಸೆಳೆಯಿತು.

ಬಿಸಿಲ ನಡುವೆಯೇ ನಗರದ ಶಬ್ಬೀರ್ ನಗರದ ಶಾಹಿ ಮಸೀದಿಯಿಂದ ಮಧ್ಯಾಹ್ನ 2.30ಕ್ಕೆ ಹೊರಟ 8 ಸಾವಿರಕ್ಕೂ ಹೆಚ್ಚು ಮಂದಿ ಭಾಗಿಯಾಗಿದ್ದ ಬೃಹತ್ ಮೆರವಣಿಗೆಯು ಕಲ್ಪತರು ವೃತ್ತ, ಬಜಾರ್ ರಸ್ತೆ, ಜೆಎಲ್ ಬಿರಸ್ತೆ, ಎಸ್.ಜೆ.ರಸ್ತೆ ಮೂಲಕ ಸಂವಿಧಾನ ವೃತ್ತಕ್ಕಾಗಮಿಸಿ ಅಲ್ಲಿಂದ ಈದ್ಗಾ ಮೈದಾನಕ್ಕಾಗಮಿಸಿದರು. ಅಲ್ಲಿ ಸಾಮೂಹಿಕ ಉಪಹಾರ ಸೇವಿಸಿದ ನಂತರ ಪ್ರಾರ್ಥನೆ ಸಲ್ಲಿಸಿದರು.

ಮೆರವಣಿಗೆಯಲ್ಲಿ ಮುಸ್ಲಿಂ ಯುವಕರು ಇಸ್ಲಾಂ ಜಿಂದಾಬಾದ್, ಅಲ್ಲಾ ಓ ಅಕ್ಬರ್ ಹಾಗೂ ಇನ್ನಿತರೆ ಪ್ರವಾದಿ ಮಹಮ್ಮದರ ಪರ ಘೋಷಣೆ ಕೂಗಿದರು. ಮೆರವಣಿಗೆಯಲ್ಲಿ ಸುಮಾರು 25ಕ್ಕೂ ಹೆಚ್ಚು ವಾಹನಗಳಲ್ಲಿ ಟ್ಯಾಬ್ಲೋಗಳು, ನೂರಾರು ದೊಡ್ಡ ದೊಡ್ಡ ಹಸಿರು ಬಣ್ಣದ ಬಾವುಟಗಳು ಹಿಡಿದು ಸಾಗಿ ಬಂದರು. ಪ್ರಮುಖ ವೃತ್ತಗಳಲ್ಲಿ, ರಸ್ತೆ ಇಕ್ಕೆಲಗಳಲ್ಲಿ ನಿಂತಿದ್ದ ಮಹಿಳೆಯರು ಕೈಯಲ್ಲಿ ಹಸಿರು ಬಾವುಟ ಹಿಡಿದು ಮೆರವಣಿಗೆಯಲ್ಲಿ ಆಗಮಿಸಿದ್ದವರಿಗೆ ಶುಭ ಕೋರಿದರು.

ಮುಸ್ಲಿಂ ಸಂಘಟನೆಗಳ ಯುವಕರು ವೃತ್ತಗಳಲ್ಲಿ ಮಜ್ಜಿಗೆ, ಜ್ಯೂಸ್, ಹರೀರಾ ವಿತರಿಸುವ ಮೂಲಕ ಬಿಸಿಲ ಬೇಗೆಯಲ್ಲಿ ಬಳಲಿದ್ದವರ ಧಣಿವಾರಿಸಿದರು. ಮದರಸಾದ ಮಕ್ಕಳಿಂದ ದಫ್, ಮಕ್ಕಾ–ಮದೀನ, ಗುಲಾಬಿ ಹೂವಿನಿಂದ ಅಲಂಕೃತಗೊಳಿಸಿದ್ದ ಸ್ತಬ್ಧಚಿತ್ರಗಳು ಗಮನ ಸೆಳೆದವು. ಈದ್–ಮಿಲಾದ್ ಹಬ್ಬ ಆಚರಣೆ ಸಮಿತಿಯ ಅಧ್ಯಕ್ಷ ಸರ್ದಾರ್ ಅಹಮದ್ ಜಿಪಂ ಮಾಜಿ ಸದಸ್ಯ ಫಜಲುಲ್ಲಾ, ನಗರಸಭೆ ಸದಸ್ಯ ಸೈಯದ್ ಯೂನಸ್, ಪುರಸಭೆ ಮಾಜಿ ಸದಸ್ಯರಾದ ಹಜರತ್ ಜಾನ್, ಮಜಾಜ್ ಅಹಮದ್, ಮಹಮದ್ ಶಫಿ, ಮುಖಂಡರಾದ ವಜೀರ್, ನಜೀರ್ ಅಹಮದ್, ಇನ್ನಿತರ ಮುಖಂಡರು ಮೆರವಣಿಗೆಯನ್ನು ಯಶಸ್ವಿಗೊಳಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಚೇತನ್, ಅಡಿಷನಲ್ ಎಸ್‌ಪಿ ನಂದಿನಿ ಬೆಳಗಿನಿಂದಲೇ ಮೊಕ್ಕಾಂ ಹೂಡಿದ್ದರು. ಹುಣಸೂರು ಉಪ ಅಧೀಕ್ಷಕ ರವಿಪ್ರಸಾದ್ ನೇತೃತ್ವದಲ್ಲಿ ಡಿಎಆರ್ ಡಿವೈಎಸ್‌ಪಿ ಸತೀಶ್, ಇನ್ಸ್‌ಪೆಕ್ಟರ್‌ಗಳಾದ ಶ್ರೀನಿವಾಸ್, ರವಿಕುಮಾರ್, ಚಿಕ್ಕಸ್ವಾಮಿ, ಪಿರಿಯಾಪಟ್ಟಣ, ಸರಗೂರು, ಎಚ್.ಡಿ.ಕೋಟೆ ತಾಲೂಕುಗಳ ಪೊಲೀಸ್, ಗೃಹರಕ್ಷಕದಳದ ಸಿಬ್ಬಂದಿಗಳು ಕೆಎಸ್‌ಆರ್‌ಪಿ ಹಾಗೂ ಡಿಎಆರ್ ತುಕಡಿಗಳು ಬಂದೋಬಸ್ತ್ ಏರ್ಪಡಿಸಲಾಗಿತ್ತು. ಶಾಸಕ ಎಚ್.ಪಿ.ಮಂಜುನಾಥ್, ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್ ಗೌಡ ಪ್ರತ್ಯೇಕವಾಗಿ ಸ್ವಲ್ಪದೂರ ಸಾಗಿ ಬಂದು ಮೆರವಣಿಗೆಗೆ ಶುಭ ಹಾರೈಸಿದರು.

ದಸರಾ ಗೊಂಬೆ ಕೂರಿಸುವ ಸ್ಪರ್ಧಾ ವಿಜೇತರಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಪಾರಿತೋಷಕ ಪ್ರದಾನ



ಮೈಸೂರು, ಅ.10(ಎಸ್‌ಪಿಎನ್)– ಮೈಸೂರಿನ ವಿಶ್ವೇಶ್ವರ ನಗರದ ಮಹರ್ಷಿ ಪಬ್ಲಿಕ್ ಶಾಲಾ ಆವರಣದಲ್ಲಿ ಕೆಎಂಪಿಕೆ ವತಿಯಿಂದ ಆಯೋಜಿಸಿದ್ದ ಮನೆ ಮನೆ ದಸರಾ ಗೊಂಬೆ ಕೂರಿಸುವ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಹೆಸರಿನಲ್ಲಿ ಪಾರಿತೋಷಕ ಮತ್ತು ನಗದು ಬಹುಮಾನವನ್ನು ಮೇಯರ್ ಶಿವಕುಮಾರ್ ಸೋಮವಾರ ಪ್ರದಾನ ಮಾಡಿದರು.

ಬೋಗಾದಿ ನಿವಾಸಿ ರೇವತಿ ರಾಮಸ್ವಾಮಿ (ಪ್ರ) 2 ಸಾವಿರ ರೂ. ನಗದು ಹಾಗೂ ಪ್ರಮಾಣ ಪತ್ರ, ಆಲನಹಳ್ಳಿಯ ಗಿರಿದರ್ಶಿನಿ ಬಡಾವಣೆಯ ನಿವಾಸಿ ಗೀತಾ ಶ್ರೀಹರಿ(ದ್ವಿ) ಸಾವಿರ ರೂ. ನಗದು, ಪ್ರಮಾಣ ಪತ್ರ ಹಾಗೂ ಕುವೆಂಪುನಗರದ ನಿವಾಸಿ ಇಂದ್ರಾಣಿ ಶಂಕರ್ (ತೃ)500 ರೂ. ನಗದು ಮತ್ತು ಪಾರಿತೋಷಕ ಪಡೆದರು. ಉತ್ತಮವಾಗಿ ಜೋಡಣೆ ಮಾಡಿದ್ದ 10 ಮಂದಿ ಸ್ಪರ್ಧಿಗಳಾದ ದಟ್ಟಗಳ್ಳಿಯ ವರ್ಷ, ರಾಣಿ ನಾಗಭೂಷಣ್, ವಿಜಯನಗರದ ಜಯಶ್ರೀ ಶಿವರಾಂ, ರಾಮಕೃಷ್ಣನಗರದ ಕೆ.ಆರ್. ಜ್ಯೋತಿ ಶಿವರಾಂ ಪೇಟೆಯ ಪ್ರಭಾವತಿ, ಬೃಂದಾವನ ಬಡಾವಣೆಯ ತನುಜಾ ಅರವಿಂದ್, ಕುವೆಂಪುನಗರದ ರಾಜೇಶ್ವರಿ ಗಣೇಶನ್, ರಾಮಕೃಷ್ಣನಗರದ ಜಯಲಕ್ಷ್ಮೀ ನರಸಿಂಹ, ಜೆ.ಪಿ.ನಗರದ ಲೀಲಾವತಿ, ಸರಸ್ವತಿಪುರಂನ ಭಾನುಮತಿ ಅವರಿಗೆ ಸಮಧಾನಕರ ಬಹುಮಾನ ನೀಡಿ ಗೌರವಿಸಲಾಯಿತು. ಮನೆ ಮನೆ ದಸರಾ ಗೊಂಬೆ ಕೂರಿಸುವ ಸ್ಪರ್ಧೆಗೆ 150 ಮಂದಿ ತಮ್ಮ ಹೆಸರು ನೋಂದಾಯಿಸಿಕೊಂಡಿದ್ದರು. ಅದರಲ್ಲಿ 96 ಮಂದಿ ಸ್ಪರ್ಧಿಗಳ ಹೆಸರುಗಳನ್ನು ಅಂತಿಮಗೊಳಿಸಲಾಗಿತ್ತು. ಮೂವರು ನಾಲ್ವಡಿ ಕೃಷ್ಣರಾಜ ಒಡೆಯರ್ ಪಾರಿತೋಷಕ ಪಡೆದರು. ಈ ವೇಳೆ ಮೇಲುಕೋಟೆಯ ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಕರ್ನಾಟಕ ರಾಜ್ಯ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ, ಗಿರೀಶ್, ಮಹರ್ಷಿ ವಿದ್ಯಾಸಂಸ್ಥೆಯ ಕಾರ್ಯದರ್ಶಿ ತೇಜಸ್ ಶಂಕರ್, ವಿನಂತ್ ಕಣಗಾಲ್, ಸುಚೀಂದ್ರ, ಚಕ್ರಪಾಣಿ, ನಾಗಶ್ರೀ, ಸದಾಶಿವ, ಮಾಧ್ವ ಇನ್ನಿತರರಿದ್ದರು.

ಮುಲಾಯಂ ಸಿಂಗ್ ಯಾದವ್ ನಿಧನಕ್ಕೆ ಎಸ್‌ಡಿಪಿಐ ಸಂತಾಪ



ಮೈಸೂರು, ಅ.10– ಉತ್ತರಪ್ರದೇಶದಲ್ಲಿ ಮೂರು ಬಾರಿ ಮುಖ್ಯಮಂತ್ರಿಯಾಗಿದ್ದ ಸಮಾಜವಾದಿ ಪಕ್ಷದ ಸಂಸ್ಥಾಪಕ ಮುಲಾಯಂ ಸಿಂಗ್ ಯಾದವ್ ಅವರ ನಿಧನಕ್ಕೆ ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ (ಎಸ್‌ಡಿಪಿಐ) ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ಸಂತಾಪ ವ್ಯಕ್ತಪಡಿಸಿದ್ದಾರೆ. ದೇಶದಲ್ಲಿ ತೃತೀಯ ರಂಗ ಅಸ್ತಿತ್ವಕ್ಕೆ ಬರುವುದರೊಂದಿಗೆ ಅಧಿಕಾರ ನಡೆಸುವಲ್ಲಿ ಮುಲಾಯಂ ಸಿಂಗ್ ಯಾದವ್ ಅವರ ಪಾತ್ರ ಬಹುಮುಖ್ಯವಾಗಿತ್ತು. ಮಂಡಲ್ ವರದಿ ಜಾರಿಯಲ್ಲೂ ಪ್ರಮುಖ ಪಾತ್ರ ನಿರ್ವಹಿಸುವ ಮೂಲಕ ಸಂವಿಧಾನಾತ್ಮಕ ವಾಗಿ ಮೀಸಲಾತಿಯ ದೊಡ್ಡ ಭಾಗವನ್ನು ಹಿಂದುಳಿದ ವರ್ಗಕ್ಕೆ ಒದಗಿಸಿಕೊಟ್ಟರು. ಮಾಯಾವತಿ ಅವರಂತಹ ದಲಿತ ವರ್ಗದವರು ರಾಜಕೀಯವಾಗಿ ಮುಂಚೂಣಿಗೆ ಬರಲು ಮುಲಾಯಂ ಸಿಂಗ್ ಯಾದವ್ ಪ್ರೇರಕವಾಗಿದ್ದರು ಎಂದಿದ್ದಾರೆ.

ಮೈಸೂರು ಮಿತ್ರ 43
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಕಾರ್ಯಪಾಲಕ ಅಭಿಯಂತರವರ ಕಛೇರಿ
ಕನನೀಸ ಮತ್ತು ಒಚ ಮಂಡಳಿ, ನಗರ ವಿಭಾಗ (ಜೆ.ಎನ್.ನರ್ಮ್)
ಜಲಭವನ, 2ನೇ ಮಹಡಿ, ಪಿ–4, 10ನೇ ಮುಖ್ಯ ರಸ್ತೆ, 3ನೇ ಅಡ್ಡರಸ್ತೆ, ಸರಸ್ವತಿಪುರಂ, ಮೈಸೂರು–570009. Mob: 9480813129 ಇ–ಮೇಲ್: kwbmysjnee@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ

ಮೈಸೂರು ತಾಲ್ಲೂಕಿನ ರಮ್ಮನಹಳ್ಳಿ, ಶ್ರೀರಾಂಪುರ ಮತ್ತು ಕಡಕೋಳ ಪಟ್ಟಣ ಪಂಚಾಯಿತಿಗಳಿಗೆ ನೀರು ಸರಬರಾಜು ವ್ಯವಸ್ಥೆ ಕಲ್ಪಿಸಲು ಸರ್ವೆ, ವಿನ್ಯಾಸ ನಕ್ಷೆ ತಯಾರಿಸುವ ಕಾಮಗಾರಿಯ ಅಲ್ಪಾವಧಿ ಟೆಂಡರ್ ಪ್ರತ್ಯೇಕವಾಗಿ ಕರೆಯಲಾಗಿದ್ದು, ಟೆಂಡರ್ ಮೊತ್ತ– ತಲಾ ರೂ. 3,51,750/–. ಖಾಲಿ ಟೆಂಡರ್ ಪುಸ್ತಕದ ಬೆಲೆ ತಲಾ – ರೂ. 2,000/– ಅರ್ಜಿ ಸಲ್ಲಿಸಲು ಕೊನೆಯ ದಿ: 17.10.2022, ಖಾಲಿ ಟೆಂಡರ್ ಪತ್ರಗಳನ್ನು ವಿತರಿಸುವ ದಿ: 17.10.2022 ತನಕ, ಭರ್ತಿ ಮಾಡಿದ ಟೆಂಡರ್ ಸಲ್ಲಿಸಲು ಕೊನೆಯ ದಿ: 18.10.2022, ಇತರೆ ಮಾಹಿತಿ ಕಚೇರಿಯಿಂದ ಪಡೆಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು

13ನೇ ವರ್ಷದ ಸವಿನೆನಪು



ನಾಗೇಂದ್ರ (ಗುಂಡು)
ದುಃಖತಪ್ತರು : ಮರ್ಕಿ ಮಹದೇವ, ಸರೋಜ & ಕುಟುಂಬ ವರ್ಗ ಹಾಗೂ ಸ್ನೇಹಿತರು ಕೆ.ಜಿ.ಕೊಪ್ಪಲು

5ನೇ ವರ್ಷದ ಪುಣ್ಯಸ್ಮರಣೆ

ಜನನ: 22.10.1944



ಮರಣ: 11.10.2017

ಶ್ರೀಮತಿ ನಾಗರತ್ನಮ್ಮ (ವಸಂತ)
ಸದಾ ನಿಮ್ಮ ನೆನಪಿನಲ್ಲಿರುವ ದುಃಖತಪ್ತರು: ಟಿ.ಎನ್.ಶಿವಮಲ್ಲಪ್ಪ ಮತ್ತು ಮಕ್ಕಳು ಹಾಗೂ ಕುಟುಂಬವರ್ಗ

CHANGE OF NAME

I, Kushi. Jain.D, formerly called by the name, Khushi. D., daughter of Deepak Kumar. B., and resident of #370, Ananda Marga, Siddarthanagara, Mysuru-570 011, changed my name as, Kushi. Jain.D, vide an affidavit sworn on 10-10-2022 before Sri S.V. Nagendra, Notary, Mysuru.

Sd/- Kushi. Jain.D.


ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.
ಝಾನ್ಸಿಲಕ್ಷ್ಮೀಬಾಯಿ ರಸ್ತೆ, ಮೈಸೂರು–570005

ಸಂಖ್ಯೆ:ಮೈನಪ್ರಾ:ನಯೋಶಾ:ಭೂಉಬ:ನಯೋ–6: :2022–23 ದಿನಾಂಕ: 03–10–2022

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮ ಯೋಜನಾ ಕಾಯ್ದೆ 1961ರ ಪ್ರಕರಣ 14(ಎ)ರನ್ವಯ

ಮೈಸೂರು ತಾಲ್ಲೋಕು, ಕಸಬಾ ಹೋಬಳಿ, ಮಂಡಕಳ್ಳಿ ಗ್ರಾಮದ ಸರ್ವೆ ನಂ. 76/11ರಲ್ಲಿ 00 ಎಕರೆ 37 ಗುಂಟೆ. ವಿಸ್ತೀರ್ಣದ ಜಮೀನಿನ ಭೂ ಉಪಯೋಗವನ್ನು ಕೆ.ಟಿ.ಸಿ.ಪಿ ಕಾಯ್ದೆ 1961ರ ಪ್ರಕರಣ 14(ಎ)ರನ್ವಯ ವ್ಯವಸಾಯ ವಲಯದಿಂದ ವಾಣಿಜ್ಯ (ಹೋಟೆಲ್/ಲಾಡ್ಜ್) ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡುವಂತೆ ಶ್ರೀ ಅನಿಲ್ ಕುಮಾರ್.ಸಿ ಇವರು ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆಯಿಂದ " **ವಿನ್ಯಾಸ ಹಾಗೂ ಕಟ್ಟಡ ಅಭಿವೃದ್ಧಿ ಕಾಮಗಾರಿಗಳು ನಡೆಯುವ ಸಂಧರ್ಭದಲ್ಲಿ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ ಮತ್ತು ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಲಿನ ಪ್ರದೇಶದ ಅಭಿವೃದ್ಧಿಗೆ ಸಹಾಯಕವಾಗುತ್ತದೆ"** ಎಂದು ಸಾರ್ವಜನಿಕ ಹಿತಾಸಕ್ತಿ ಕುರಿತು ಮನವಿಯಲ್ಲಿ ತಿಳಿಸಿರುತ್ತಾರೆ. ಸದರಿ ಜಮೀನಿನ ಭೂ ಉಪಯೋಗದ ಬದಲಾವಣೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಸಾರ್ವಜನಿಕರು ಈ ಪ್ರಕಟಣೆಯ ಪತ್ರಿಕೆಯಲ್ಲಿ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ನಗರ ಯೋಜಕ ಸದಸ್ಯರು, ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು–570005 ಇವರಿಗೆ ಮುದ್ದಾಂ ಅಥವಾ ನೋಂದಾಯಿತ ಅಂಚೆ ಮೂಲಕ ತಲುಪಿಸಬಹುದಾಗಿದೆ.



ಸಹಿ/– ನಗರ ಯೋಜಕ ಸದಸ್ಯರು, ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

